ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 45 ಪುಟ 16 | ನವೆಂಬರ್ 6,2016 | ರೂ. 10/- | janashakthi.co.in | e-mail : js_weekly@yahoo.com

ದೇಶಭಕ್ತಿ 'ಮುಕ್ತಿಲ್' ಹಫ್ತಾ




60



ಸರ್ವರಿಗೂ ಸಮಪಾಲು–ಸಮಬಾಳು ಸಾಕಾರಗೊಳಿಸೋಣ

ಕಿಸಾನ್ ಸಂಘರ್ಷ ಜಾಥಾ

ನ. 18 ಭೂಮಿಗಾಗಿ ಜೈಲ್ ಭರೋ



ಯಡಿಯೂರಪ್ಪ ದೋಷಮುಕ್ತ?



ನ್ಯಾಯಯುತ ಜಿ.ಎಸ್.ಟಿ. ಬೇಕು : - ಪ್ರೊ. ಐಸಾಕ್

ಆರೆಸ್ಸೆಸ್‌ನ ದುಷ್ಟ ರಾಜಕೀಯ ಮತ್ತು ಸುಳ್ಳುಗಾರಿಕೆ ಬಯಲಾಗುತ್ತದೆ

- ಸಿಪಿಐ(ಎಂ) ಪೊಲಿಟ್‌ಬ್ಯುರೊ

ಹೈದರಾಬಾದಿನಲ್ಲಿ ಇದೀಗ ಮುಕ್ತಾಯ ಗೊಂಡಿರುವ ಆರೆಸ್ಸೆಸ್‌ನ ಅಖಿಲ ಭಾರತ ಕಾರ್ಯಕಾರಿ ಮಂಡಳಿ ಸಭೆ ಸಿಪಿಐ(ಎಂ) ಕೇರಳದಲ್ಲಿ ಆರೆಸ್ಸೆಸ್ ಕಾರ್ಯಕರ್ತರ ವಿರುದ್ಧ ಹಿಂಸಾಚಾರ ನಡೆಸುತ್ತಿದೆಯೆಂಬ ಎಂಬ ತನ್ನ ಸುಳ್ಳು ಆಪಾದನೆಯನ್ನು ಪುನರುಚ್ಚರಿಸಿದೆ. ಸತ್ಯ ತದ್ವಿರುದ್ಧವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ವಿಧಾನಸಭಾ ಚುನಾವಣೆಗಳ ನಂತರ, ಚುನಾವಣಾ ಫಲಿತಾಂಶ ಪ್ರಕಟವಾದ ದಿನವೇ ಆರೆಸ್ಸೆಸ್ ಮುಖ್ಯಮಂತ್ರಿಗಳ ಚುನಾವಣಾ ಕ್ಷೇತ್ರದಲ್ಲಿ ವಿಜಯ ರ‍್ಯಾಲಿಯ ಮೇಲೆ ಬಾಂಬುಗಳನ್ನು ಎಸೆದ ಪರಿಣಾಮವಾಗಿ ಒಬ್ಬ ಸಿಪಿಐ(ಎಂ) ಕಾರ್ಯಕರ್ತರ ಸಾವು ಉಂಟಾಯಿತು, ಹಲವರಿಗೆ ಗಾಯಗಳಾದವು.

ಆರೆಸ್ಸೆಸ್ ತನ್ನ ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ತಂತ್ರದೊಂದಿಗೆ ಇಂತಹ ಹಿಂಸಾಚಾರ ಮತ್ತು ಭಯೋತ್ಪಾದನೆಯ ರಾಜಕೀಯವನ್ನು ಸೇರಿಸಿ ಮುಸ್ಲಿಮ್ ಜನಸಂಖ್ಯೆ ಹೆಚ್ಚಿರುವ ಕೇರಳದ ಉತ್ತರ ಭಾಗದಲ್ಲಿ ತನ್ನ ಹಿಂಬಾಲಕರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ನಡೆಸುತ್ತ ಬಂದಿದೆ. ಇದು ತನ್ನ ಪ್ರಭಾವವನ್ನು ವಿಸ್ತರಿಸುವ ಅದರ ಮಾದರಿ ತಂತ್ರ. **ಸ್ವಾತಂತ್ರ್ಯದ ನಂತರ ದೇಶದಲ್ಲಿ ನಡೆದ ಕೋಮುಗಲಭೆಗಳ ತನಿಖೆ ನಡೆಸಿರುವ ಪ್ರತಿಯೊಂದು ನ್ಯಾಯಾಂಗ ಆಯೋಗ ಕೂಡ ಹಿಂಸಾಚಾರ ಮತ್ತು ಭಯೋತ್ಪಾದನೆಯ ಮೂಲಕ ಕೋಮುಧ್ರುವೀಕರಣ ನಡೆಸುವ ಆರೆಸ್ಸೆಸ್‌ನ ಪಾತ್ರದ ಬಗ್ಗೆ ತೀಕ್ಷ್ಣವಾದ ತೀರ್ಪು ನೀಡಿದೆ ಎಂಬ ಸಂಗತಿಯತ್ತ ಈ ಸಂದರ್ಭದಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.**

> ಸ್ವಾತಂತ್ರ್ಯಾನಂತರದ ಪ್ರತಿಯೊಂದು ಕೋಮುಗಲಭೆಯ ನ್ಯಾಯಾಂಗ ತನಿಖೆಯಲ್ಲಿ ಕಟು ತೀರ್ಪುಗಳನ್ನು ಎದುರಿಸಬೇಕಾಗಿ ಬಂದಿರುವ ಆರೆಸ್ಸೆಸ್/ಬಿಜೆಪಿ ಸುಳ್ಳುಗಳನ್ನು ಮತ್ತೆ-ಮತ್ತೆ ನೂರು ಬಾರಿ ಹೇಳಿ ಅದನ್ನು ಸತ್ಯವೆಂದು ನಂಬಿಸುವ ಹಿಟ್ಲರನ ಬಂಟ ಗೋಬೆಲ್ಸನ ತಂತ್ರಗಳನ್ನು ಸದಾ ಬಳಸಿಕೊಂಡು ಬಂದಿವೆ. ಕೇರಳದಲ್ಲಿ ಸಿಪಿಐ(ಎಂ) ಮೇಲೆ ವ್ಯಾಪಕ ಪ್ರಮಾಣದಲ್ಲಿ ಹಲ್ಲೆಗಳನ್ನು ನಡೆಸುತ್ತಲೇ ತಾನೇ ಹಿಂಸಾಚಾರಕ್ಕೆ ಬಲಿಯಾಗಿದ್ದೇನೆ ಎಂದು ಬಿಂಬಿಸುವ ಮಹಾ ಸುಳ್ಳುಗಾರಿಕೆ ಅವರದ್ದು.

ಪ್ರಸಕ್ತ ಎಲ್‌ಡಿಎಫ್ ಸರಕಾರದ ಈ ಅಲ್ಪಾವಧಿಯಲ್ಲೇ ಆರೆಸ್ಸೆಸ್ ನಡೆಸಿರುವ ಅಮಾನುಷ ಹಲ್ಲೆಗಳಲ್ಲಿ ಐವರು ಸಿಪಿಐ(ಎಂ) ಕಾರ್ಯಕರ್ತರ ಕೊಲೆಯಾಗಿದೆ, 300ಕ್ಕೂ ಹೆಚ್ಚು ಸದಸ್ಯರು ಗಾಯಗೊಂಡಿದ್ದಾರೆ. ಪಕ್ಷದ 35 ಕಚೇರಿಗಳು ಮತ್ತು ಮತ್ತು ಪಕ್ಷದ ಸದಸ್ಯರ 80 ಮನೆಗಳ ಮೇಲೆ ದಾಳಿ ನಡೆದಿದೆ, ಅವಕ್ಕೆ ನಷ್ಟ ಉಂಟುಮಾಡಲಾಗಿದೆ. ಈ ನಿರಂತರ ಮತ್ತು ಯೋಜಿತ ದಾಳಿಗಳ ಇಂತಹ ಪ್ರಮಾಣವೇ ಆರೆಸ್ಸೆಸ್ ನಡೆಸಿರುವ ಘಾತುಕತನವನ್ನು ಬಯಲಿಗೆಳೆಯುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಆರೆಸ್ಸೆಸ್/ಬಿಜೆಪಿ ಸುಳ್ಳುಗಳನ್ನು ಮತ್ತೆ-ಮತ್ತೆ ನೂರು ಬಾರಿ ಹೇಳಿ ಅದನ್ನು ಸತ್ಯವೆಂದು ನಂಬಿಸುವ ಹಿಟ್ಲರನ ಬಂಟ ಗೋಬೆಲ್ಸನ ತಂತ್ರಗಳನ್ನು ಸದಾ ಬಳಸಿಕೊಂಡು ಬಂದಿವೆ. ಕೇರಳದಲ್ಲಿ ಸಿಪಿಐ(ಎಂ) ಮೇಲೆ ವ್ಯಾಪಕ ಪ್ರಮಾಣದಲ್ಲಿ ಹಲ್ಲೆಗಳನ್ನು ನಡೆಸುತ್ತಲೇ ತಾವೇ ಹಿಂಸಾಚಾರಕ್ಕೆ ಬಲಿಯಾಗಿದ್ದೇವೆ ಎಂದು ಬಿಂಬಿಸುವ ಸುಳ್ಳುಗಾರಿಕೆ ಅವರದ್ದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವರ್ಣಿಸಿದೆ.

ಬಾಧಿತ ಪ್ರದೇಶಗಳಲ್ಲಿ ಶಾಂತಿ ಮತ್ತು ಸೌಹಾರ್ದವನ್ನು ಮತ್ತೆ ನೆಲೆಗೊಳಿಸುವ ಬಗ್ಗೆ ಮಾತಾಡೋಣ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಆರೆಸ್ಸೆಸ್‌ಗೆ ಕರೆ ನೀಡಿದ್ದಾರೆ. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಲು ಆರೆಸ್ಸೆಸ್ ನಿರಾಕರಿಸಿದೆ. ರಾಜ್ಯ ವಿಧಾನಸಭೆಯಲ್ಲಿ ಮುಖ್ಯಮಂತ್ರಿಗಳು ಈ ಕುರಿತು ಸರ್ವಪಕ್ಷ ಸಭೆ ಕರೆಯುವುದಾಗಿ ಪ್ರಕಟಿಸಿದರು. ಇತ್ತೀಚಿನ ಮಾಹಿತಿಯ ಪ್ರಕಾರ ಕಣ್ಣೂರಿನ ಜಿಲ್ಲಾ ಕಲೆಕ್ಟರ್ ಕರೆದ ಸರ್ವಪಕ್ಷ ಸಭೆಯಲ್ಲಿ ಆರೆಸ್ಸೆಸ್ ಹಾಜರಾಗಿಲ್ಲ. ಆದ್ದರಿಂದ ಸಿಪಿಐ(ಎಂ) ವಿರುದ್ಧ ತನ್ನ ಹಿಂಸಾಚಾರವನ್ನು ಮುಂದುವರೆಸುವ ದೃಢನಿರ್ಧಾರವನ್ನು ಆರೆಸ್ಸೆಸ್ ಮಾಡಿದಂತಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆರೆಸ್ಸೆಸ್‌ನ ಈ ಮೋಸವನ್ನು ಬಯಲಿಗೆಳೆಯಲಾಗುವುದು, ಕೇರಳ ಮತ್ತು ಭಾರತದ ಜನತೆ ಬಿಜೆಪಿಯ ಇಂತಹ ದುಷ್ಟ ರಾಜಕೀಯವನ್ನು ಸೋಲಿಸುವ ದೃಢನಿರ್ಧಾರ ಮಾಡಿದ್ದಾರೆ ಎಂದು ಎಚ್ಚರಿಸಿದೆ.

ಝಾರ್ಖಂಡ್‌ನಲ್ಲಿ ಆದಿವಾಸಿ ಪ್ರತಿಭಟನಾಕಾರರ ಮೇಲೆ ಗೋಲೀಬಾರ್:

ಬಿಜೆಪಿ ಸರಕಾರ ರಾಜ್ಯನಿರ್ಮಾಣದ ಉದ್ದೇಶವನ್ನೇ ಹುಸಿಯಾಗಿಸುತ್ತಿದೆ-ಸಿಪಿಐ(ಎಂ) ಪೊಲಿಟ್‌ಬ್ಯುರೊ

ಝಾರ್ಖಂಡ್‌ನ ಖುಂಟಿ ಜಿಲ್ಲೆಯ ಸೆಕೋ ಎಂಬ ಹಳ್ಳಿಯಲ್ಲಿ ಅಕ್ಟೋಬರ್ 22ರಂದು ಬುಡಕಟ್ಟು ಜನಗಳ ಮೇಲೆ ಪೊಲೀಸ್ ಗೋಳೀಬಾರಿಗೆ ಒಬ್ಬ ಬುಡಕಟ್ಟು ಮುಖಂಡ, ಅಬ್ರಹಾಂ ಮುಂಡಾ ಬಲಿಯಾಗಿದ್ದಾರೆ ಮತ್ತು ಇತರ ಐವರಿಗೆ ತೀವ್ರ ಗಾಯಗಳಾಗಿವೆ. ಈ ಗ್ರಾಮದ ಬುಡಕಟ್ಟು ಜನಗಳ ಒಂದು ಗುಂಪು ರಾಜ್ಯದ ರಾಜಧಾನಿ ರಾಂಚಿಯಲ್ಲಿ 'ಆದಿವಾಸಿ ಅಧಿಕಾರ್ ಮಂಚ್' ಸೇರಿದಂತೆ 42 ಆದಿವಾಸಿ ಸಂಘಟನೆಗಳ ಜಂಟಿ ವೇದಿಕೆ 'ಆದಿವಾಸಿ ಸಂಘರ್ಷ ಮೋರ್ಚಾ' ಕರೆ ನೀಡಿದ್ದ ಪ್ರತಿಭಟನಾ ರ‍್ಯಾಲಿಯಲ್ಲಿ ಭಾಗವಹಿಸಲು ಹೊರಟಿದ್ದರು. ರಾಜ್ಯದ ಬಿಜೆಪಿ ಸರಕಾರ ಬುಡಕಟ್ಟು ಜನಗಳ ಪಾರಂಪರಿಕ ಮತ್ತು ಕಾನೂನುಬದ್ಧ ಭೂಮಿ ಲಭ್ಯತೆಯನ್ನು ವಂಚಿಸಲು ಛೋಟಾನಾಗ್ಪುರ್ ಮತ್ತು ಸಂತಾಲ್ ಪರಗಣಾ ಗೇಣಿ ಕಾಯ್ದೆಗೆ ತಿದ್ದುಪಡಿ ತರಲು ಹೊರಡಿಸಿರುವ ಸುಗ್ರೀವಾಜ್ಞೆ ವಿರುದ್ಧ ಅಕ್ಟೋಬರ್ 24ರಂದು ರ‍್ಯಾಲಿಯನ್ನು ಯೋಜಿಸಲಾಗಿತ್ತು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಗೋಲೀಬಾರನ್ನು ಬಲವಾಗಿ ಖಂಡಿಸಿದೆ.

ಕಳೆದ ಒಂದು ತಿಂಗಳಲ್ಲಿ ಝಾರ್ಖಂಡ್‌ನ ಬಿಜೆಪಿ ಸರಕಾರ ರಾಜ್ಯದ ಹಲವೆಡೆಗಳಲ್ಲಿ ಇಂತಹ ಪ್ರತಿಭಟನೆಗಳ ಮೇಲೆ ಗುಂಡು ಹಾರಿಸಿದೆ. ಈ ಅವಧಿಯಲ್ಲಿ ಪೊಲೀಸ್ ಕಸ್ಟಡಿಯಲ್ಲಿ ಎರಡು ಸಾವುಗಳು ಸಂಭವಿಸಿವೆ.

ಈ ಹಿಂದೆ ಬಿಹಾರ ರಾಜ್ಯದ ಭಾಗವಾಗಿದ್ದ ಝಾರ್ಖಂಡ್ ರಾಜ್ಯವನ್ನು ನಿರ್ಮಿಸಿದ್ದೇ ಬುಡಕಟ್ಟು ಜನಗಳ ಹಿತಾಸಕ್ತಿಗಳ ರಕ್ಷಣೆಯ ಹೆಸರಲ್ಲಿ. ತದ್ವಿರುದ್ಧವಾಗಿ ಬಿಜೆಪಿ ಸರಕಾರ ಸತತವಾಗಿ ಬುಡಕಟ್ಟು ಜನಗಳು ಮತ್ತು ಇತರ ದುರ್ಬಲ ವಿಭಾಗಗಳಿಗೆ ಬೆದರಿಕೆ ಒಡ್ಡುತ್ತಲೇ ಇದೆ, ಈ ಮೂಲಕ ಈ ರಾಜ್ಯದ ನಿರ್ಮಾಣದ ಉದ್ದೇಶವನ್ನೇ ನಿರಾಕರಿಸುತ್ತಿದೆ ಎಂದು ಪೊಲಿಟ್‌ಬ್ಯುರೊ ಟೀಕಿಸಿದೆ.

ಈಗ ಸ್ಥಾಪಿತಗೊಂಡಿರುವ ಸಂಸದೀಯ ಆಚರಣೆಗಳ ಪ್ರಕಾರ ಬುಡಕಟ್ಟು ಜನಗಳನ್ನು ಸಾಯಿಸುವುದು ಕೇವಲ ರಾಜ್ಯ ಕಾನೂನು ವ್ಯವಸ್ಥೆಯ ಪ್ರಶ್ನೆಯೆಂದು ಪರಿಗಣಿಸಲಾಗುತ್ತಿಲ್ಲ. ಕೇಂದ್ರ ಸರಕಾರ ಬುಡಕಟ್ಟು ಜನಗಳ ಹಕ್ಕುಗಳು ಲಭ್ಯವಿರುವಂತೆ ಮಾಡಲು ಮಧ್ಯಪ್ರವೇಶಿಸಬೇಕು, ಇದರಲ್ಲಿ ಪ್ರತಿಭಟನೆಯ ಪ್ರಜಾಪ್ರಭುತ್ವ ಹಕ್ಕು ಮತ್ತು ಭೂಮಿ ಮತ್ತು ಅರಣ್ಯ ಉತ್ಪನ್ನಗಳ ಮೇಲೆ ಅವರ ಹಕ್ಕುಗಳ ಇನ್ನಷ್ಟು ಅತಿಕ್ರಮಣ ಸಲ್ಲದು ಎಂಬುದೂ ಸೇರಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ನೆನಪಿಸಿದೆ.

ಎಡಪಕ್ಷಗಳ ರಾಜ್ಯ ಮುಖಂಡರ ಭೇಟಿ

ಸಿಪಿಐ(ಎಂ) ಝಾರ್ಖಂಡ್ ರಾಜ್ಯ ಕಾರ್ಯದರ್ಶಿ ಜಿ.ಕೆ.ಬಕ್ಷಿ, ಇತರ ರಾಜ್ಯ ಮುಖಂಡರುಗಳಾದ ರಾಜೇಂದ್ರ ಸಿಂಗ್ ಮುಂಡ, ಸುಧೀರ್ ದಾಸ್ ಮತ್ತು ಬೀರೇಂದ್ರ ಕುಮಾರ್, ಸಿಪಿಐ(ಎಂಎಲ್)ನ ರಾಜ್ಯ ಕಾರ್ಯದರ್ಶಿ ಜನಾರ್ಧನ ಪ್ರಸಾದ್ ಮತ್ತು ಎಸ್‌ಯುಸಿಐ(ಐ)ನ ಸಿದ್ದೇಶ್ವರ ಸಿಂಗ್ ರವರಿದ್ದ ಎಡಪಕ್ಷಗಳ ತಂಡ ಗೋಲೀಬಾರ್ ನಡೆದ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರು ಮತ್ತು ಅಬ್ರಹಾಂ ಮುಂಡರ ಕುಟುಂಬದ ಸದಸ್ಯರು ಮತ್ತು ಇತರ ಸಂತ್ರಸ್ತ ಕುಟುಂಬಗಳ ಸದಸ್ಯರನ್ನು ಭೇಟಿ ಮಾಡಿದರು.

ಪೋಲೀಸರು ಯಾವುದೇ ಮುನ್ಸೂಚನೆಯಿಲ್ಲದೆ ಗೋಲೀಬಾರ್ ನಡೆಸಿದರು ಎಂದು ಗ್ರಾಮಸ್ಥರು ತಂಡಕ್ಕೆ ಹೇಳಿದ್ದಾರೆ. ಬುಡಕಟ್ಟು ಜನಗಳು ಪೋಲೀಸರೊಂದಿಗೆ ಘರ್ಷಣೆಗಿಳಿದಿದ್ದರಿಂದ ಗೋಲೀಬಾರ್ ಮಾಡಬೇಕಾಯಿತು ಎನ್ನುವ ಪೋಲೀಸರ ಕತೆ ಕಪೋಲ ಕಲ್ಪಿತ , ಸಂಪೂರ್ಣ ಸುಳ್ಳು ಎಂದು ಅವರು ಹೇಳಿದ್ದಾರೆ. ಆದ್ದರಿಂದ ಈ ಗೋಲೀಬಾರ್‌ಗೆ ಕಾರಣಕರ್ತರಾದವರ ಮೇಲೆ ಸೆಕ್ಷನ್302ರ ಅಡಿಯಲ್ಲಿ ಕೊಲೆ ಯೋಜನೆಯ ಎಫ್‌ಐಆರ್ ಹಾಕಬೇಕು, ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಎಡಪಕ್ಷಗಳ ಮುಖಂಡರು ಆಗ್ರಹಿಸಿದ್ದಾರೆ.

ಬುಡಕಟ್ಟು ಜನಗಳು ರಾಂಚಿಯಲ್ಲಿ ರ‍್ಯಾಲಿಯಲ್ಲಿ ಶಾಂತಿಯುತವಾಗಿ ಭಾಗವಹಿಸುವುದನ್ನು ತಡೆಯುವ ಪ್ರಯತ್ನ ಜನಗಳ ಮೂಲಭೂತ ಸಂವಿಧಾನಿಕ ಹಕ್ಕನ್ನು ಮೊಟಕುಮಾಡುವ ಪ್ರಯತ್ನ ಎಂದು ಅವರು ಹೇಳಿದ್ದಾರೆ.

ಅಕ್ಟೋಬರ್ 24ರಂದು ಝಾರ್ಖಂಡ್ ರಾಜ್ಯಾದ್ಯಂತ ಬಿಜೆಪಿ ರಾಜ್ಯಸರಕಾರದ ಈ ಬುಡಕಟ್ಟು ಜನ-ವಿರೋಧಿ ಸುಗ್ರೀವಾಜ್ಞೆಯ ವಿರುದ್ಧ ಬಂದ್ ನಡೆದಿದೆ(ಪುಟ 14 ನೋಡಿ)

ಮಾತೆಂದರೆ ಇದು

ಭಾರತದ ಜನತೆ
ದೇವಸ್ಥಾನಗಳಿಗೆ
ಸಾಲುಗಟ್ಟಿ ನಿಲ್ಲುವಂತೆ
ಗ್ರಂಥಾಲಯಗಳಿಗೆ
ಯಾವಾಗ ಸಾಲುಗಟ್ಟಿ
ನಿಲ್ಲುತ್ತಾರೋ
ಅಂದು ಭಾರತ ಜಗತ್ತಿನ ಗುರುವಾಗಲಿದೆ

-ಡಾ. ಬಿ.ಆರ್. ಅಂಬೇಡ್ಕರ್

ಕಾನೂನನ್ನು ಎತ್ತಿ ಹಿಡಿಯಬೇಕಾದ ಮುಖ್ಯಮಂತ್ರಿಗಳಿಂದ ಬಲವಂತದ ವಸೂಲಿಗೆ ಸೌಲಭ್ಯ-ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಚಿತ್ರ ತಯಾರಕರಿಗೆ ಬೆದರಿಕೆ ಕುರಿತಂತೆ ಕಾನೂನು ಕ್ರಮವನ್ನು ಎತ್ತಿ ಹಿಡಿಯುವ ಬದಲು ಸಶಸ್ತ್ರ ಪಡೆಗಳ ಕಲ್ಯಾಣದ ಹೆಸರಿನಲ್ಲಿ 5 ಕೋಟಿರೂ. ಬಲವಂತದ ವಸೂಲಿಗೆ ಸೌಕರ್ಯ ಕಲ್ಪಿಸಿಕೊಡುವ ಪಾತ್ರ ವಹಿಸಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಇದು ಸಶಸ್ತ್ರ ಪಡೆಗಳ ಧೈರ್ಯ, ಶೌರ್ಯಕ್ಕೆ ಮತ್ತು ಅವು ಭಾರತದ ರಕ್ಷಣೆಯಲ್ಲಿ ವಹಿಸಿರುವ ಪಾತ್ರಕ್ಕೆ ಮಾಡಿರುವ ಘೋರ ಅಪಮಾನ ಎಂದು ಅದು ಹೇಳಿದೆ.

ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಪಾಕಿಸ್ತಾನಿ ಕಲಾವಿದರೊಬ್ಬರು ನಟಿಸಿರುವ ಬಾಲಿವುಡ್ ಚಿತ್ರದ ಬಿಡುಗಡೆ ಮಾಡಲು ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುವ ಮಹಾರಾಷ್ಟ್ರ ನವನಿರ್ಮಾಣ ಸೇನೆ(ಎಂಎನ್‌ಎಸ್) ಮತ್ತು ಆ ಚಿತ್ರದ ತಯಾರಕರ ನಡುವೆ ಒಂದು 'ರಾಜಿಸೂತ್ರ' ತಂದು, ಚಿತ್ರದ ತಯಾರಕರು ಸಶಸ್ತ್ರ ಪಡೆಗಳ ಕಲ್ಯಾಣ ನಿಧಿಗೆ 5ಕೋಟಿ ರೂ. ನೀಡಬೇಕು ಮತ್ತಿತರ ಎಂಎನ್‌ಎಸ್ 'ಶರತ್ತು'ಗಳ ಮೇಲೆ ಚಿತ್ರದ ಬಿಡುಗಡೆಗೆ ಅನುಕೂಲವಾಗುವಂತೆ ಮಾಡಿದ್ದಾರೆ, ಸಶಸ್ತ್ರ ಪಡೆಗಳ ನಡುವೆಯೂ ಈ ಬಗ್ಗೆ ಆಕ್ರೋಶ ಉಂಟಾಗಿದೆ ಎಂಬ ಸುದ್ದಿಯ ಸಂದರ್ಭದಲ್ಲಿ ಸಿಪಿಐ(ಎಂ) ಈ ಟೀಕೆ ಮಾಡಿದೆ.

ಮುಖ್ಯಮಂತ್ರಿಗಳು ಸಂವಿಧಾನವನ್ನು ಎತ್ತಿ ಹಿಡಿಯಲು ಮತ್ತು ಕಾನೂನು ಪ್ರಕಾರ ಆಳ್ವಿಕೆಗೆ ಪ್ರತಿಜ್ಞಾಬದ್ಧರಾಗಿದ್ದಾರೆ. ಆದರೆ ಈ ಕೃತ್ಯದ ಮೂಲಕ ಅವರು ಸಂವಿಧಾನ ವಿಧಿಸಿರುವ ಕರ್ತವ್ಯಕ್ಕೆ ನಕಾರ ಹೇಳಿದ್ದಾರೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಕತ್ತು ಹಿಸುಕುವ ಭಯದ ವಾತಾವರಣವನ್ನು ಸೃಷ್ಟಿಸುತ್ತದೆ ಕೂಡ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಮುಖ್ಯಮಂತ್ರಿಗಳು ಮತ್ತು ಮಹಾರಾಷ್ಟ್ರ ಸರಕಾರ ಕಾನೂನಿನ ಆಳ್ವಿಕೆಯನ್ನು ಎತ್ತಿ ಹಿಡಿಯಲು ಪ್ರಭುತ್ವದ ಸಾಧನಗಳ ಬಳಕೆ ಮಾಡಬೇಕು. ಅದರಲ್ಲಿ ವಿಫಲವಾಗಿರುವುದನ್ನು ಕೇಂದ್ರ ಸರಕಾರ ಸಂವಿಧಾನಿಕ ಅಂಶಗಳಿಗೆ ಅನುಗುಣವಾಗಿ ಗಂಭೀರವಾಗಿ ಪರಿಗಣಿಸಬೇಕು ಎಂದು ಸಿಪಿಐ(ಎಂ) ಹೇಳಿದೆ.



ಜೆಎನ್‌ಯುನಲ್ಲಿ ಎಬಿವಿಪಿಯ ಹೊಸ ದಾಂಧಲೆ ಮತ್ತೆ ವಿದ್ಯಾರ್ಥಿಗಳು ಚಳುವಳಿಯ ಕಣದಲ್ಲಿ

ದಿಲ್ಲಿಯಲ್ಲಿ ಅಕ್ಟೋಬರ್ 24 ರಂದು ನೂರಾರು ವಿದ್ಯಾರ್ಥಿಗಳು ಮಂಡಿ ಹೌಸ್‌ನಿಂದ ಜಂತರ್‌ಮಂತರ್‌ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಅವರು ಜವಹರಲಾಲ್ ನೆಹರು ವಿಶ್ವವಿದ್ಯಾಲಯ(ಜೆಎನ್‌ಯು)ದ ವಿದ್ಯಾರ್ಥಿಯೊಬ್ಬ ಕಾಣೆಯಾಗಿ 10 ದಿನಗಳಾದರೂ ವಿವಿ ಆಡಳಿತ ನಿಷ್ಕ್ರಿಯವಾಗಿರುವುದರ ವಿರುದ್ಧ ಪ್ರತಿಭಟಿಸುತ್ತಿದ್ದರು.

ಅಕ್ಟೋಬರ್ 14ರಂದು ಜೆಎನ್‌ಯುನಲ್ಲಿ ಬಯೋ ಟೆಕ್ನಾಲಜಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿ ನಜೀಬ್ ಅಹ್ಮದ್ ಮೇಲೆ ಹಾಸ್ಟೆಲ್‌ನಲ್ಲಿ ಕೆಲವು ಎಬಿವಿಪಿ ಹುಡುಗರ ಹಲ್ಲೆಯ ನಂತರ ಕಾಣೆಯಾಗಿದ್ದಾನೆ. ಜೆಎನ್‌ಯು ಆಡಳಿತ ಆರಂಭದಿಂದಲೇ ಈ ವಿಷಯದಲ್ಲಿ ಪಕ್ಷಪಾತದಿಂದ ವರ್ತಿಸುತ್ತಿದೆ, ಆತನ ಮೇಲೆಯೇ ಎಲ್ಲ ತಪ್ಪುಗಳನು ಹೊರಿಸಿ, ಆತನ ಮೇಲೆ ಹಿಂಸಾಚರ ನಡೆದೇ ಇಲ್ಲ ಎಂಬಂತೆ ವರ್ತಿಸುತ್ತಿದ ಎಂಬುದು ವಿದ್ಯಾರ್ಥಿಗಳ ಆರೋಪ.


ವಿದ್ಯಾರ್ಥಿಗಳ ನಡುವಿನ ಘರ್ಷಣೆಯ ನಂತರ ಆತ ಏಕೆ ಕಾಣೆಯಾಗಿದ್ದಾನೆ ಎಂಬ ಬಗ್ಗೆ ಜೆಎನ್‌ಯು ಪುಟ 7 ನೋಡಿ

‘ಸರ್ವರಿಗೂ ಸಮಬಾಳು, ಸಮಪಾಲು’ ಸಾಕಾರಗೊಳಿಸೋಣ!

ಸಂಪಾದಕೀಯ

“ಕನ್ನಡನಾಡು ಇಷ್ಟು ದಿವಸ ಬಡತನದ ಬೀಡಾಗಿತ್ತು. ಸಂಪತ್ತುಗಳಿದ್ದರೂ ಜನತೆಗೆ ಅವು ದೊರೆಯುತ್ತಿರಲಿಲ್ಲ. ಹೋರಾಟಗಳ ಪರಂಪರೆ ಇದ್ದರೂ ಪಾಳೆಯಗಾರರ ಮತ್ತು ಪ್ರತಿಗಾಮಿಗಳ ಪ್ರಭಾವ ನಮ್ಮ ಪ್ರಾಂತದಲ್ಲಿ ಬಲವಾಗಿದೆ. ನಮ್ಮ ನೆರೆ ಹೊರೆಯ ಪ್ರಾಂತದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳು ಪ್ರಬಲವಾಗಿ ಬೆಳೆದಿವೆ. ಆದರೆ ಕರ್ನಾಟಕದ ಜನತೆಯ ಪ್ರಜಾಪ್ರಭುತ್ವ ಶಕ್ತಿಗಳ ಬಲಹೀನತೆಯಿಂದ ಪ್ರತಿಗಾಮಿಗಳು ಸಮಾಜ ಜೀವನದಲ್ಲಿ ಮೆರೆಯುತ್ತಿದ್ದಾರೆ. ಜನತೆ-ಬಡತನ, ದಾರಿದ್ರ್ಯ, ನಿರುದ್ಯೋಗ, ಅರೆಉಪವಾಸಗಳಲ್ಲಿ ನರಳುತ್ತಿದೆ. ಜನತೆಯ ಸಾಮೂಹಿಕ ಸಂಘಟನೆ ಶಕ್ತಿಗಳನ್ನು ಬಲಪಡಿಸಿ ಕರ್ನಾಟಕದಲ್ಲಿ ಪ್ರಗತಿಗಾಮಿ ಶಕ್ತಿಗಳು ಬೆಳೆಯುವಂತೆ ಮಾಡುವುದು ನಮ್ಮ ಕರ್ತವ್ಯ ಪ್ರಗತಿಗಾಮಿ ಭಾವನೆ ಆರ್ಥಿಕ, ರಾಜಕೀಯ ಸಾಂಸ್ಕೃತಿಕ, ಸಾಮಾಜಿಕ; ಸಾಮಾಜಿಕ ರಂಗಗಳಲ್ಲೆಲ್ಲ ಬೆಳೆಯುವಂತೆ ಮಾಡಲು ನಾವು ದುಡಿಯಬೇಕು.”

ನವೆಂಬರ್ 1, 1956ರಂದು ಕರ್ನಾಟಕ ಉದಯವಾದಾಗ, **“ಇಂದು ಕನ್ನಡಿಗರ ಕನಸು ನನಸಾಗಲಿದೆ. ಇದೊಂದು ಅತ್ಯಂತ ಮಹತ್ವದ ಚಾರಿತ್ರಿಕ ದಿನ”** ಎಂದು ಸ್ವಾಗತಿಸುತ್ತಲೇ ಕಮ್ಯುನಿಸ್ಟ್ ಪಾರ್ಟಿಯ ಹೇಳಿಕೆ ತನ್ನ ಮತ್ತು ‘ಪ್ರಗತಿಗಾಮಿ ಶಕ್ತಿಗಳ’ ಮುಂದಿರುವ ಸವಾಲು ಹಾಗೂ ಕರ್ತವ್ಯಗಳ ಬಗ್ಗೆ ಹೀಗೆಂದಿತ್ತು. ಆ ವಾರದ ‘ಜನಶಕ್ತಿ’ಯ ಸಂಚಿಕೆಯಲ್ಲಿ ಈ ಭಾಗವನ್ನೊಳಗೊಂಡ ದೀರ್ಘ ಹೇಳಿಕೆ ಪ್ರಕಟವಾಗಿತ್ತು. ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದ ಕರ್ನಾಟಕದ ಜನತೆ ಪ್ರಜಾಸತ್ತಾತ್ಮಕ, ಜಾತ್ಯತೀತ ‘ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು’ ಇರುವ ಸಮೃದ್ಧ ಕರ್ನಾಟಕದ ಕನಸು ಕಂಡಿದ್ದರು. ಕರ್ನಾಟಕ ಏಕೀಕರಣದ 60 ವರ್ಷಗಳ ನಂತರ ಅಂದು ಕಮ್ಯುನಿಸ್ಟ್ ಪಾರ್ಟಿ ಗುರುತಿಸಿದ್ದ ಸಮಸ್ಯೆಗಳು-ಸವಾಲುಗಳು ಪರಿಹಾರವಾಗಿವೆಯೇ? ಪರಿಸ್ಥಿತಿ ಬದಲಾಗಿದೆಯೇ? ಕನ್ನಡಿಗರ ಕನಸು ನನಸಾಗಿದೆಯೇ? ಎಂಬ ಪ್ರಶ್ನೆಗಳಿಗೆ ಉತ್ತರ ‘ಇಲ್ಲ’ ಎಂಬುದೇ ಎಂದು ದುಃಖದಿಂದ ಹೇಳಬೇಕಾಗಿದೆ. 60 ವರ್ಷಗಳ ಹಿಂದೆ ‘ಪ್ರಗತಿಗಾಮಿ ಶಕ್ತಿಗಳ’ ಮುಂದಿದ್ದ ಸವಾಲು ಹಾಗೂ ಕರ್ತವ್ಯಗಳು ಸಹ ಹಾಗೆನೇ ಇವೆಯೇನೋ ಅನಿಸುತ್ತದೆ.



ಪ್ರೊ. ಟಿ. ಆರ್. ಚಂದ್ರಶೇಖರ್ ಅವರು ‘ಕರ್ನಾಟಕ 60-ಅಭಿವೃದ್ಧಿಯ ನಡೆ’ ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಕಳೆದ 60 ವರ್ಷಗಳ ಅಭಿವೃದ್ಧಿ ಮಾನವ ಅಭಿವೃದ್ಧಿಯ ದೃಷ್ಟಿಕೋಣದಿಂದ ಎಷ್ಟು ಟೊಳ್ಳು, ಎಂದು ವಿವರವಾಗಿ ನಿರೂಪಿಸಿದ್ದಾರೆ. ಪ್ರಾದೇಶಿಕ ಅಸಮಾನತೆಯತ್ತ ವಿಶೇಷ ಗಮನ ಸೆಳೆಯುತ್ತಾ, ಗ್ರಾಮ-ನಗರ, ಪುರುಷ-ಮಹಿಳೆಯರ ನಡುವಿನ ಅಸಮಾನತೆಗಳೂ ಇನ್ನೂ ‘ವಿಜೃಂಭಿಸುತ್ತಿವೆ’ ಎಂದು ತೋರಿಸುತ್ತಾರೆ. ಇಪ್ಪತ್ತೆಂಟು ಆಡಳಿತಗಳಲ್ಲಿ ಹರಿ ಹಂಚಿಹೋಗಿದ್ದ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಹೋಗಲಾಡಿಸುವುದು ಏಕಿಕರಣದ ಆಶಯಗಳಲ್ಲಿ ಪ್ರಮುಖವಾದ್ದು ಆಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅದು ಆಗಿಲ್ಲ ಎಂಬುದು ಸ್ಪಷ್ಟ. 1980ರ ದಶಕದ ವರೆಗೆ ಇದ್ದ ಸ್ವಲ್ಪ ಮಟ್ಟಿನ ಬೆಳವಣಿಗೆ ಸಹ, 1990ರ ನಂತರದ ‘ಖಾಸಗೀಕರಣದ ಮಹಾಮಾರಿ’ಯಿಂದ ಹಳ್ಳ ಹಿಡಿದಿರುವುದನ್ನು ಅವರು ಗುರುತಿಸುತ್ತಾರೆ. ಕೃಷಿಯ ತೀವ್ರ ಕುಸಿತ, ಆ ಕುಸಿತದಿಂದ ನಷ್ಟವಾದ ಜೀವನೋಪಾಯ-ಉದ್ಯೋಗಗಳನ್ನು ತುಂಬಲಾರದ ಕೈಗಾರಿಕಾ-ಉದ್ಯಮಗಳ ಸ್ಥಗಿತತೆ ಒಟ್ಟಾರೆ ಅಭಿವೃದ್ಧಿಯ ನಡೆಯ ವೈಫಲ್ಯವನ್ನು ತೋರಿಸುತ್ತದೆ.

ಆದರೆ ಕಳೆದ 60 ವರ್ಷಗಳ ವೈಫಲ್ಯಗಳಲ್ಲಿ ಪ್ರಮುಖವಾದ್ದು ‘ಸರ್ವಜನಾಂಗಗಳ ಶಾಂತಿಯ ತೋಟ’ದ ಧ್ವಂಸ. ಸೌಹಾರ್ದ ಪರಂಪರೆ ಪ್ರಬಲವಾಗಿದ್ದ ದೇಶ ವಿಭಜನೆಯ ಕೋಮುವಾದಿ ವಿಷ ಒಂದಿನಿತೂ ತಟ್ಟದ ರಾಜ್ಯಗಳಲ್ಲಿ ಒಂದಾಗಿದ್ದ ಕರ್ನಾಟಕ, ಅದರಲ್ಲೂ ಪ್ರಗತಿಪರ ಚಳುವಳಿಯ ಭದ್ರಕೋಟೆಯಾಗಿದ್ದ ಕರಾವಳಿ ಕರ್ನಾಟಕ, 1990ರ ದಶಕದ ನಂತರ ‘ಕೋಮುವಾದದ ಪ್ರಯೋಗಶಾಲೆ’ಯಾಗಿದ್ದು ಈ ವೈಫಲ್ಯಕ್ಕೆ ಹಿಡಿದ ಕನ್ನಡಿ. ರಾಮಜನ್ಮಭೂಮಿ ಚಳುವಳಿಯಿಂದ ಆರಂಭಿಸಿ; ಕೋಮು ಘರ್ಷಣೆ, ಕೋಮು ದಂಗೆಗಳು, ಅನೈತಿಕ ಪೋಲಿಸ್ ಗಿರಿ, ಲವ್-ಜೆಹಾದ್, ಮತಾಂತರ-ಘರ್ ವಾಪಸಿ, ಭಗವದ್ಗೀತಾ ಅಭಿಯಾನ, ಗೋರಕ್ಷಣೆ, ಟಿಪ್ಪು-ವಿರುದ್ಧ ಅಪಪ್ರಚಾರ, ಬುರ್ಖಾ-ಕೇಸರಿ ಶಾಲು – ಮುಂತಾದ ಹತ್ತು ಹಲವು ಕುತಂತ್ರಗಳನ್ನು ಬಳಸಿ ಕೋಮುವಾದೀಕರಣದ ಭೀಕರ ವಿಸ್ತರಣೆ ಆಗಿದೆ. ಅದು ಎಲ್ಲಾ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದ ಡಾ. ಅನಂತಮೂರ್ತಿ ಅವರ ಸಾವನ್ನು ಸಂಭ್ರಮಿಸುವ, ಡಾ. ಕಲಬುರ್ಗಿ ಅವರ ಹತ್ಯೆಯವರೆಗೆ ತಲುಪಿದೆ. ಬಹುಸಂಖ್ಯಾತ ಕೋಮುವಾದಕ್ಕೆ ಪ್ರತಿಕ್ರಿಯೆಯಾಗಿ ಹಾಗು ಇತರ ಕಾರಣಗಳಿಂದ ಅಲ್ಪಸಂಖ್ಯಾತ ಕೋಮುವಾದ ಸಹ ಅಪಾಯಕಾರಿ ಮಟ್ಟಕ್ಕೆ ಬೆಳೆದು ನಿಂತಿದೆ.

ಆದರೆ ಡಾ. ಕಲಬುರ್ಗಿ ಹತ್ಯೆ ಒಂದು ತಿರುಗು ಬಿಂದಾಗಿ, ರಾಜ್ಯದ ಹಾಗೂ ರಾಷ್ಟ್ರೀಯ ಮಟ್ಟದಲ್ಲೂ ಡಾ. ಕಲಬುರ್ಗಿ ಹತ್ಯೆ ನಂತರ ಕೋಮುವಾದಿ ಶಕ್ತಿಗಳಿಗೆ ಬಂದ ತೀಕ್ಷ್ಣ ಸತತ ಪ್ರತಿಕ್ರಿಯೆ/ಪ್ರತಿರೋಧ ಈ ನಿಟ್ಟಿನಲ್ಲಿ ಅತ್ಯಂತ ಸಕಾರಾತ್ಮಕ ಬೆಳವಣಿಗೆ. ಈಗಾಗಲೇ ಇದ್ದ ಸಮುದಾಯದಂತಹ ಸಾಂಸ್ಕೃತಿಕ ಸಂಘಟನೆಗಳ ಜತೆ ಜನನುಡಿ, ಡಾ. ಕಲಬುರ್ಗಿ ಹತ್ಯಾ ವಿರೋಧಿ ಸಮಿತಿ, ಜನಸಾಹಿತ್ಯ ಸಂಘಟನೆ ಮುಂತಾದ ಹೊಸ ವಿಶಾಲ ಕೋಮುವಾದಿ-ವಿರೋಧಿ ವೇದಿಕೆಗಳೂ ಹೊಮ್ಮಿರುವುದು ಆಶಾದಾಯಕ ಬೆಳವಣಿಗೆ. ಈ ಎಲ್ಲವನ್ನೂ ಕ್ರೋಡೀಕರಿಸಿ ದುಡಿಯುವ ಜನತೆಯಲ್ಲೂ ಕೋಮುವಾದೀಕರಣದ ವಿರುದ್ಧ ದುಡಿಯುವ ಜನರ ಸಂಘಟನೆಗಳ ಮೂಲಕವೇ ವ್ಯಾಪಕವಾಗಿ ಹೋರಾಡುವ ಅಗತ್ಯ ಇದೆ. ಇಂತಹ ನಡೆಯೊಂದನ್ನು ಕರಾವಳಿ ಕರ್ನಾಟಕದಲ್ಲಿ ಹಮ್ಮಿಕೊಳ್ಳಲಾಗಿದೆ. ಕರಾವಳಿ ಜಿಲ್ಲೆಗಳಲ್ಲಿ ಡಿಸೆಂಬರ್ ಮೊದಲ ವಾರದಿಂದ ಜನವರಿ ಮೊದಲ ವಾರದ ವರೆಗೆ ಕೋಮುವಾದದ ವಿರುದ್ಧ ಯೋಜಿಸಿರುವ ಅಧ್ಯಯನ ಶಿಬಿರಗಳು, ಸಮಾವೇಶ, ವ್ಯಾಪಕ ಜಾಥಾ, ಬೃಹತ್ ರ್‍ಯಾಲಿಗಳೂ ನಡೆಯಲಿವೆ. ಇದು ಕರ್ನಾಟಕದ 60ನೇ ರಾಜ್ಯೋತ್ಸವವನ್ನು ಪ್ರಗತಿಪರ ಶಕ್ತಿಗಳು ಆಚರಿಸುವ ಸೂಕ್ತ ವಿಧಾನ.

ಜಾತಿ ತಾರತಮ್ಯ-ಅಸ್ಪೃಶ್ಯತೆಯ ಪಿಡುಗು 60 ವರ್ಷಗಳ ನಂತರ ಇನ್ನೂ ತೊಲಗಲಿಲ್ಲ ಎಂಬುದು ಇನ್ನೊಂದು ಪ್ರಮುಖ ವೈಫಲ್ಯ. 70-80 ರ ದಶಕದಲ್ಲಿ ಮಹಾರಾಷ್ಟ್ರದ ನಂತರ ದೇಶದಲ್ಲೇ ಅತ್ಯಂತ ಪ್ರಬಲ ದಲಿತ ಚಳುವಳಿ ಇದ್ದಾಗ್ಯೂ ಕಂಬಾಲಪಲ್ಲಿಗಳು, ಮರುಕುಂಬಿಗಳು ಮರುಕಳಿಸುತ್ತಲೇ ಇವೆ. ಅಸ್ಪೃಶ್ಯತೆ ತನ್ನ ನೂರಾರು ಅವತಾರಗಳಲ್ಲಿ ತಾಂಡವವಾಡುತ್ತಿದೆ. 70-80ರ ದಶಕದಲ್ಲಿ ಹಾವನೂರು ವರದಿಯ ಜಾರಿ ಮೂಲಕ ಹಿಂದುಳಿದ ಜಾತಿಗಳಿಗೆ ಮೀಸಲಾತಿಯ ಜಾರಿಯೊಂದಿಗೆ ಕರ್ನಾಟಕ ಮುನ್ನಡೆ ಸಾಧಿಸಿದೆ. ಆದರೆ ಕೋಮುವಾದಿಕರಣದಿಂದ ಉಚ್ಚ ಜಾತಿಗಳಲ್ಲಿ ಜಾತಿವಾದಿ-ಮನುವಾದಿ ಧೋರಣೆ ಗಟ್ಟಿಗೊಳ್ಳುತ್ತಿದೆ. ಜಾತಿ ತಾರತಮ್ಯ-ಅಸ್ಪೃಶ್ಯತೆಗಳ ವಿರುದ್ಧ ಸಹ ಕಳೆದ ಕೆಲವು ವರ್ಷಗಳಿಂದ ಹಲವು ಐಕ್ಯ ಚಳುವಳಿಗಳು ಬೆಳೆದು ಬಂದಿವೆ. ದಲಿತರ ಸಮಸ್ಯೆಗಳ ಬಗ್ಗೆ ಸಮಗ್ರ ಆರ್ಥಿಕ-ಸಾಮಾಜಿಕ-ರಾಜಕೀಯ ದೃಷ್ಟಿಕೋಣ ಹೊಂದಿರುವ ದಲಿತ ಹಕ್ಕುಗಳ ಸಮಿತಿಯ ಸ್ಥಾಪನೆ ದಲಿತ ಚಳುವಳಿಗೆ ಹೊಸ ಚಾಲನೆ ಕೊಟ್ಟಿದೆ. ಕೋಮುವಾದಿ-ವಿರೋಧಿ ಚಳುವಳಿಗಳು ಸಹ ಜಾತಿ ತಾರತಮ್ಯ-ಅಸ್ಪೃಶ್ಯತೆಯ ಪ್ರಶ್ನೆಗಳನ್ನು ಎತ್ತಿಕೊಂಡಿವೆ. ಮಡೆಸ್ನಾನ-ಪಂಕ್ತಿಭೇಧದ ವಿರುದ್ಧ ರಾಜ್ಯವ್ಯಾಪಿ ಚಳುವಳಿಯಿಂದ ಆರಂಭಿಸಿ ಇತ್ತೀಚಿನ ಚಲೋ ಉಡುಪಿಯ ವರೆಗೆ ದಲಿತ, ಎಡಪಂಥೀಯ, ಪ್ರಗತಿಪರ, ಸೆಕ್ಯುಲರ್-ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯ ಚಳುವಳಿಗಳು ಮುನ್ನಡೆ ಸಾಧಿಸಿರುವುದು ಸಹ ಕರ್ನಾಟಕದ 60ನೇ ರಾಜ್ಯೋತ್ಸವದ ಸಂದರ್ಭದಲ್ಲಿ ಆಶಾದಾಯಕ ಬೆಳವಣಿಗೆ.

ಕೋಮುವಾದೀಕರಣದ ಭೀಕರ ವಿಸ್ತರಣೆ ಸ್ವತಂತ್ರ ಬೆಳವಣಿಗೆ ಅಲ್ಲ, 1990ರ ನಂತರ ರಾಷ್ಟ್ರೀಯ-ಅಂತರ್ರಾಷ್ಟ್ರೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಜಾಗತಿಕರಣದ ನೀತಿಗಳನ್ನು ಹೇರಲು ಆಳುವ ವರ್ಗಗಳ ಆಕ್ರಾಮಕ ನಡೆಯ ಭಾಗ. ಜಾಗತಿಕರಣದ ನೀತಿಗಳು ಕೃಷಿ-ಕೈಗಾರಿಕೆ ಮತ್ತಿತರ ಆರ್ಥಿಕ ಚಟುವಟಿಕೆಯಲ್ಲಿ ಮಾಡಿರುವ ಆಳವಾದ ಪರಿಣಾಮಗಳಿಂದ, ಇಂತಹ ನೀತಿಗಳ ವಿರುದ್ಧ ತೀವ್ರ ಪ್ರತಿರೋಧ ಒಡ್ಡಿದ್ದಾಗ್ಯೂ ರೈತರ, ಕೃಷಿಕೂಲಿಕಾರರ, ಕಾರ್ಮಿಕರ ಚಳುವಳಿ/ಸಂಘಟನೆಗಳಿಗೂ ತೀವ್ರ ಹಿನ್ನಡೆ ಉಂಟಾಗಿವೆ. ಜಾಗತೀಕರಣ ಹುಟ್ಟಿ ಹಾಕಿದ ಹುಸಿ ಕನಸುಗಳ ಗುಳ್ಳೆ ಒಡೆಯುತ್ತಿದ್ದಂತೆ, ಅದರ ದುಷ್ಪರಿಣಾಮಗಳ ಭೀಕರತೆ ಅರಿವಾಗುತ್ತಿದ್ದಂತೆ ದುಡಿಯುವ ಜನರ ಚಳುವಳಿ ಪುನಃ ಚೇತರಿಸಿಕೊಂಡು ಮುಂದುವರೆಯುತ್ತಿದೆ. ರೈತರು, ಕೂಲಿಕಾರರು, ಕಾರ್ಮಿಕರ ಮೇಲೆ ಜಾಗತೀಕರಣದ ದುಷ್ಪರಿಣಾಮಗಳು ಏನು? ಅದರ ವಿರುದ್ಧ ಪ್ರತಿರೋಧ ಒಡ್ಡಲು ಯಾವ ಸಂಘಟನಾತ್ಮಕ ತಂತ್ರ ಬಳಸಬಹುದು ಎಂಬ ಬಗ್ಗೆ ಚಿಂತನ ಮಂಥನ ನಡೆಸಿದ ಎಡ ಚಳುವಳಿ ಹೊಸ ಅರಿವಿನೊಂದಿಗೆ ಮುನ್ನುಗ್ಗುತ್ತಿದೆ.

ಇದೇ ಸೆಪ್ಟೆಂಬರ್ 2ರಂದು ಕರ್ನಾಟಕದ 50 ಲಕ್ಷ (ಕಳೆದ 60 ವರ್ಷದಲ್ಲೇ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ) ಕಾರ್ಮಿಕರು ಭಾಗವಹಿಸಿದ್ದು ಇದಕ್ಕೆ ಒಂದು ಉದಾಹರಣೆ. ಕೆಲವು ತಿಂಗಳುಗಳ ಹಿಂದೆ ಕೇಂದ್ರ ಸರಕಾರವನ್ನು ನಡುಗಿಸಿದ ಮಹಿಳಾ ಗಾರ್ಮೆಂಟ್ಸ್ ಕಾರ್ಮಿಕರ ಚಾರಿತ್ರಿಕ ಚಳುವಳಿ ಸಹ ಗಮನಾರ್ಹ. ಕನಿಷ್ಟ ಕೂಲಿ ಮತ್ತು ಇತರ ಹಕ್ಕೊತ್ತಾಯಗಳಿಗೆ ಸತತವಾಗಿ ಮುಷ್ಕರ ಮುಂತಾದ ಕಾರ್ಮಿಕರ ಹೋರಾಟಗಳು ನಡೆಯುತ್ತಲೇ ಇವೆ. ಜಾಗತೀಕರಣದ ಪರಿಣಾಮವಾಗಿ ಬದಲಾಗಿರುವ ಕಾರ್ಮಿಕರನ್ನು ಸಮರಶೀಲ ಸಂಘಟನೆಗಳಲ್ಲಿ ಸಂಘಟಿಸುವತ್ತ ಕಾರ್ಮಿಕ ಚಳುವಳಿ ಹೊಸ ಅರಿವು ತಂತ್ರಗಳೊಂದಿಗೆ ಮುನ್ನಡೆಯುತ್ತಿರುವುದು ಕರ್ನಾಟಕದ 60ನೇ ರಾಜ್ಯೋತ್ಸವದ ಸಂದರ್ಭದಲ್ಲಿ ಭರವಸೆ ಹುಟ್ಟಿಸುವಂತಹುದು.

ಜಾಗತೀಕರಣದ ನೀತಿಗಳು ರೈತ ಕೃಷಿಯ ನಾಶ ಮಾಡಿರುವುದು, ಗ್ರಾಮೀಣ ಕರ್ನಾಟಕದ ಬದುಕನ್ನೇ ಬುಡಮೇಲು ಮಾಡಿರುವುದು, ಅವರ ಭೂಮಿಯನ್ನು ಕಿತ್ತುಕೊಂಡು ಅವರನ್ನು ಕೃಷಿ ಮತ್ತು ಹಳ್ಳಿಗಳಿಂದ ಹೊರದಬ್ಬಿ, ಅವರು ನಗರದ ಇನ್ನಷ್ಟು ಅಭದ್ರ ಜೀವನದತ್ತ ಗುಳೆ ಹೋಗುವಂತೆ ಮಾಡಿರುವುದು ಕಳೆದ 6 ದಶಕಗಳಲ್ಲೇ ಅತ್ಯಂತ ದುಃಖದಾಯಕ ವಿದ್ಯಮಾನ. ಇದರ ವಿರುದ್ಧವೂ ಕಳೆದ ಕೆಲವು ವರ್ಷಗಳಿಂದ ಐಕ್ಯ ಚಳುವಳಿಗಳು ಬೆಳೆದು ಬರುತ್ತಿವೆ. ರೈತ, ಕೃಷಿ ಕೂಲಿಕಾರರ, ಕಾರ್ಮಿಕರ ಸಂಘಗಳು ನವೆಂಬರ್ 18ರಂದು ‘ಭೂಮಿಗಾಗಿ ಜೈಲು ಭರೋ’ ಚಳುವಳಿ, ಗ್ರಾಮೀಣ ಭೂಸಂಬಂಧಗಳಲ್ಲಿ ತೀವ್ರ ಬದಲಾವಣೆಯತ್ತ ದೀರ್ಘ ಮುನ್ನಡೆಗೆ ಮುನ್ನುಡಿ ಬರೆಯಲು ಸಿದ್ದವಾಗುತ್ತಿರುವುದು ಕರ್ನಾಟಕದ 60ನೇ ರಾಜ್ಯೋತ್ಸವದ ಸಂದರ್ಭದಲ್ಲಿ ಸ್ಫೂರ್ತಿದಾಯಕ.

ಇವೆಲ್ಲವುಗಳ ಮೂಲಕ ಕಮ್ಯುನಿಸ್ಟ್ ಪಕ್ಷ 60 ವರ್ಷಗಳ ಹಿಂದೆ, **“ಪ್ರಗತಿಗಾಮಿ ಭಾವನೆ ಆರ್ಥಿಕ, ರಾಜಕೀಯ ಸಾಂಸ್ಕೃತಿಕ, ಸಾಮಾಜಿಕ; ಸಾಮಾಜಿಕ ರಂಗಗಳಲ್ಲೆಲ್ಲ ಬೆಳೆಯುವಂತೆ ಮಾಡಲು’** ದುಡಿಯುತ್ತೇವೆ ಎಂದು ಮಾಡಿದ್ದ ಪ್ರತಿಜ್ಞೆಯನ್ನು 60ನೇ ರಾಜ್ಯೋತ್ಸವದ ಈ ಸಂದರ್ಭದಲ್ಲಿ ಪುನರುಚ್ಚರಿಸೋಣ. ‘ಸರ್ವರಿಗೂ ಸಮಬಾಳು, ಸಮಪಾಲು’ ಎಂಬ ಕನಸನ್ನು ಸಾಕಾರಗೊಳಿಸೋಣ. ■

ನಾಳಿನ ಕಾರ್ಯಕ್ರಮಗಳು :

ನವೆಂಬರ್ 6 : ‘ಅಕ್ಟೋಬರ್ ಕ್ರಾಂತಿ’ಯ ಶತಮಾನೋತ್ಸವ ಕಾರ್ಯಕ್ರದ ಉದ್ಘಾಟನೆ, ಸಚಿವಾಲಯ ಕ್ಲಬ್, ಬೆಂಗಳೂರು.

ನವೆಂಬರ್ 10-11 : ಬಿಸಿಯೂಟ ನೌಕರರಿಂದ ಪಾರ್ಲಿಮೆಂಟ್ ಚಲೋ

ನವೆಂಬರ್ 12 : ಕೋಮುವಾದದ ವಿರುದ್ಧ ಎಡಪಕ್ಷಗಳ ಸಮಾವೇಶ, ಬೆಂಗಳೂರು.

ನವೆಂಬರ್ 18 : ಭೂಮಿ ವಸತಿ, ನಿವೇಶನಕ್ಕಾಗಿ ರೈತ, ಕಾರ್ಮಿಕ, ಕೂಲಿಕಾರ, ದಲಿತರಿಂದ ರಾಜ್ಯಾದ್ಯಂತ ‘ಜೈಲ್ ಭರೋ’ ಚಳುವಳಿ.

ನವೆಂಬರ್ 26-30 : ಸಿಐಟಿಯು ಅಖಿಲ ಭಾರತ ಸಮ್ಮೇಳನ, ಪುರಿ, ಒಡಿಸ್ಸಾ

ಡಿಸೆಂಬರ್ 19-21 : ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆ(ಎಐಎಡಬ್ಲ್ಯೂಯು), 6ನೇ ಕರ್ನಾಟಕ ರಾಜ್ಯ ಸಮ್ಮೇಳನ, ಕುಂದಾಪುರ, ಉಡುಪಿ.

@SitaramYechury

ಈ ವರ್ಷದ ಒಟ್ಟು ರಾಷ್ಟ್ರೀಯ ಉಳಿತಾಯ ಜಿ.ಡಿ.ಪಿ.ಯ ಶೇ. 30.2. ಇದು 2003ರ ನಂತರ ಅತಿ ಕಡಿಮೆ ಪ್ರಮಾಣದ್ದು. ಈ ವರ್ಷದ ಬ್ಯಾಂಕು ಡೆಪಾಸಿಟ್ ಹೆಚ್ಚಳ ಕಳೆದ 53 ವರ್ಷಗಳಲ್ಲೇ ಅತಿ ಕಡಿಮೆ #ಅಚ್ಛೇ_ದಿನ್

– ಸೀತಾರಾಂ ಯೆಚುರಿ

ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಶುಲ್ಕ ನಿಗದಿ ಜವಾಬ್ದಾರಿ: ಎಸ್‌ಎಫ್‌ಐ ವಿರೋಧ

ಕರ್ನಾಟಕ ರಾಜ್ಯ ಸರಕಾರವು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಶುಲ್ಕ ನಿಗದಿಯ ಜವಾಬ್ದಾರಿ ನೀಡಿರುವುದನ್ನು ವಿರೋಧಿಸಿ ಹಾಗೂ ಹೊಸದಾಗಿ ರಚಿಸಿರುವ ಕರಡು ಶುಲ್ಕ ನೀತಿಯನ್ನು ಹಿಂಪಡೆದು ಶಿಕ್ಷಣದ ಸಾರ್ವತ್ರೀಕರಣಕ್ಕೆ ಮುಂದಾಗಲು ಆಗ್ರಹಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿಯ ಎದುರು ಅಕ್ಟೋಬರ್ 26ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.



ಪ್ರತಿಭಟನೆಯನ್ನು ಉದ್ದೇಶಿ ಮಾತನಾಡಿದ ಪೋಷಕರ ಸಂಘದ ಮುಲ್ಲಹಳ್ಳಿ ಸೂರಿ ಮಾತನಾಡಿ ಅಕ್ಟೋಬರ್ 05 ರಂದು ರಾಜ್ಯ ಸರಕಾರ ಕರ್ನಾಟಕ ರಾಜ್ಯ ಪತ್ರ ಸಂ: 1153 ರಲ್ಲಿ ಅನುದಾನ ರಹಿತ ಶಾಲಾ ಶುಲ್ಕದ ಕರಡನ್ನು ರಚಿಸಿ ನ್ಯಾಯಾಲಯಕ್ಕೆ ಸಲ್ಲಿಸಲು ಮುಂದಾಗಿದೆ. ಶುಲ್ಕದ ಕುರಿತು ಸಾರ್ವಜನಿಕರಿಂದ ಆಕ್ಷೇಪಣೆ ಸಲ್ಲಿಸಲು ನೆಪ ಮಾತ್ರಕ್ಕೆ ಕೇಳಿದಂತೆ ಕಾಣುತ್ತದೆ. ಕರಡು ಶುಲ್ಕದ ಕುರಿತು ಸರಿಯಾದ ಮಾಹಿತಿ ಪೋಷಕರಿಗೆ ನೀಡಿಲ್ಲ, ಆಕ್ಷೇಪಣೆಯನ್ನು ಕೇವಲ ಶಿಕ್ಷಣ ಇಲಾಖೆಯ ಮುಖ್ಯ ಕಾರ್ಯದರ್ಶಿಗಳಿಗೆ ಮಾತ್ರ ಸಲ್ಲಿಸುವಂತೆ ಕೇಳಿದೆ. ಇದನ್ನು ತಾಲ್ಲೂಕು ಮಟ್ಟಕ್ಕೆ ವಿಸ್ತರಿಸಬೇಕು ಎಂದು ಎಸ್.ಎಫ್.ಐ ಆಗ್ರಹ ಪಡಿಸುತ್ತಿದೆ. ಎಂದರು.

ಮುಂದುವರೆದು ಮಾತನಾಡಿದ ಅವರು ಆಕ್ಷೇಪಣೆ ಸಲ್ಲಿಸಲು ಕೇವಲ ಒಂದು ತಿಂಗಳ ಗಡುವು ನೀಡಿದೆ. ಈ ಒಂದು ತಿಂಗಳಲ್ಲಿ ಬರೋಬ್ಬರಿ 12 ದಿನಗಳು ರಜೆ ಇದೆ. ಹಾಗಾಗಿ ದಿನಾಂಕವನ್ನು ವಿಸ್ತರಣೆ ಮಾಡಿ ಸಾರ್ವಜನಿಕರಿಂದ ಇನ್ನಷ್ಟು ಚರ್ಚೆ, ಸಂವಾದ ಕಾರ್ಯಕ್ರಮಗಳನ್ನು ನಡೆಸಲು ಅವಕಾಶ ಕೊಡಬೇಕು ಎಂದು ಆಗ್ರಹಿಸಿದರು.

ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ "1995 ಮತ್ತು 1999 ರ ಶಿಕ್ಷಣ ಕಾಯ್ದೆಗಳು ಖಾಸಗಿ ಶಿಕ್ಷಣ ಸಂಸ್ಥೆಗಳು ಪಡೆಯಬಹುದಾದ ಶುಲ್ಕಗಳ ಮಾನದಂಡದ ಬಗ್ಗೆ ತಿಳಿಸಿದ್ದವು. ಕಾಯ್ದೆಯನ್ನು ಜಾರಿ ಮಾಡದೇ ಶುಲ್ಕದ ವಿಚಾರವಾಗಿ ಮತ್ತೆ ರಾಜ್ಯ ಸರಕಾರ ಹೊಸ ಕರಡನ್ನು ರಚಿಸಿ ಶುಲ್ಕ ನಿಗದಿ ಮಾಡುವ ಸಂಪೂರ್ಣ ಜವಬ್ದಾರಿಯನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನೀಡಲು ರಾಜ್ಯ ಸರಕಾರ ಮುಂದಾಗಿರುವುದು ಶಿಕ್ಷಣ ವಿರೋಧಿ ಕ್ರಮವಾಗಿದೆ.

ಶಿಕ್ಷಣ ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಹಕ್ಕಾಗಿದೆ, ಭಾರತ ಸಂವಿಧಾನದ ಅನುಚ್ಛೇದ 41, 45 ಮತ್ತು 46 ರಲ್ಲಿ ರಾಜ್ಯನೀತಿ ನಿರ್ದೇಶಕ ತತ್ವಗಳ ರೂಪದಲ್ಲಿ ಭಾರತ ಸಂವಿಧಾನದ ವ್ಯಾಪ್ತಿಯಲ್ಲಿಯೇ ಶಿಕ್ಷಣವನ್ನು ಸೇರಿಸಿರುವುದು ಈ ದಿಕ್ಕಿನಲ್ಲಿ ಮಹತ್ವದ ಕ್ರಮವಾಗಿದೆ. ಆದರೂ ಈ ನಿಬಂಧನೆಗಳು ರಾಜ್ಯದ ಆರ್ಥಿಕ ಸಾಮರ್ಥ್ಯಗಳಿಗೆ ಸೀಮಿತವಾಗಿದ್ದರಿಂದ, ಮಿಶಿನರಿಗಳು ಮತ್ತು ಲೋಕೋಪಕಾರಿ ಸಂಸ್ಥೆಗಳು ಶಿಕ್ಷಣವನ್ನು ನೀಡುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವು.

ರಾಜ್ಯ ಸರಕಾರ ನಿಗದಿ ಮಾಡಲು ಹೊರಟಿರುವ ಶುಲ್ಕವು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ರತ್ನಗಂಬಳಿ ಹಾಸಲು ಹೊರಟಿದೆ. ಡೊನೇಷನ್ ಪಡೆಯಬಹುದು, ಕಟ್ಟಡದ ಬಾಡಿಗೆ, ಸೇವೆಗಳು, ಸಾಲದ ಬಡ್ಡಿ, ದೂರವಾಣಿಯ ಬಿಲ್, ಇತ್ಯಾದಿ ಶುಲ್ಕಗಳನ್ನು ಪೋಷಕರಿಂದಲೇ ಸಂಗ್ರಹಿಸಬೇಕು ಎಂದು ಹೇಳುತ್ತಿದೆ. ಇದು ಸಮಾನರ ನಡುವೆ ತಾರತಮ್ಯ ಮತ್ತು ಅಸಮಾನತೆಯನ್ನು ಪ್ರತಿಬಿಂಬಿಸುವುದಷ್ಟೆ ಅಲ್ಲ ಅದನ್ನು ವೃದ್ಧಿಸುತ್ತದೆ ಕೂಡ. ಇದು ಭಾರತದ ಸಂವಿಧಾನ ಮೂಲಭೂತ ತತ್ವಗಳಿಗೆ ವಿರುದ್ಧವಾಗಿದೆ. ಹಾಗಾಗಿ ಸರಕಾರ ಕೂಡಲೇ ತನ್ನ ಈ ನಿರ್ಧಾರದಿಂದ ಹಿಂದೆ ಸರಿದು ವಿದ್ಯಾರ್ಥಿಗಳ- ಪೋಷಕರ ಹಿತ ಕಾಪಾಡುವ ರೀತಿಯಲ್ಲಿರುವ 1995, 1999ರ ಕಾಯ್ದೆಯನ್ನು ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಎ.ಆರ್.ಡಿ.ಯು ನ ಶ್ರೀನಿವಾಸ ಮಾತನಾಡಿ "ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು (2016) ಮಾಡರ್ನ್ ಡೆಂಟಲ್ ಕಾಲೇಜ್ ಅಂಡ್ ರೀಸರ್ಚ್ ಸೆಂಟರ್ ವಿ. ಮಧ್ಯಪ್ರದೇಶ ಸರಕಾರದ ಪ್ರಕರಣದಲ್ಲಿ ತೀರ್ಮ ನೀಡಿ "ಶುಲ್ಕ ರಚನೆಯನ್ನು ರೂಪಿಸಲು ಮೂರು ನಿಯತಾಂಕಗಳನ್ನು ವಿಧಿಸಿದೆ. ಸಂಸ್ಥೆಯಲ್ಲಿ ಲಭ್ಯವಿರುವ ಮೂಲಸೌಕರ್ಯಗಳು ಮತ್ತು ಸೌಲಭ್ಯಗಳು, ಹೂಡಲಾದ ಬಂಡವಾಳ, ಶಿಕ್ಷಕರು ಮತ್ತು ಇತರ ಸಿಬ್ಬಂದಿಗೆ ನೀಡಲಾಗುತ್ತಿರುವ ವೇತನಗಳು ಸಂಸ್ಥೆಯ ವಿಸ್ತರಣೆ ಮತ್ತು/ಅಥವಾ ಸುಧಾರಣೆಗಾಗಿ ಇರುವ ಭಾವಿ ಯೋಜನೆಗಳು, ಸಂಸ್ಥೆಯು ಲಾಭಗಳಿಕೆಯ ಉದ್ದೇಶವನ್ನು ಹೊಂದಿರಬಾರದು ಮತ್ತು ಕ್ಯಾಪಿಟೇಷನ್ ಶುಲ್ಕವನ್ನು ವಸೂಲಿ ಮಾಡಬಾರದು ಎಂದು ನ್ಯಾಯಾಲಯವು ಸ್ಪಷ್ಟವಾಗಿ ನಿರ್ದೇಶಿಸಿದೆ". ಇದನ್ನು ಎತ್ತಿ ಹಿಡಿದು 1995- 1999 ರ ಶಿಕ್ಷಣ ಕಾಯ್ದೆಯ ಜಾರಿಗೆ ಮುಂದಾಗಬೇಕು ಎಂದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಆನಂದರವರು ಮನವಿ ಸ್ವೀಕರಿಸಿ "ಸರಕಾರದ ಜೊತೆ ಮಾತನಾಡುವುದಾಗಿ ಹಾಗೂ ಶಿಕ್ಷಣ ಸಚಿವಾಲಯದ ಮುಖ್ಯ ಕಾರ್ಯದರ್ಶಿಗಳ ಜೊತೆ ಸಭೆ ನಿಗದಿ ಮಾಡುವುದಾಗಿ ಭರವಸೆ ನೀಡಿದರು.

ಈ ನೀತಿಯ ವಿರುದ್ಧ ರಾಜ್ಯದ ವಿವಿದೆಡೆ ಸರಕಾರದ ವಿರುದ್ಧ ತೀವ್ರವಾಗಿ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಧರಣಿಯಲ್ಲಿ ಎಸ್.ಎಫ್.ಐ ರಾಜ್ಯದ-ಕ್ಷ ವಿ.ಅಂಬರೀಷ್, ಪೋಷಕರ ಮುಖಂಡರಾದ ರವಿ ಹೆಗ್ಗನಳ್ಳಿ, ರಾಜೇಶ್, ಭಾಕ್ಯ ಪ್ರಸನ್. ಎಸ್. ಎಫ್.ಐ ಮುಖಂಡರಾದ ಬಸವರಾಜ್ ಪೂಜಾರ್, ಚಿಕ್ಕರಾಜು, ಎಸ್, ವೆಂಕಟೇಶ್, ಅಮರೇಶ್ ಕಡಗದ್, ವೇಗಾನಂದ, ಶೃತಿ, ಸಿ.ಅಮರೇಶ್, ಗ್ಯಾನೇಶ್ ಕಡಗದ್, ದಿಲೀಪ್ ಶೆಟ್ಟಿ, ನರಸಿಂಹ ಮೂರ್ತಿ ಸೇರಿದಂತೆ ಹಲವು ವಿದ್ಯಾರ್ಥಿಗಳಿದ್ದರು.

ಸತತ 4 ದಿನ ಪ್ರತಿಭಟನೆಯಲ್ಲಿ ಕಂಪ್ಯೂಟರ್ ಆಪರೇಟರ್ಸ್



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸುಮಾರು 11 ವರ್ಷಗಳಿಂದ ಅಂದರೆ 2005ರಿಂದ ಕಂಪ್ಯೂಟರ್ ಆಪರೇಟರ್‌ಗಳಾಗಿ ಮತ್ತು ಐಟಿ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ ಕೆಲವು ನೌಕರರಿಗೆ ಗುತ್ತಿಗೆದಾರರು ಇ.ಎಸ್.ಐ. ಹಾಗೂ ಇ.ಪಿ.ಎಫ್. ಸೌಲಭ್ಯಗಳನ್ನು ನೀಡದೆ ವಂಚಿಸುತ್ತಿರುವುದು ಮತ್ತು ತಿಂಗಳ ವೇತನ 7ನೇ ತಾರೀಖಿನೊಳಗೆ ನೀಡದಿರುವುದನ್ನು ಖಂಡಿಸಿ ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕ ಭವನ ಮುಂಭಾಗ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

ಅಕ್ಟೋಬರ್ 24ರಿಂದ ಆರಂಭವಾದ ಧರಣಿಯು 4 ದಿಗಳವರೆಗೆ ಮುಂದುವರೆಯಿತು. ಕಂಪ್ಯೂಟರ್ ಆಪರೇಟರ್‌ಗಳಿಗೆ ಕಳೆದ 6 ತಿಂಗಳ ವೇತನ ನೀಡಿರುವುದಿಲ್ಲ. ಮಾಹಿತಿ ತಂತ್ರಜ್ಞಾನ ವಿಭಾಗದ 34 ನೌಕರರ ವೇತನ ಹೆಚ್ಚಳ ಮಾಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಸುಮಾರು 635 ನೌಕರರು ಇದ್ದು ಬಿಬಿಎಂಪಿ ಅಡಿಯ ಹಲವು ಇಲಾಖೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಕಂಪ್ಯೂಟರ್ ಆಪರೇಟರ್ಸ್ ಯೂನಿಯನ್ ವತಿಯಿಂದ ಕಾರ್ಮಿಕ ಭವನದ ಎದುರು ಅಕ್ಟೋಬರ್ 24, 2016ರಂದು ಮಧ್ಯಾಹ್ನ 2.30ಕ್ಕೆ 6 ತಿಂಗಳ ಬಾಕಿ ವೇತನಕ್ಕಾಗಿ, ಐಟಿ ನೌಕರರ ಒಂದು ತಿಂಗಳು ಮತ್ತು ಕಡಿತ ಮಾಡಿರುವ ವೇತನಕ್ಕಾಗಿ ಆಗ್ರಹಿಸಿ ಧರಣಿ ನಡೆಸಿದರು.

ಇದಲ್ಲದೇ ಕನಿಷ್ಟ ವೇತನ ಬಾಕಿಗೆ ನೌಕರರ ಕ್ಲೇಮ್ ಅರ್ಜಿ ಕಾರ್ಮಿಕ ಅಧಿಕಾರಿ, ಬೆಂಗಳೂರು ಉಪವಿಭಾಗ 06ರ ಬಳಿ ಇತ್ಯಾರ್ಥವಾಗದೇ 2012 ರಿಂದ ಬಾಕಿ ಉಳಿದಿದೆ. ನೌಕರರ ಬೇಡಿಕೆಗಳ ಈಡೇರಿಕೆಗಾಗಿ ಸಹಿ ಸಂಗ್ರಹವನ್ನು ಮಾಡಲಾಗಿದೆ.

ಕಾರ್ಮಿಕ ಆಯುಕ್ತರು ಬಿಬಿಎಂಪಿ ಅಪರ ಆಯುಕ್ತರನ್ನು ಸಂಪರ್ಕಿಸಿ ನೌಕರರ ಸಮಸ್ಯೆಗಳ ಬಗ್ಗೆ ಚರ್ಚಿಸಿದರು. ಬಿಬಿಎಂಪಿ ಅಪರ ಆಯುಕ್ತರು ಯೂನಿಯನ್ ಮುಖಂಡರ ಸಮ್ಮುಖದಲ್ಲಿ ಮಾತುಕತೆ ನಡೆಸಿ ಆಡಳಿತಾಧಿಕಾರಿಗಳಿಗೆ ಒಂದು ತಿಂಗಳ ವೇತನ ಬಿಡುಗಡೆ ಮಾಡಲು ಹೇಳಿದ್ದು, ಉಳಿದ ವೇತನವನ್ನು ಒಂದು ವಾರದಲ್ಲಿ ಹಂತ ಹಂತವಾಗಿ ಬಿಡುಗಡೆ ಮಾಡಲು ತಿಳಿಸಿದರು. ಒಪ್ಪಂದವನ್ನು ಮುಂದಿನ ಮೂರು ವರ್ಷಗಳವರೆಗೆ ಮುಂದುವರೆಸಬೇಕೆಂದು ನೌಕರರು ತಿಳಿಸಿದರು.

ಧರಣಿಯನ್ನು ಮುಂದುವರೆಸಲು ನಿರ್ಧರಿಸಲಾಗಿ 4ನೇ ದಿನ ಸಂಜೆ ಕಾರ್ಮಿಕ ಆಯುಕ್ತರು, ನೌಕರರು, ಗುತ್ತಿಗೆದಾರರ ಸಭೆ ಕರೆಯಲಾಗುವುದು ಎಂದು ಧರಣಿ ನಿರತ ಕಂಪ್ಯೂಟರ್ ಆಪರೇಟರ್ಸ್‌ರವರನ್ನು ಉದ್ದೇಶಿಸಿ ಜಿಲ್ಲಾ ಕಾರ್ಮಿಕ ಆಯುಕ್ತರಾದ ಶ್ರೀಪಾದ್ ರವರು ತಿಳಿಸಿದರು.

ತಮ್ಮ ಬೇಡಿಕೆಗಳು ಈಡೇರಿಸುವವರೆಗೂ, ಧರಣಿ ಹಿಂಪಡೆಯುವುದಿಲ್ಲ ಎಂದು ಪಟ್ಟು ಹಿಡಿದರು. ಕಾರ್ಮಿಕ ಇಲಾಖೆ, ನೌಕರರು, ಗುತ್ತಿಗೆದಾರರಾದ ಆರ್‌ಎಂಎಸ್ ಟೆಕ್ನಾಲಜೀಸ್, ಟ್ರ್ಯಾಟಜಿಕ್ಸ್ ಎಂಟರ್ ಪ್ರೈಸೆಸ್ ಸಮ್ಮುಖದಲ್ಲಿ ಸಭೆ ನಡೆದು ನವೆಂಬರ್ 19 ರ ಒಳಗೆ 6 ತಿಂಗಳ ಸಂಬಳವನ್ನು ಪಾವತಿಸಲು ಒಪ್ಪಂದವಾಗಿದೆ. ಮುಂದಿನ ಸಭೆಯನ್ನು ನವೆಂಬರ್ 21 ರಂದು ಕರೆಯಲಾಗಿದೆ. ಧರಣಿಯಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಉಪಾಧ್ಯಕ್ಷರಾದ ಹೆಚ್.ಎನ್.ಗೋಪಾಲಗೌಡ, ರಾಜ್ಯ ಕಾರ್ಯದರ್ಶಿ ಕೆ.ಎನ್.ಉಮೇಶ್, ಪ್ರತಾಪ್ ಸಿಂಹ, ಯೂನಿಯನ್‌ನ ಅಧ್ಯಕ್ಷರಾದ ತನುಜಾಕ್ಷಿ, ಉಪಾಧ್ಯಕ್ಷರಾದ ಶಾರದ, ಪ್ರಧಾನ ಕಾರ್ಯದರ್ಶಿ ಪಳನಿಸ್ವಾಮಿ ಜೆ.ಕೆ., ಜಂಟಿ ಕಾರ್ಯದರ್ಶಿ ಮಂಜುಳ, ಮುಖಂಡರಾದ ಗೋಪಾಲ್ ಮತ್ತಿತರ ನೌಕರರು ಭಾಗವಹಿಸಿದ್ದರು.

ವರದಿ : ಪಳನಿಸ್ವಾಮಿ ಜೆ.ಕೆ.

ಐಕ್ಯತೆ-ಸೌಹಾರ್ದತೆ ಕಾಪಾಡಬೇಕೆಂದು ಎಸ್‌ಎಫ್‌ಐ ಮನವಿ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿಯು ಜಿಲ್ಲೆಯ ಐಕ್ಯತೆ ಸೌಹಾರ್ದತೆ ಕಾಪಾಡುವಂತೆ ಒತ್ತಾಯಿಸಿ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳಾದ ಎಂ.ವಿ.ವೆಂಕಟೇಶರವರಿಗೆ ಅಕ್ಟೋಬರ್ 25ರಂದು ಮನವಿ ಸಲ್ಲಿಸಿದರು.

ಕಾಲೇಜಿನಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಬುರ್ಖಾ ಧರಿಸಿರುತ್ತಾರೆ ಎಂಬ ಕಾರಣಕ್ಕೆ ಹಿಂದೂ ಧರ್ಮದ ವಿದ್ಯಾರ್ಥಿಗಳು ಕೇಸರಿ ಶಾಲ್‌ನ್ನು ಧರಿಸಿ ಕಾಲೇಜಿಗೆ ಬರುತ್ತಿದ್ದಾರೆ. ದೇಶದ ಸಂವಿಧಾನವೇ ಪ್ರತಿಯೊಬ್ಬ ನಾಗರೀಕನಿಗೂ ಅವರದೇ ಆದಂತಹ ಹಕ್ಕುಗಳನ್ನು ನೀಡಿದೆ ಅದರಲ್ಲಿ ಅವರ ಇಷ್ಟದ ಧರ್ಮದ ಧಾರ್ಮಿಕ ಆಚರಣೆಗೂ ಕೂಡಾ ಅವಕಾಶ ನೀಡಲಾಗಿದೆ ಆದರೆ ಕಾಲೇಜಿನಲ್ಲಿ ಏಕರೂಪ ಸಮವಸ್ತ್ರ ನೀತಿ ಜಾರಿಯಲ್ಲಿದ್ದರೂ ಕೂಡಾ ಇಂತಹ ಘಟನೆಗಳು ನಡೆಯುತ್ತಿರುವುದು ವಿಷಾದಕರ ಸಂಗತಿಯಾಗಿದೆ.

ವಿದ್ಯಾರ್ಥಿ ಸಮುದಾಯ, ಕಾಲೇಜಿನ ವಾತಾವರಣ ಸೌಹಾರ್ದತೆಯುತವಾಗಿ ಕೂಡಿರಬೇಕು. ಅಲ್ಲಿ ಹಿಂದೂ-ಮುಸ್ಲಿಂ ಎಂಬ ಬೇಧ-ಭಾವಗಳು ಬರಕೂಡದು. ಕ್ಯಾಂಪಸ್‌ನೊಳಗೆ ಯಾವುದೇ ಧರ್ಮದ ಅವಹೇಳನವಾಗಲಿ ಅಥವಾ ಧರ್ಮ ಪ್ರಚಾರವಾಗಲಿ ನಡೆಯಬಾರದು. ಕಾಲೇಜು ಅವಧಿ ನಂತರ, ತರಗತಿಗಳಿಂದ ಹೊರಬಂದ ನಂತರದಲ್ಲಿ ವಿದ್ಯಾರ್ಥಿಗಳು ಅವರ ಧಾರ್ಮಿಕ ಆಚರಣೆಗಳನ್ನು ಅವರ ಇಷ್ಟದಂತೆ ಆಚರಿಸಲಿ ಆದರೆ ಅದು ಕಾಲೇಜಿನ ಕ್ಯಾಂಪಸ್‌ನಲ್ಲಿ ನಡೆದರೆ ಅಲ್ಲಿ ವಿದ್ಯಾರ್ಥಿ ಸಮುದಾಯದ ಐಕ್ಯತೆ-ಸೌಹಾರ್ದತೆ ಹಾಳಾಗುತ್ತದೆ.

ಭಾರತ ಸರ್ವ ಧರ್ಮಗಳ ನಾಡು, ಅದರಲ್ಲೂ ಹಾವೇರಿ ಜಿಲ್ಲೆ ಸಂತರ, ಸರ್ವಜ್ಞರು ನೆಲೆಸಿರುವ ಭೂಮಿ ಎಂದೇ ಹೆಸರಾಗಿದೆ, ಶಿಶುನಾಳ ಷರೀಫರು, ಕನಕದಾಸರು, ಸರ್ವಜ್ಞರ ಭೂಮಿ ಹಾವೇರಿ ಜಿಲ್ಲೆ. ನಾಡಿಗೆ ಸೌಹಾರ್ದತೆಯ ಸಂದೇಶ ಸಾರಿದ ಭೂಮಿ ಇದಾಗಿದೆ. ಐಕ್ಯತೆ-ಸೌಹಾರ್ದತೆಯನ್ನು ಕಾಪಾಡುವ ಕೆಲಸ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಆಗಬೇಕಿದೆ, ಆದರೆ ಅಂತಹ ವಿದ್ಯಾರ್ಥಿಗಳ ಮಧ್ಯೆ ಇಂದು ಕೋಮು ಸೌಹಾರ್ದ ವಾತಾವರಣ ಕದಡುವುದಕ್ಕೆ ಎಸ್‌ಎಫ್‌ಐ ಸಂಘಟನೆ ಬಿಡುವುದಿಲ್ಲ.

ಈ ತರಹದ ಪ್ರಕರಣ ಮಂಗಳೂರು ಜಿಲ್ಲೆಯ ಪುತ್ತೂರಿನ ಕಾಲೇಜೊಂದರಲ್ಲಿ ನಡದಿತ್ತು ಅದು ಈಗ ಹಾವೇರಿ ಜಿಲ್ಲೆಗೆ ಕಾಲಿಟ್ಟಿರುವುದು ಅಪಾಯಕಾರಿಯಾಗಿದೆ. ಈಗಾಗಲೇ ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಮೂರು ಪದವಿ ಕಾಲೇಜುಗಳಲ್ಲಿ ನಡೆದಿದೆ. ಹಾನಗಲ್ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀ ಕುಮಾರೇಶ್ವರ ಕಲಾ-ವಾಣಿಜ್ಯ ಮಹಾವಿದ್ಯಾಲಯ ಹಾಗೂ ಅಕ್ಕಿಆಲೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂತಹ ಘಟನೆಗಳು ನಡೆಯುತ್ತಿವೆ.

ಅಕ್ಟೋಬರ್ 5ರಂದು ಶಿಗ್ಗಾಂವಿಯ ಬಂಕಾಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿಯೂ ಕೂಡಾ ಇಂತಹ ಘಟನೆ ನಡೆದಿದೆ. ಹಿರೇಕೆರೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಈ ಘಟನೆ ಮರುಕಳಿಸಿದ್ದು ಇದು ಇಡೀ ಹಾವೇರಿ ಜಿಲ್ಲೆಯ ಕಾಲೇಜುಗಳಿಗೆ ವ್ಯಾಪಿಸುವ ಮೊದಲು ಜಿಲ್ಲಾಧಿಕಾರಿಗಳು ಪ್ರಾಂಶುಪಾಲರ ಸಭೆ ನಡಸಿ ಕಾಲೇಜಿನ ಕ್ಯಾಂಪಸ್‌ನಲ್ಲಿ ಅಥವಾ ಕ್ಲಾಸ್ ರೂಮಿನಲ್ಲಿ ಕೇಸರಿ ಶಾಲ್ ಹಾಕುವುದನ್ನು ಮತ್ತು ಬುರ್ಖಾ ಧರಿಸುವುದನ್ನು ನಿಷೇಧಿಸಿ, ಏಕರೂಪದ ಸಮವಸ್ತ್ರ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಆದೇಶಿಸಬೇಕು ಮತ್ತು ತರಗತಿಗಳು ಮುಗಿದ ನಂತರದಲ್ಲಿ ವಿದ್ಯಾರ್ಥಿಗಳು ಅವರ ಧಾರ್ಮಿಕ ಆಚರಣೆಗಳನ್ನು ಹೊರಗೆ ನಡೆಸಲಿ ಎಂದು ತಾವು ಆದೇಶ ನೀಡಬೇಕೆಂದು ಈ ಮೂಲಕ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿಯು ತಿಳಿಸಿದೆ.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಸುಭಾಸ ಎಂ, ಬಸನಗೌಡ ಭತಮಗೌಡ್ರ, ಸುಲೇಮಾನ ಹಲಗೇರಿ, ಮಾಲತೇಶಸಿಂಗ್ ಕಹಾರ, ಹೊನ್ನಪ್ಪ ನುಗ್ಗಿಮರದ ಇದ್ದರು.

ವರದಿ : ಸುಭಾಸ ಎಂ.



ನಿವೇಶನ ರಹಿತರಿಂದ ಜಿಲ್ಲಾಧಿಕಾರಿ ಕಛೇರಿಗೆ ಚಲೋ

ಮಂಗಳೂರು ನಗರದ ನಿವೇಶನ ರಹಿತರು ಕಳೆದ ಎರಡುವರೆ ವರ್ಷಗಳಿಂದ ನಿವೇಶನಕ್ಕಾಗಿ ಮಹಾನಗರ ಪಾಲಿಕೆ ಒದಗಿಸಬೇಕೆಂದು ಆಗ್ರಹಿಸಿ ಹೋರಾಟ ಸಮಿತಿಯ ಮೂಲಕ ಈಗಾಗಲೇ ಏಳು ಬಾರಿ ಸಾಮೂಹಿಕ ಪ್ರತಿಭಟನಾ ಕಾರ್ಯಕ್ರಮ ನಡೆಸಲಾಗಿದೆ.

ಅಕ್ಟೋಬರ್ 24ರಂದು ಮಂಗಳೂರಿನ ನಿವೇಶನರಹಿತರ ಹೋರಾಟ ಸಮಿತಿಯ ವತಿಯಿಂದ ನಡೆದ ಜಿಲ್ಲಾಧಿಕಾರಿ ಕಛೇರಿ ಚಲೋ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿರವರು "ಈ ದೇಶದ ನಿಜವಾದ ವಾರೀಸುದಾರರಾದ ಬಡವರಿಗೆ ವಾಸಿಸಲೂ ಭೂಮಿಯಿಲ್ಲ. ಶ್ರೀಮಂತರ ಹಾಗೂ ಭೂಮಾಫಿಯಾದ ವಶದಲ್ಲಿ ಮಂಗಳೂರು ನಗರದಲ್ಲಿ ಹೇರಳವಾದ ಭೂಮಿಯಿದೆ. ನಗರ ಪಾಲಿಕೆ ಸಿದ್ದಪಡಿಸಿದ ನಗರದ ನಿವೇಶನರಹಿತರ ಪಟ್ಟಿಯಲ್ಲಿ ಸಿಪಿಐ(ಎಂ) ನೇತೃತ್ವದ ನಿವೇಶನರಹಿತರ ಹೋರಾಟ ಸಮಿತಿ ಕ್ರಮಬದ್ಧವಾಗಿ ಸಲ್ಲಿಸಿದ್ದ ಅನೇಕ ಅರ್ಜಿದಾರರ ಹೆಸರು ಕಾಣೆಯಾಗಿದೆ. ಪುರುಷ ಅರ್ಜಿದಾರರ ಹೆಸರನ್ನು ತೆಗೆದು ಹಾಕಲಾಗಿದೆ. ಇದರಿಂದಾಗಿ ಮಂಗಳೂರು ನಗರದ ಬಡ ನಿವೇಶನರಹಿತರು ಬೀದಿಗೆ ಇಳಿಯಬೇಕಾದ ಪರಿಸ್ಥಿತಿ ಬಂದಿದೆ" ಎಂದು ಹೇಳಿದರು.

ಮಂಗಳೂರು ನಗರ ಇವತ್ತು ಸ್ಮಾರ್ಟ್‌ಸಿಟಿಯಾಗುವುದರಲ್ಲಿದ್ದು, ಪ್ರಜೆಗಳಿಗೆ ಕನಿಷ್ಠ ವಸತಿಯನ್ನು ಒದಗಿಸದೆ ನಗರವನ್ನು ಸ್ಮಾರ್ಟ್‌ಸಿಟಿ ಮಾಡುವುದಕ್ಕೆ ಯಾವುದೇ ಅರ್ಥವಿಲ್ಲ. ಹಿಂದೆ ರಾಜ್ಯ ಸರ್ಕಾರಗಳಲ್ಲಿ ಬಡವರಿಗೆ ನಿವೇಶನರಹಿತರಿಗೆ ನಿವೇಶನ ನೀಡುವ ಕಾರ್ಯಕ್ರಮವಿತ್ತು. ಆದರೆ ಇದೀಗ ಕೇಂದ್ರ-ರಾಜ್ಯ ಸರ್ಕಾರಗಳ ಜಾಗತೀಕರಣದ ಅಧೀನರಾದ ಬಳಿಕ ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳ ನೀತಿಯಂತೆ ಉಚಿತವಾಗಿ ಬಡವರಿಗೆ ನೀಡುವ ಎಲ್ಲಾ ಸಬ್ಸಿಡಿಗಳನ್ನು ಕೈಬಿಡಲಾಗುತ್ತಿದೆ. ಎಲ್ಲರಿಗೂ ಜೀವನ ಮಾಡುವ ಹಕ್ಕನ್ನು ನಮ್ಮ ಸಂವಿಧಾನ ಒದಗಿಸದ ಮೇರೆಗೆ ವಸತಿ ಹಕ್ಕಿಗಾಗಿ ಹೋರಾಟ ಮಾಡುವ ಬಡವರನ್ನು ಸಿಪಿಐ(ಎಂ) ಬೆಂಬಲಿಸುತ್ತಿದೆ.

ಕೇಂದ್ರ ರಾಜ್ಯ ಸರ್ಕಾರಗಳ ಭೂಸ್ವಾಧೀನ ಕಾಯಿದೆಯ ದುರ್ಬಳಕೆ ಮಾಡಿ ಉದ್ಯಮಿಗಳಿಗೆ ಕೃಷಿ ಭೂಮಿಯನ್ನು ರೈತರಿಂದ ಅಗ್ಗವಾಗಿ ಕಿತ್ತು ನೀಡಲಾಗುತ್ತಿದೆ. ರಾಜ್ಯ ಸರ್ಕಾರ ನಿವೇಶನ ಭೂಮಿ ಅಥವಾ ಬಡವರು ಅಭಿವೃದ್ದಿಗೊಳಿಸಿದ ಭೂಮಿಗೆ ಹಕ್ಕುಪತ್ರ ನೀಡಲು ಆಗ್ರಹಿಸಿ ನವೆಂಬರ್ 18ರಂದು ರಾಜ್ಯಾದ್ಯಂತ ರೈತರು ನಡೆಸುವ ಜೈಲ್ ಭರೋ ಕಾರ್ಯಕ್ರಮದಲ್ಲಿ ನಿವೇಶನರಹಿತರು ಭಾಗವಹಿಸುವರು ಎಂಬುದಾಗಿ ವಸಂತ ಆಚಾರಿ ಎಚ್ಚರಿಕೆ ನೀಡಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಯಾದವ ಶೆಟ್ಟಿ, ಸಿಪಿಐ(ಎಂ) ಜಿಲ್ಲಾ ನಗರ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಜಯಂತಿ ಬಿ.ಶೆಟ್ಟಿ, ಯೋಗೀಶ್ ಜಪ್ಪಿನಮೊಗರು, ಡಿವೈಎಫ್ಐ ಮುಖಂಡ ಸಂತೋಷ್ ಬಜಾಲ್ ಮಾತನಾಡಿದರು. ನಿವೇಶನರಹಿತರ ಹೋರಾಟ ಸಮಿತಿಯ ಅಧ್ಯಕ್ಷರಾದ ಪ್ರೇಮನಾಥ ಜಲ್ಲಿಗುಡ್ಡೆ ಸ್ವಾಗತಿಸಿದರು. ಕಾರ್ಯದರ್ಶಿ ಸಂತೋಷ್ ಶಕ್ತಿನಗರ ಪ್ರಾಸ್ತವಿಕ ಮಾತನಾಡಿದರು. ಖಜಾಂಚಿ ಪ್ರಭಾವತಿ ಬೋಳಾರ ಹಾಗೂ ಇತರ ಸಮಿತಿ ಮುಖಂಡರು ಭಾಗವಹಿಸಿದರು.

ನಿವೇಶನರಹಿತರ ಪಟ್ಟಿಯಿಂದ ಕೈಬಿಡಲಾದ ಹೆಸರುಗಳನ್ನು, ಪುರುಷ ಅರ್ಜಿದಾರರ ಹೆಸರನ್ನೂ ಸೇರಿಸಬೇಕು, ಕಣ್ಣೂರಿನ ಕನ್ನಗುಡ್ಡೆಯಲ್ಲಿ 11.25 ಎಕ್ರೆ ನಿವೇಶನಕ್ಕಾಗಿ ಕಾದಿರಿಸಿದ ಜಮೀನಿನ ಸ್ಪಷ್ಟ ಮಾಹಿತಿ ನೀಡಬೇಕು. ಮಂಗಳೂರು ನಗರದಲ್ಲಿ ಆಯ್ಕೆಯಾದ 2,000 ನಿವೇಶನರಹಿತರ ಅಂತಿಮ ಪಟ್ಟಿಯನ್ನು ಬಹಿರಂಗಪಡಿಸಬೇಕು ಎಂಬ ಬೇಡಿಕೆಗಳ ಬಗ್ಗೆ ಹೋರಾಟ ಸಮಿತಿ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿತು.

ಪ್ರತಿಭಟನೆಗೂ ಮೊದಲು ಮಂಗಳೂರಿನ ಮಿನಿ ವಿಧಾನಸೌಧದಿಂದ ಜಿಲ್ಲಾಧಿಕಾರಿ ಕಛೇರಿವರೆಗೆ ನಿವೇಶನರಹಿತರು ಮೆರವಣಿಗೆ ನಡೆಸಿದರು.

ವರದಿ : ಸಂತೋಷ್ ಶಕ್ತಿನಗರ



ತೋರಣಗಲ್‌ನಲ್ಲಿ ಬಹಿರಂಗ ಸಭೆ



ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ಇಪ್ಸಿಲಾನ್ ಕಾರ್ಬೈಡ್ ಪ್ರೈವೇಟ್ ಲಿಮಿಟೆಡ್ ಕಂಪನಿ (ಇಸಿಪಿಎಲ್) ವತಿಯಿಂದ ತಾಲ್ಲೂಕಿನ ಸುಲ್ತಾನಪುರ ಬಳಿಯಲ್ಲಿ ಕೋಲ್ಬಾರ್ ಕಾರ್ಖಾನೆ ವಿರೋಧಿ ಚಳುವಳಿಗಾರರ ಬಂಧನ ಖಂಡಿಸಿ ಸಿಪಿಐ(ಎಂ) ಪಕ್ಷದ ವತಿಯಿಂದ ಅಕ್ಟೋಬರ್ 24, ಸೋಮವಾರದಂದು ಬೃಹತ್ ಬಹಿರಂಗ ಸಭೆ ಮತ್ತು ರ‍್ಯಾಲಿಯನ್ನು ನಡೆಸಲಾಯಿತು.

ಕಾರ್ಖಾನೆ ಸ್ಥಾಪನೆ ವಿರುದ್ಧ, ಜಿಂದಾಲ್ ಕಂಪನಿಯ ಲಾಭಿ, ಅವ್ಯವಹಾರ, ಜನತೆಯ ಹೋರಾಟ ಹಾಗೂ ಹೋರಾಟಗಾರರ ಮೇಲಿನ ದೌರ್ಜನ್ಯಗಳ ಬಗ್ಗೆ ಮಾಜಿ ಶಾಸಕರು ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಿ.ಜೆ.ಕೆ.ನಾಯರ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು.ಬಸವರಾಜು, ಜಿಲ್ಲಾ ಕಾರ್ಯದರ್ಶಿ ಆರ್. ಎಸ್.ಬಸವರಾಜುರವರು ಮಾತನಾಡಿದರು.

ಸಿಐಟಿಯು ತಾಲ್ಲೂಕು ಘಟಕದ ಅಧ್ಯಕ್ಷ ಜೆ.ಎಂ. ಚೆನ್ನಬಸಯ್ಯ, ಎಂ.ಜಂಬಯ್ಯ, ಭಾಸ್ಕರ್‌ರೆಡ್ಡಿ, ನಾಗರತ್ನಮ್ಮ, ವಿ.ಶಿವಶಂಕರ್, ಎ.ಸ್ವಾಮಿ, ಬಿ.ಮಹೇಶ್, ಶರಣಪ್ಪ ಕೋಟಗಿನಹಾಳ್, ಜಂಬಯ್ಯ ಸೇರಿದಂತೆ ಹಲವಾರು ಮುಖಂಡರು ಭಾಗವಹಿಸಿದ್ದರು. ಎಂ.ತಾತಪ್ಪ ಸ್ವಾಗತಿಸಿದರು. ಕೋನಪ್ಪ ಕಾರ್ಯಕ್ರಮ ನಿರೂಪಿಸಿದರು. ಜೆ.ಸತ್ಯಬಾಬು ವಂದನಾರ್ಪಣೆ ಮಾಡಿದರು.



ಸಾಗುವಳಿದಾರರ ಸಮಾವೇಶ

ಭೂಗಳ್ಳರಿಗೆ ಸುಲಭವಾಗಿ ಭೂಮಿಯನ್ನು ನೀಡುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸರ್ಕಾರ, ಬಡ ರೈತರಿಗೆ ಭೂಮಿ ನೀಡಲು ವಿಫಲವಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆರವರು ಆರೋಪಿಸಿದರು.

ಶಿವಮೊಗ್ಗ ನಗರದ ಎನ್.ಇ.ಎಸ್. ಸಭಾಂಗಣದಲ್ಲಿ ಅಕ್ಟೋಬರ್ 26ರಂದು ಕಂದಾಯ ಭೂಮಿ ಹಾಗೂ ಅರಣ್ಯ ಭೂಮಿ ಸಾಗುವಳಿದಾರರಿಗೆ ಭೂ ಮಂಜೂರಾತಿ ಮಾಡಬೇಕೆಂದು ಕೆ.ಪಿ.ಆರ್.ಎಸ್ ವತಿಯಿಂದ ಹಮ್ಮಿಕೊಂಡಿದ್ದ ಜಿಲ್ಲಾ ಸಮಾವೇಶದಲ್ಲಿ ಅವರು ಮಾತನಾಡಿದರು.

ಸಾಗುವಳಿದಾರರು ಹೋರಾಟಕ್ಕೆ ಮುಂದಾಗಬೇಕೆಂದು, ನವೆಂಬರ್ 18ರಂದು ರಾಜ್ಯಾದ್ಯಂತ ಹಮ್ಮಿಕೊಂಡಿರುವ ಜೈಲ್ ಭರೋ ಕಾರ್ಯಕ್ರಮದಲ್ಲಿ ಭಾಗವಹಿಸಲು ಕರೆ ನೀಡಿದರು. ಅಲ್ಲದೆ ತಾಲ್ಲೂಕಿನಾದ್ಯಂತ ಜನರ ನಡುವೆ ಮತಪ್ರದರ್ಶನದ ಮೂಲಕ ಪ್ರಚಾರ ನಡೆಸಬೇಕೆಂದು ತೀರ್ಮಾನಿಸಿದರು.

ಈ ವಾರ ಚರಿತ್ರೆಯಲ್ಲಿ

26 ಅಕ್ಟೋಬರ್ 1947

ಕಾಶ್ಮೀರವನ್ನು ಭಾರತಕ್ಕೆ ಸೇರಿಸಿದ ಒಪ್ಪಂದದ ದಿನ

ಈ ದಿನ ಆಗಿನ ಜಮ್ಮು-ಕಾಶ್ಮೀರ ರಾಜ್ಯವನ್ನು ಅಲ್ಲಿನ ಮಹಾರಾಜ ಹರಿಸಿಂಗ್ ಭಾರತದ ಒಕ್ಕೂಟಕ್ಕೆ ಸೇರಿಸಲು ಒಪ್ಪುವ ದಸ್ತಾವೇಜಿಗೆ ಸಹಿ ಹಾಕಿದರು. ಇದಕ್ಕೆ ಮೊದಲು ಆತ ಸ್ವತಂತ್ರವಾಗಿ ಇರಬಯಸಿದ್ದರು. ಆದರೆ ಅಕ್ಟೋಬರ್ 24ರಂದು ಪಾಕಿಸ್ತಾನದ ಕಡೆಯಿಂದ ಸಶಸ್ತ್ರ ಮಂದಿ ಕಾಶ್ಮೀರಕ್ಕೆ ನುಗ್ಗಿ ಬಂದಾಗ ಅವರನ್ನು ಹಿಮ್ಮೆಟ್ಟಿಸಲು ಹರಿ ಸಿಂಗ್ ನೆಹರೂ ಸರಕಾರಕ್ಕೆ ಮಿಲಿಟರಿ ಕಳಿಸಲು ಕೇಳಿದ್ದರು. ಆದರೆ ಭಾರತದ ಒಕ್ಕೂಟಕ್ಕೆ ಸೇರದೆ ಮಿಲಿಟರಿ ಕಳಿಸಲು ಸಾಧ್ಯವಿಲ್ಲ ಎಂದಿದ್ದಕ್ಕೆ ಹರಿಸಿಂಗ್ ಈ ಒಪ್ಪಂದಕ್ಕೆ ಸಹಿ ಹಾಕಿದ್ದರು. ಅದಕ್ಕೆ ಮೊದಲು ಭಾರತವನ್ನು ಸೇರುವಂತೆ ಅಲ್ಲಿ ಶೇಖ್ ಅಬ್ದುಲ್ಲ ನೇತೃತ್ವದ ನ್ಯಾಶನಲ್ ಕಾನ್ಫರೆನ್ಸ್ ಪಕ್ಷವೂ ಮಹಾರಾಜನ ಮೇಲೆ ಒತ್ತಡ ಹಾಕುತ್ತಿತ್ತು.

ಕರ್ನಾಟಕ 60: ಅಭಿವೃದ್ಧಿ ನಡೆ



ಪ್ರೊ. ಟಿ.ಆರ್.ಚಂದ್ರಶೇಖರ

ಕರ್ನಾಟಕ ರಾಜ್ಯ ರಚನೆಯಾಗಿ 60 ವರ್ಷಗಳಾಗುತ್ತಿವೆ (1956–2016). ಏಕೀಕೃತ ಕರ್ನಾಟಕದ ವಜ್ರ ಮಹೋತ್ಸವನ್ನು 2016ರಲ್ಲಿ ಆಚರಿಸಲಾಗುತ್ತಿದೆ. ಒಂದು ಪ್ರದೇಶ/ದೇಶದ ಚರಿತ್ರೆಯಲ್ಲಿ 60 ವರ್ಷ ದೀರ್ಘ ಕಾಲಾವಧಿಯೇನಲ್ಲ. ಆದರೂ ರಾಜ್ಯವು ಕಳೆದ 60 ವರ್ಷಗಳಲ್ಲಿ ಸಾಧಿಸಿಕೊಂಡ ಸಾಧನೆಗಳನ್ನು ಮತ್ತು ಎದುರಿಸಿದ ವೈಫಲ್ಯಗಳನ್ನು ಮತ್ತು ಅದರ ಅಭಿವೃದ್ಧಿ ನಡೆಯನ್ನು ಮೌಲ್ಯಮಾಪನ ಮಾಡುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಭಾರತದ ಸಂದರ್ಭದಲ್ಲಿ ಕರ್ನಾಟಕಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಅಭಿವೃದ್ಧಿ ಸೂಚಿಗಳಿಗೆ ಸಂಬಂಧಿಸಿದಂತೆ ನಮ್ಮ ರಾಜ್ಯದ ಸಾಧನೆಯು ಅಖಿಲ ಭಾರತದ ಸಾಧನೆಗಳಿಂತ ಉತ್ತಮವಾಗಿದೆ. ಆದರೆ ಕರ್ನಾಟಕವು ಇಂದು ಅನೇಕ ತೀವ್ರ ಸ್ವರೂಪದ ಸಮಸ್ಯೆಗಳನ್ನು ಎದುರಿಸುತ್ತಿದೆ. ಅದು ಏನು ಸಾಧನೆ ಮಾಡಿದೆಯೋ ಅವೆಲ್ಲವನ್ನು ಅದು ಎದುರಿಸುತ್ತಿರುವ ವೈಫಲ್ಯಗಳು ತಿಂದು ಹಾಕುತ್ತಿವೆ.

ಜನಸಂಖ್ಯೆಯ ಬೆಳವಣಿಗೆ ನಡೆ

ಜನಸಂಖ್ಯೆಯ ಬೆಳವಣಿಗೆಯನ್ನು ನಿಯಂತ್ರಿಸುವುದರಲ್ಲಿ ಕರ್ನಾಟಕದ ಸಾಧನೆಯು ಅನುಕರಣೀಯವಾಗಿದೆ. ಅದರ ಬೆಳವಣಿಗೆ ಪ್ರಮಾಣ 2001 ರಿಂದ 2011ರ ದಶಕದಲ್ಲಿ ಶೇ. 15.6 ರಷ್ಟಿತ್ತು. ಇದೇ ಅವಧಿಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಶೇ17.6. ಕರ್ನಾಟಕದಲ್ಲಿ ಒಟ್ಟು ಸಂತಾನೋತ್ಪತ್ತಿ ಪ್ರಮಾಣ 2014–15ರಲ್ಲಿ 1.9(ಪ್ರತಿ ಮಹಿಳೆಗೆ ಹುಟ್ಟುವ ಮಕ್ಕಳ ಸಂಖ್ಯೆ). ರಾಜ್ಯದಲ್ಲಿ 0–6 ವಯೋಮಾನದ ಮಕ್ಕಳ ಸಂಖ್ಯೆ 2001ರಲ್ಲಿ 71.82 ಲಕ್ಷವಿದ್ದುದು 2011ರಲ್ಲಿ ಅದು 71.61 ಲಕ್ಷಕ್ಕಿಳಿದಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ 0–6 ವಯೋಮಾನದ ಮಕ್ಕಳ ಪ್ರಮಾಣ 2001ರಲ್ಲಿ ಶೇ. 13.6ರಷ್ಟಿದ್ದುದು 2011ರಲ್ಲಿ ಅದು ಶೇ. 11.7 ಕ್ಕಿಳಿದಿದೆ. ಇಂದು ಕರ್ನಾಟಕದಲ್ಲಿ ಜನಸಂಖ್ಯೆಯ ಬೆಳವಣಿಗೆಯು ಸಮಸ್ಯೆಯಾಗಿ ಉಳಿದಿಲ್ಲ. ಅದೊಂದು ಸಮಸ್ಯೆಯೆಂದು ಯಾರಾದರೂ ವಾದಿಸಿದರೆ ಅವರಿಗೆ ವಾಸ್ತವ ಸ್ಥಿತಿಯ ಪರಿಜ್ಞಾನವಿಲ್ಲವೆಂದು ಹೇಳಬೇಕಾಗಿದೆ. ಕರ್ನಾಟಕದಲ್ಲಿ ದುಡಿಯುವ ವಯೋಮಾನದ(15–59 ವರ್ಷಗಳು) ಯುವ ಜನಸಂಖ್ಯೆಯ ಪ್ರಮಾಣ ಶೇ. 64.22ರಷ್ಟಿದ್ದರೆ ಅಖಿಲ ಭಾರತ ಮಟ್ಟದಲ್ಲಿ ಇದು ಶೇ. 62.50ರಷ್ಟಿದೆ. ನಮ್ಮ ರಾಜ್ಯದ ಜನಸಂಖ್ಯೆಯಲ್ಲಿನ ಅವಲಂಬಿತರ ಪ್ರಮಾಣ 2011ರಲ್ಲಿ ಶೇ. 35.8ರಷ್ಟಿದ್ದರೆ ಅಖಿಲ ಭಾರತ ಮಟ್ಟದಲ್ಲಿ ಅದು ಶೇ. 37.5ರಷ್ಟಿದೆ. ಇದು ಅಭಿವೃದ್ಧಿಯ ದೃಷ್ಟಿಯಿಂದ ಅನುಕೂಲಕರ ಸಂಗತಿಯಾಗಿದೆ. ಇದನ್ನೇ ಜನಸಂಖ್ಯಾಶಾಸ್ತ್ರದಲ್ಲಿ 'ಪಾಪ್ಯುಲೇಶನ್ ಡಿವಿಡೆಂಡ್' (ಜನಸಂಖ್ಯಾ ಪ್ರಯೋಜನ) ಎಂದು ಕರೆಯುತ್ತಾರೆ. ಈ ಯುವ ಸಮುದಾಯಕ್ಕೆ ಹೇಗೆ ಉದ್ಯೋಗವನ್ನು ಒದಗಿಸಲಾಗುತ್ತದೆ ಎಂಬುದು ಕರ್ನಾಟಕದ ಮುಂದಿರುವ ಒಂದು ಜನಸಂಖ್ಯಾ ಸವಾಲಾಗಿದೆ.

ಕರ್ನಾಟಕವು ಇಂದು ಜನಸಂಖ್ಯೆಗೆ ಸಂಬಂಧಿಸಿದಂತೆ ಎದುರಿಸುತ್ತಿರುವ ಮುಖ್ಯ ಗಂಡಾಂತರವೆಂದರೆ ಮಿತಿಮೀರಿದ ಜನವಲಸೆ. ರಾಜ್ಯದಲ್ಲಿ ಗ್ರಾಮೀಣ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ 2001–2011ರಲ್ಲಿ ಕೇವಲ ಶೇ7.4 ರಷ್ಟಿದೆ. ಆದರೆ ನಗರ ಪ್ರದೇಶದ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಶೇ 31.4 ರಷ್ಟಿದೆ. ಇಲ್ಲಿ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ವಲಸೆ ಬರುತ್ತಿರುವ ಜನರ ಪ್ರಮಾಣ ಅತ್ಯಧಿಕವಾಗಿದೆ. ದೊಡ್ಡ ಪ್ರಮಾಣದಲ್ಲಿ ವಲಸೆ ಬರುತ್ತಿರುವ ದುಡಿಯುವ ವರ್ಗಕ್ಕೆ ನಗರ ಪ್ರದೇಶದಲ್ಲಿ ಉದ್ಯೋಗವನ್ನು ಒದಗಿಸುವುದು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಈ ವಲಸೆಯಿಂದ ನಗರ ಪ್ರದೇಶದ ಮೂಲಸೌಕರ್ಯಗಳಾದ ಕುಡಿಯುವ ನೀರು, ವಸತಿ, ಸಾರಿಗೆ ಮುಂತಾದ ಸಂಗತಿಗಳ ಮೇಲೆ ವಿಪರೀತ ಒತ್ತಡ ಉಂಟಾಗುತ್ತಿದೆ. ಇದು ನಾವು ಇಂದು ಎದುರಿಸುತ್ತಿರುವ ಮತ್ತೊಂದು ಸವಾಲಾಗಿದೆ.

ಕುಸಿಯುತ್ತಿರುವ ಕೃಷಿ ವಲಯ

ತನ್ನ ಏಕೀಕರಣದ ವಜ್ರ ಮಹೋತ್ಸವವನ್ನು ಆಚರಿಸುತ್ತಿರುವ ಕರ್ನಾಟಕ ಇಂದು ಎದುರಿಸುತ್ತಿರುವ ಬಹು ದೊಡ್ಡ ಸಮಸ್ಯೆಯೆಂದರೆ ಕೃಷಿಯಲ್ಲಿನ ಬಿಕ್ಕಟ್ಟು. ಕೃಷಿ ವಲಯ ಪೂರ್ಣವಾಗಿ ನೆಲಕಚ್ಚಿದೆ. ಅದರ ಕೆಲವು ಸೂಚಿಗಳು ಹೀಗಿವೆ:

1. ಕೃಷಿಯನ್ನು ಅವಲಂಬಿಸಿಕೊಂಡಿರುವ ದುಡಿಯುವ ವರ್ಗದ ಪ್ರಮಾಣ 2001ರಲ್ಲಿ ಶೇ. 55.7ರಷ್ಟಿದ್ದುದು 2011ರಲ್ಲಿ ಅದು ಶೇ. 49.3 ಕ್ಕಿಳಿದಿದೆ.
2. ಕೃಷಿಯಲ್ಲಿನ ಸಾಗುವಳಿಗಾರರ ಸಂಖ್ಯೆ 68.8 ಲಕ್ಷದಿಂದ 65.8 ಲಕ್ಷಕ್ಕಿಳಿದಿದೆ.
3. ಆಹಾರೋತ್ಪಾದನೆಯು 2010–11ರಲ್ಲಿ 140 ಲಕ್ಷ ಟನ್ನುಗಳಷ್ಟಿದ್ದುದು 2014–15ರಲ್ಲಿ ಅದು 110 ಲಕ್ಷ ಟನ್ನುಗಳಿಗಿಳಿದಿದೆ.
4. ನಮ್ಮ ದೇಶದಲ್ಲಿ ಒಣಭೂಮಿ ಕೃಷಿಯನ್ನು ಅತಿಯಾಗಿ ಹೊಂದಿರುವ ಎರಡನೆಯ ದೊಡ್ಡ ರಾಜ್ಯ ಕರ್ನಾಟಕ. ಈ ಹಿನ್ನೆಲೆಯಲ್ಲಿ ಕೃಷಿಯ ಬಿಕ್ಕಟ್ಟನ್ನು ಪರಿಗಣಿಸುವ ಅಗತ್ಯವಿದೆ.
5. ಕೃಷಿ ವಲಯದಲ್ಲಿ ತಲಾ ಆಂತರಿಕ ಉತ್ಪನ್ನವು 2012–13ರಲ್ಲಿ ರೂ. 13,645 ರಷ್ಟಿದ್ದರೆ ಉದ್ದಿಮೆ ಮತ್ತು ಸೇವಾ ವಲಯದಲ್ಲಿ ಅದು ಕ್ರಮವಾಗಿ ರೂ. 17,267 ಮತ್ತು ರೂ. 46,148ದಷ್ಟಿದೆ. ಇಲ್ಲಿನ ಅಸಮಾನತೆಯ ಪ್ರಮಾಣವನ್ನು ಹೇಳಬೇಕಾದ ಅಗತ್ಯವಿಲ್ಲ.
6. ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಕೃಷಿಯ ಕೊಡುಗೆ 1993–94ರಲ್ಲಿ ಶೇ. 38.1 ರಷ್ಟಿದ್ದುದು 2012–13ರಲ್ಲಿ ಅದು ಶೇ. 17.7 ಕ್ಕಿಳಿದಿದೆ.
7. ರಾಜ್ಯದಲ್ಲಿ ಗ್ರಾಮೀಣವಾಸಿಗಳ ಪ್ರಮಾಣ 2001ರಲ್ಲಿ ಶೇ. 77ರಷ್ಟಿದ್ದುದು 2011ರಲ್ಲಿ ಅದು ಶೇ62ಕ್ಕಿಳಿದಿದೆ.
8. ನದಿ ನೀರಿನ ಅಂತರರಾಜ್ಯ ಹಂಚಿಕೆ ವಿವಾದಗಳಿಂದಾಗಿಯೂ ನಮ್ಮ ಕೃಷಿ ಗಂಡಾಂತರವನ್ನು ಎದುರಿಸುತ್ತಿದೆ.
9. ಈ ಎಲ್ಲ ಬದಲಾವಣೆಗಳ ಸೂಚನೆಯೇನೆಂದರೆ ಕರ್ನಾಟಕವು ಕೃಷಿ ಪ್ರಧಾನ ಆರ್ಥಿಕತೆಯಾಗಿ ಮತ್ತು ಗ್ರಾಮೀಣ ಆರ್ಥಿಕತೆಯಾಗಿ ಉಳಿದಿಲ್ಲ.

ಈ ಸಮಸ್ಯೆಯನ್ನು ನಾವು ಗಂಭಿರವಾಗಿ ಎದುರಿಸದಿದ್ದರೆ ನಮಗೆ ತೀವ್ರ ಅಪಾಯ ತಪ್ಪಿದ್ದಲ್ಲ. ಕೃಷಿಯ ಪುನಶ್ಚೇತನವನ್ನು ಯುದ್ಧ ಸಿದ್ದತೆಯೋಪಾದಿಯಲ್ಲಿ ನಿರ್ವಹಿಸುವ ಅಗತ್ಯವಿದೆ.

ಕೃಷಿ ವಲಯದ ಕುಸಿತಕ್ಕೂ ಮತ್ತು ನಗರ ಪ್ರದೇಶಕ್ಕೆ ನಡೆಯುತ್ತಿರುವ ಬೃಹತ್ ಗುಳೆಗೂ ನಡುವೆ ವಿಲೋಮ ಸಂಬಂಧವಿದೆ. ಕೇವಲ ನಗರ ಪ್ರದೇಶದಲ್ಲಿ ಬೆಳವಣಿಗೆಗೆ ಕ್ರಮ ತೆಗೆದುಕೊಂಡರೆ ಸಮಸ್ಯೆ ಬಗೆಹರಿಯುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳನ್ನು ವಿಸ್ತರಿಸಬೇಕು. ಇಲ್ಲದಿದ್ದರೆ ಯಾವುದನ್ನು 'ಪಾಪ್ಯುಲೇಶನ್ ಡಿವಿಡೆಂಡ್' (ಜನಸಂಖ್ಯಾ ಪ್ರಯೋಜನ) ಎಂದು ಕರೆಯುತ್ತಿದ್ದೇವೆಯೋ ಅದು 'ಪಾಪ್ಯುಲೇಶನ್ ಡಿಸಾಸ್ಟರ್' (ಜನಸಂಖ್ಯಾ ಪ್ರಕೋಪ) ಆಗಿ ಬಿಡಬಹುದು.

ಖಾಸಗೀಕರಣವೆಂಬ ಮಹಾಮಾರಿ

ನಾವು 1991ರಲ್ಲಿ ಅಳವಡಿಸಿಕೊಂಡ ಹೊಸ ಆರ್ಥಿಕ ನೀತಿಯ (ಜಾಗತೀಕರಣ) ಪರಿಣಾಮವಾಗಿ ಖಾಸಗಿ ಕಾರ್ಪೊರೇಟ್ ವಲಯ ತೀವ್ರ ಗತಿಯಲ್ಲಿ ಬೆಳೆಯುತ್ತಾ ನಡೆದಿದೆ. ಅದು ನಮ್ಮ ಖಾಸಗಿ ಬದುಕನ್ನು ಬಿಟ್ಟಿಲ್ಲ. ಇದಕ್ಕೆ ನಮ್ಮೆದುರಿಗಿರುವ ಒಂದು ನಿದರ್ಶನವೆಂದರೆ ನಮ್ಮ ಶಾಲಾ ಶಿಕ್ಷಣದಲ್ಲಿ ನಡೆಯುತ್ತಿರುವ ಖಾಸಗೀಕರಣ. ಇದಕ್ಕೆ ಸಂಬಂಧಿಸಿದ ಅಂಕಿಅಂಶಗಳು ಹೀಗಿವೆ:

ಕರ್ನಾಟಕದಲ್ಲಿ ಪ್ರಾಥಮಿಕ–ಪ್ರೌಢ ಶಿಕ್ಷಣ: 2015–16

- ◆ ಒಟ್ಟು ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ: 76,013
- ◆ ಸರ್ಕಾರಿ ಶಾಲೆಗಳ ಸಂಖ್ಯೆ: 50,014 (ಶೇ. 65.80)
- ◆ ಖಾಸಗಿ ಶಾಲೆಗಳ ಸಂಖ್ಯೆ: 25,821 (ಶೇ. 33.97)
- ◆ ಇತರೆ ಶಾಲೆಗಳ ಸಂಖ್ಯೆ: 178 (ಶೇ. 0.23)
- ◆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಒಟ್ಟು ಶಿಕ್ಷಕರ ಸಂಖ್ಯೆ: 3,93,994
- ◆ ಸರ್ಕಾರಿ ಶಾಲಾ ಶಿಕ್ಷಕರ ಸಂಖ್ಯೆ: 2,10,093 (ಶೇ. 53.32)
- ◆ ಖಾಸಗಿ ಶಾಲಾ ಶಿಕ್ಷಕರ ಸಂಖ್ಯೆ: 1,82,262 (ಶೇ. 46.26)
- ◆ ಇತರೆ ಶಾಲಾ ಶಿಕ್ಷಕರ ಸಂಖ್ಯೆ: 1639 (ಶೇ. 0.42)

ಮೂಲ: ಕರ್ನಾಟಕ ಆರ್ಥಿಕ ಸಮೀಕ್ಷೆ: 2015–16 (ಪುಟಗಳು : 532 ಮತ್ತು 538)

ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ನಾಯಿಕೊಡೆಗಳಂತೆ ಖಾಸಗಿ ವಿಶ್ವವಿದ್ಯಾಲಯಗಳೂ ತಲೆಯೆತ್ತುತ್ತಿವೆ. ಹಣವಿರುವವರೆಲ್ಲ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಹಗಲು–ರಾತ್ರಿ ಅನ್ನುವುದರೊಳಗಾಗಿ 'ಶಿಕ್ಷಣ ತಜ್ಞರು' ಎಂದು ತಮ್ಮನ್ನು ತಾವೇ ಘೋಷಿಸಿಕೊಳ್ಳುತ್ತಿದ್ದಾರೆ. ಸರ್ಕಾರವೂ ಕೂಡ ಆರೋಗ್ಯ ಕ್ಷೇತ್ರದಲ್ಲಿ ಕಾಂಟ್ರಾಕ್ಟ್ ಮತ್ತು ಹೊರಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ಪ್ರೋತ್ಸಾಹಿಸುತ್ತಿದೆ. ಅದರ ಅನೇಕ ಯೋಜನೆಗಳು ಅಪ್ರತ್ಯಕ್ಷವಾಗಿ ಖಾಸಗಿ ಕಾರ್ಪೊರೇಟ್ ಸಂಸ್ಥೆಗಳಿಗೆ ಅನುಕೂಲ ಒದಗಿಸುತ್ತಿವೆ. ಖಾಸಗೀಕರಣವು ಸಮಾಜದ ದುಡಿಯುವ ವರ್ಗದ ರಕ್ತ ಹೀರಿ ಸಮೃದ್ಧವಾಗಿ ಬೆಳೆಯುತ್ತಿದೆ. ಇಂದು ಕಾರ್ಮಿಕ ಕಲ್ಯಾಣ ಅನ್ನುವುದು ಚರಿತ್ರೆಗೆ ಸಂಬಂಧಿಸಿದ ಸಂಗತಿಯಾಗಿ ಕಾರ್ಮಿಕ ಸುಧಾರಣೆ ಅನ್ನುವುದು ಕ್ರಮಬದ್ಧವಾದ ಸಂಗತಿಯಾಗಿದೆ.

ಜನರನ್ನು ಒಳಗೊಳ್ಳುವ ಅಭಿವೃದ್ಧಿ

ನಮ್ಮ ಸಂವಿಧಾನದ ಅನುಚ್ಛೇದ 38ರಲ್ಲಿ ಪ್ರಾದೇಶಿಕ ಸಮಾನತೆ ಮತ್ತು ಸಾಮಾಜಿಕ ಗುಂಪುವಾರು ಸಮಾನತೆಯನ್ನು ಮನ್ನಿಸಿದೆ. 'ವರಮಾನ ಅಸಮಾನತೆಯನ್ನು ತಗ್ಗಿಸಲು ಮತ್ತು ವ್ಯಕ್ತಿ ವ್ಯಕ್ತಿಗಳ ನಡುವಿನ ಹಾಗೂ ವಿವಿಧ ಪ್ರದೇಶಗಳಲ್ಲಿ ವಾಸಿಸುತ್ತಿರುವ ವಿವಿಧ ಉದ್ಯೋಗಗಳಲ್ಲಿ ನಿರತರಾಗಿರುವ ಸಾಮಾಜಿಕ ಗುಂಪುಗಳ ನಡುವಿನ ಅಸಮಾನತೆಗಳನ್ನು ನಿವಾರಿಸಲು ಸರ್ಕಾರವು ತೀವ್ರ ಶ್ರಮಿಸುತ್ತದೆ' ಎಂಬುದು ಅನುಚ್ಛೇದದ ಪಾಠವಾಗಿದೆ. ರಾಜ್ಯದಲ್ಲಿ ಇಂದು ದಲಿತ ಸಮುದಾಯ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು ತೀವ್ರ ರೀತಿಯ ತಾರತಮ್ಯಗಳನ್ನು, ಶೋಷಣೆಯನ್ನು, ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಉದಾಹರಣೆಗೆ ರಾಜ್ಯದಲ್ಲಿ ದಲಿತೇತರರ ಸಾಕ್ಷರತಾ ಪ್ರಮಾಣ 2011ರಲ್ಲಿ ಶೇ. 78.56ರಷ್ಟಿದ್ದರೆ ದಲಿತರ (ಪ.ಜಾ+ಪ.ಪಂ) ಸಾಕ್ಷರತಾ ಪ್ರಮಾಣ ಶೇ. 63.40ರಷ್ಟಿದೆ. ಇಲ್ಲಿನ ಸಾಕ್ಷರತೆಗೆ ಸಂಬಂಧಿಸಿದ ಸಾಮಾಜಿಕ ಅಸಮಾನತೆ ಪ್ರಮಾಣ ಶೇ 15.16 ಅಂಶಗಳಷ್ಟಿದೆ. ಸಮಾಜದಲ್ಲಿರುವ ಸಾಂಪ್ರದಾಯಿಕ ತಾರತಮ್ಯ ಸಂಸ್ಕೃತಿಯ ಕಾರಣವಾಗಿ ದಲಿತರು ಅಪಾರ ನಷ್ಟವನ್ನು ಅನುಭವಿಸಬೇಕಾಗಿದೆ. ಕಳೆದ 60 ವರ್ಷಗಳ ಅವದಿಯಲ್ಲಿ ನಮಗೆ ಸಾಮಾಜಿಕ ತಾರತಮ್ಯಗಳನ್ನು ನಿವಾರಿಸುವುದು ಸಾಧ್ಯವಾಗಿಲ್ಲ. ಅಭಿವೃದ್ಧಿ ಅನ್ನುವುದು ವರಮಾನಕ್ಕೆ, ಆರ್ಥಿಕ ಸಮೃದ್ಧತೆಗೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ. ಅದು ಜನರ ಬದುಕಿನ ಸಮೃದ್ಧತೆಗೆ, ಘನತೆಯಿಂದ ಕೂಡಿದ ಬದುಕಿಗೆ ಸಂಬಂಧಿಸಿದ ಸಂಗತಿ. ಈ ದಿಶೆಯಲ್ಲಿ ನಮ್ಮ ಸಾಧನೆಯು ಹೇಳಿಕೊಳ್ಳುವಂತಿಲ್ಲ.

ಲಿಂಗ ತಾರತಮ್ಯದ ವಿಜೃಂಭಣೆ

ನಮ್ಮ ರಾಜ್ಯದಲ್ಲಿನ 2011ರ ಜನಸಂಖ್ಯೆ 6.11 ಕೋಟಿಯಲ್ಲಿ ಮಹಿಳೆಯರ ಸಂಖ್ಯೆ 3.01 ಕೋಟಿ (ಶೇ49.32). ಅತ್ಯಂತ ಆತಂಕಕಾರಿ ಸಂಗತಿಯೆಂದರೆ 2015–16ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್‌ಎಫ್‌ಎಚ್‌ಎಸ್–4) ಪ್ರಕಾರ ರಾಜ್ಯದಲ್ಲಿನ ಗರ್ಭಿಣಿ ಮಹಿಳೆಯರಲ್ಲಿ ಶೇ. 45.4ರಷ್ಟು ಅನಿಮಿಯಾದಿಂದ ನರಳುತ್ತಿದ್ದಾರೆ. ಒಟ್ಟು ಮಹಿಳೆಯರಲ್ಲಿನ ಅನಿಮಿಯಾ ಪ್ರಮಾಣ ಶೇ. 44.8. ರಾಜ್ಯದಲ್ಲಿ 18 ವರ್ಷ ತುಂಬುವುದರೊಳಗೆ ಮದುವೆಯಾಗುವ ಮಹಿಳೆಯರ ಪ್ರಮಾಣ ಶೇ. 20ಕ್ಕಿಂತ ಅಧಿಕವಿದೆ. ಒಂದು ಕಾಲಕ್ಕೆ ವಲಸೆ ಅನ್ನುವುದು ಪುರುಷ ಜಗತ್ತಾಗಿತ್ತು. ಆದರೆ ಇಂದು ದುಡಿಮೆಗಾಗಿ ಮಹಿಳೆಯರೂ ತಂಡೋಪತಂಡವಾಗಿ ನಗರಗಳಿಗೆ ವಲಸೆ ಬರುತ್ತಿದ್ದಾರೆ. ಬೆಂಗಳೂರಿನ ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಮತ್ತು ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಅಗಾದವಾಗಿದೆ. ಅಲ್ಲಿ ಅವರು ಆರ್ಥಿಕ ತಾರತಮ್ಯ ಮತ್ತು ಜಾತಿ ತಾರತಮ್ಯದ ಜೊತೆಯಲ್ಲಿ ಲಿಂಗ ತಾರತಮ್ಯವನ್ನು ಎದುರಿಸಬೇಕಾಗಿದೆ. ಈ ಮೂರು ಬಗೆಯ ಅಸಮಾನತೆಗಳಿಂದಾಗಿ ಮಹಿಳೆಯರ ಬದುಕು ತೀವ್ರ ದುಸ್ಥಿತಿಗೆ ಒಳಗಾಗಿದೆ.

ಪ್ರಾದೇಶಿಕ ಅಸಮಾನತೆ

ನಮ್ಮ ರಾಜ್ಯವನ್ನು 1956ರಿಂದಲೂ ಕಾಡುತ್ತಿರುವ ಒಂದು ಸಮಸ್ಯೆಯೆಂದರೆ ಪ್ರಾದೇಶಿಕ ಅಸಮಾನತೆ. ಕರ್ನಾಟಕದ 30 ಜಿಲ್ಲೆಗಳ ಪೈಕಿ 20 ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕ 2014 ರಲ್ಲಿ 0.550ಕ್ಕಿಂತ ಕೆಳಮಟ್ಟದಲ್ಲಿದೆ. ಈ 20 ಕೆಳಮಟ್ಟದ ಮಾನವ ಅಭಿವೃದ್ಧಿ ಜಿಲ್ಲೆಗಳಲ್ಲಿ ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳ ಜಿಲ್ಲೆಗಳ ಪಾಲು 11. ಕಲಬುರಗಿ ವಿಭಾಗದ ಎಲ್ಲ ಆರು ಜಿಲ್ಲೆಗಳು ಕೆಳಮಟ್ಟದ ಮಾನವ ಅಭಿವೃದ್ಧಿ ಗುಂಪಿಗೆ ಸೇರಿವೆ. ಆದರೆ ಮಾನವ ಅಭಿವೃದ್ಧಿ ಸೂಚ್ಯಂಕ 0.550ಕ್ಕಿತ ಅಧಿಕವಿರುವ 10 ಜಿಲ್ಲೆಗಳ ಗುಂಪಿಗೆ ಕಲಬುರಗಿ ವಿಭಾಗದ ಒಂದು ಜಿಲ್ಲೆಯೂ ಸೇರಿಲ್ಲ ಮತ್ತು ಬೆಳಗಾವಿ ವಿಭಾಗದ ಎರಡು ಜಿಲ್ಲೆಗಳು ಮಾತ್ರ ಸದರಿ ಗುಂಪಿನಲ್ಲಿವೆ. ಕೃಷಿಯ ಅವಲಂಬನೆಯು ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳ್ಲಿ 2011ರಲ್ಲಿ ಶೇ60ಕ್ಕಿಂತ ಅಧಿಕವಿದ್ದರೆ ಬೆಂಗಳೂರು ಮತ್ತು ಮೈಸೂರು ವಿಭಾಗಗಲ್ಲಿ ಅದು ಶೇ45ಕ್ಕಿಂತ ಕಡಿಮೆಯಿದೆ. ಸರ್ಕಾರವು ಏನೆಲ್ಲ ಕ್ರಮಗಳನ್ನು ತೆಗೆದುಕೊಂಡರೂ ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸುವುದು ಸಾಧ್ಯವಾಗಿಲ್ಲ.

ಇಂದು ರಾಜ್ಯೋತ್ಸವದ ವಜ್ರಮಹೋತ್ಸವದ ಸಂದರ್ಭದಲ್ಲಿ ರಾಜ್ಯದಲ್ಲಿ ನಡೆಯುತ್ತಿರುವ ಅಭಿವೃದ್ಧಿ ನಡೆಯ ಬಗ್ಗೆ ಮರುಶೋಧನೆ ಮತ್ತು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ದಲಿತರ, ಬಡವರ, ದುಡಿಮೆಗಾರರ, ಮಹಿಳೆಯರ ಬದುಕಿನ ಸ್ಥಿತಿಗತಿಯು ಅಭಿವೃದ್ಧಿಯ ಮೌಲ್ಯಮಾಪನದ ಮಾನದಂಡವಾಗಬೇಕು. ಎಸ್‌ಡಿಪಿ, ರಫ್ತು, ಡಿಜಿಟೈಸೇಶನ್, ಸ್ವಚ್ಛತೆ, ಎಕ್ಸಪ್ರೆಸ್ ಹೈವೇಗಳು, ಉಕ್ಕಿನ ಸೇತುವೆಗಳು ಇತ್ಯಾದಿ ಅಭಿವೃದ್ಧಿಯ ಮಾನದಂಡಗಳಲ್ಲ. ಜಾನ್ ರಾಲ್ಸ್ ಹೇಳುವಂತೆ ಅಭಿವೃದ್ಧಿ ಅನ್ನುವುದು ವಂಚಿತರಿಗೆ, ಅಂಚಿನಲ್ಲಿರುವವರಿಗೆ, ದಲಿತರಿಗೆ, ಮಹಿಳೆಯರಿಗೆ ಅಭಿಮುಖವಾಗಿರಬೇಕು. ಕಾರ್ಪೊರೇಟ್ ಜಗತ್ತಿನ ಕ್ವಾಟರ್ಲಿ ಲಾಭದ ಪ್ರಮಾಣವಾಗಲಿ, ಸೆನ್ಸೆಕ್ಸ್ ಸೂಚ್ಯಂಕವಾಗಲಿ ಅಭಿವೃದ್ಧಿಯ ಸೂಚಿಗಳಲ್ಲ. ಅಭಿವೃದ್ಧಿಯು ಅಭಿಶಾಪವಾಗಬಾರದು. ಇದು ಜನರ ಬದುಕಿನ ಜೀವದ್ರವವಾಗಬೇಕು. ●



ಮೋದಿ ರಾಜ್ಯದಲ್ಲಿ ಉದ್ಯೋಗ ಇಲ್ಲ



ಇದರಿಂದಾಗಿ ಮೀಸಲಾತಿಗಾಗಿ ಗುಜರಾತ್‌ನಲ್ಲಿ ಪಾಟಿದಾರ್, ಹರ್ಯಾಣದಲ್ಲಿ ಜಾಟ್ ಮತ್ತು ಮಹಾರಾಷ್ಟ್ರದಲ್ಲಿ ಮರಾಠ ಯುವಜನರು ಬೀದಿಗಿಳಿದಿದ್ದಾರೆ. ಮೋದಿ ಸರಕಾರದ ಉದ್ಯೋಗ ಕೊಲ್ಲುವ ಧೋರಣೆಗಳ ವಿರುದ್ಧ ಹೋರಾಟ ನಡೆಸುವುದು ಅತ್ಯಗತ್ಯವಾಗಿದೆ. ಇದಕ್ಕೆ ಕೃಷಿ ಬೆಳವಣಿಗೆಯನ್ನು ಪುನರುಜ್ಜೀವನಗೊಳಿಸುವ ಮೂಲಕ ಉದ್ಯೋಗ ಸೃಷ್ಟಿಸುವ, ಆರ್ಥಿಕತೆಯಲ್ಲಿ ಬೇಡಿಕೆ ಹೆಚ್ಚಳಕ್ಕೆ ಕಾರಣವಾಗುವ ಮತ್ತು ಶ್ರಮ ಶಕ್ತಿಯೇ ಹೆಚ್ಚಾಗಿ ಬೇಕಾಗಿರುವ ಕೈಗಾರಿಕೆಗಳ ಬೆಳವಣಿಗೆಯನ್ನು ಸ್ಫುರಿಸುವ ಪರ್ಯಾಯ ನೀತಿಗಳ ಜಾರಿಗಾಗಿ ಹೋರಾಡುವುದು ಅಗತ್ಯವಾಗಿದೆ.

*** ಪ್ರಕಾಶ್ ಕಾರಟ್**

ಉದ್ಯೋಗ ರಂಗದಲ್ಲಿ ಭಾರತ ಎದುರಿಸುತ್ತಿರುವ ಬಿಕ್ಕಟ್ಟು ಆಳಗೊಳ್ಳುತ್ತಿದೆ. ಲೇಬರ್ ಬ್ಯೂರೋ ನಡೆಸಿದ ಒಂದು ಹೊಸ ಉದ್ಯೋಗ-ನಿರುದ್ಯೋಗ ಸಮೀಕ್ಷೆ ಪ್ರಕಾರ, ಭಾರತದಲ್ಲಿನ ನಿರುದ್ಯೋಗ ಕಳೆದ ಐದು ವರ್ಷಗಳಲ್ಲೇ ಅತಿ ಹೆಚ್ಚಿನ ಮಟ್ಟ ತಲುಪಿದೆ. ದುಡಿಮೆಯಲ್ಲಿರುವ 15 ವರ್ಷ ಮತ್ತು ಹೆಚ್ಚಿನ ವಯಸ್ಸಿನ ವ್ಯಕ್ತಿಗಳಲ್ಲಿ ಐದು ಶೇಕಡಾ ಮಂದಿ ನಿರುದ್ಯೋಗಿಗಳು. ಕೆಲಸ ಮಾಡುತ್ತಿರುವವರಲ್ಲಿ ಶೇಕಡಾ ಮೂರಕ್ಕಿಂತ ಹೆಚ್ಚಿನವರು ಕೇವಲ ಒಂದು ವರ್ಷಕ್ಕಿಂತ ಕಡಿಮೆ ಅವಧಿಯಿಂದ ಕೆಲಸ ಮಾಡುತ್ತಿರುವವರಾಗಿದ್ದಾರೆ. 2011ರ ಜನಗಣತಿಯ ಅಂಕಿ-ಅಂಶಗಳನ್ನು ಆಧರಿಸಿ ಹೇಳುವುದಾದರೆ, ಹದಿನೈದು ವರ್ಷಗಳಿಗಿಂತ ಮೇಲಿನ ವಯಸ್ಸಿನ ಶೇಕಡಾ ಐದರಷ್ಟು ಜನರೆಂದರೆ 2.3 ಕೋಟಿ ಆಗುತ್ತದೆ. ಶೇಕಡಾ 35 ಅರೆ-ಉದ್ಯೋಗ ಎಂದರೆ 16 ಕೋಟಿ ಜನರಾಗುತ್ತಾರೆ.

ಇತ್ತೀಚಿನ ಈ ಸಮೀಕ್ಷೆ ಕೈಗಾರಿಕೆಗಳಲ್ಲಿನ ಉದ್ಯೋಗ ಪರಿಸ್ಥಿತಿ ಕುರಿತ ಇನ್ನೊಂದು ಲೇಬರ್ ಬ್ಯೂರೋದ ಸರ್ವೆಯಲ್ಲಿ ಕಂಡ ಪ್ರವೃತ್ತಿಯನ್ನು ದೃಢಪಡಿಸುತ್ತದೆ. ಎಂಟು ಶ್ರಮಶಕ್ತಿ ಹೆಚ್ಚಾಗಿ ಬೇಕಾಗುವ ಕ್ಷೇತ್ರಗಳಲ್ಲಿನ- ಜವಳಿ, ಚರ್ಮ, ಲೋಹ, ಆಟೋಮೊಬೈಲ್, ಮುತ್ತುಗಳು ಮತ್ತು ಆಭರಣಗಳು, ಸಾರಿಗೆ, ಮಾಹಿತಿ ತಂತ್ರಜ್ಞಾನ, ಮತ್ತು ಕೈಮಗ್ಗ ಹಾಗೂ ವಿದ್ಯುತ್ ಮಗ್ಗ ಕ್ಷೇತ್ರಗಳಲ್ಲಿನ- ತ್ರೈಮಾಸಿಕ ಸಮೀಕ್ಷೆಯನ್ನು ಲೇಬರ್ ಬ್ಯೂರೋ ಮಾಡುತ್ತದೆ. 2015ರ ಜುಲೈ-ಸೆಪ್ಟೆಂಬರ್ ಅವಧಿಯ ವರದಿ ಪ್ರಕಾರ ಕೇವಲ 1,34,000 ಉದ್ಯೋಗಗಳು ಸೃಷ್ಟಿಯಾಗಿವೆ ಎಂದು ಸಮೀಕ್ಷೆ ಹೇಳಿದೆ. ಇದು 2009-2011ರ ನಡುವೆ ಪ್ರತಿ ತ್ರೈಮಾಸಿಕದಲ್ಲಿ ಸೃಷ್ಟಿಯಾದ ಮೂರು ಲಕ್ಷ ಉದ್ಯೋಗಕ್ಕಿಂತ ತುಂಬಾ ಕಡಿಮೆಯಾಗಿದೆ.

ಮೋದಿ ಸರಕಾರ ಹೇಳಿಕೊಳ್ಳುತ್ತಿರುವ ಉತ್ಪ್ರೇಕ್ಷಿತ ಜಿಡಿಪಿ ಬೆಳವಣಿಗೆ ದರ ಕೇವಲ ಉದ್ಯೋಗರಹಿತ ಬೆಳವಣಿಗೆಗೆ ಹಾದಿ ಮಾಡುತ್ತಿದೆ ಅಷ್ಟೇ. 2012-13 ಮತ್ತು 2015-16ರ ನಡುವಿನ ವಾಸ್ತವ ಪರಿಸ್ಥಿತಿಯಿಂದ ಇದು ಸಾಬೀತಾಗುತ್ತದೆ. ಈ ಅವಧಿಯಲ್ಲಿ ಜಿಡಿಪಿಯಲ್ಲಿನ ಪ್ರತಿ ಒಂದು ಶೇಕಡಾ ಏರಿಕೆಗೆ ಉದ್ಯೋಗ ಹೆಚ್ಚಳವಾಗಿದ್ದು ಕೇವಲ 0.20 ಶೇಕಡಾ.

ಉದ್ಯೋಗ ಸೃಷ್ಟಿಗೆ ವಿಫಲವಾಗಿದ್ದು ಮೋದಿ ಸರಕಾರದ ಇದುವರೆಗಿನ ಒಂದು ಅತ್ಯಂತ ದೊಡ್ಡ ವೈಫಲ್ಯವಾಗಿದೆ. ಮುಂದಿನ ಐದು ವರ್ಷ ಕಾಲ ಪ್ರತಿ ವರ್ಷ ಒಂದು ಕೋಟಿ ಉದ್ಯೋಗ ಸೃಷ್ಟಿ ಮಾಡುವುದಾಗಿ ಬಿಜೆಪಿ ತನ್ನ 2014ರ ಚುನಾವಣೆ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿತ್ತು. ಮೋದಿಯವರ ಮುದ್ದಿನ 'ಮೇಕ್ ಇನ್ ಇಂಡಿಯಾ' ಘೋಷಣೆ ಎಷ್ಟು ಪೊಳ್ಳು ಎಂಬುದು ಬಹುಬೇಗನೆ ಸಾಬೀತಾಗುತ್ತಿದೆ. ಸಾರ್ವಜನಿಕ ಹೂಡಿಕೆ ವಿಚಾರದಲ್ಲಿ ಹಣಕಾಸು ಸಚಿವರು ಅತಿಶಯದ ಹೇಳಿಕೆಗಳನ್ನು ನೀಡುತ್ತಿದ್ದರೂ ಸಾರ್ವಜನಿಕ ಕ್ಷೇತ್ರದಲ್ಲಿನ ಹೂಡಿಕೆ ಏನೇನೂ ಏರಿಕೆ ಕಂಡಿಲ್ಲ. ಖಾಸಗಿ ರಂಗದಲ್ಲಿನ ಹೂಡಿಕೆ ಕೂಡ ತುಂಬಾ ಕಡಿಮೆಯಿದೆ. ಕೈಗಾರಿಕಾ ಉತ್ಪಾದನೆ ಸತತವಾಗಿ ಕುಸಿಯುತ್ತಿದೆ. ವರ್ಷವರ್ಷವೂ ಸತತ ಎರಡು ತಿಂಗಳುಗಳಲ್ಲಿ ಹಿಂದಿನ ವರ್ಷದ ಅದೇ ಅವಧಿಗೆ ಹೋಲಿಸಿದಾಗ ಜುಲೈ ಮತ್ತು ಆಗಸ್ಟ್‌ನಲ್ಲಿ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ 2.5 ಶೇಕಡಾ ಮತ್ತು 0.7 ಶೇಕಡಾದಷ್ಟು ಕುಸಿದಿದೆ.

ಮೋದಿ ಸರಕಾರದ ನೀತಿಗಳು ಉದ್ಯೋಗ ಬೆಳವಣಿಗೆಗೆ ಕೊಡುಗೆ ನೀಡದಂತೆ ತಡೆ ಹಾಕುತ್ತಿವೆ. ಕಳೆದ ಮೂರೂ ಬಜೆಟ್‌ಗಳಲ್ಲಿ ಕೇಂದ್ರ ಸರಕಾರ ನಿಗದಿ ಮಾಡಿದ ನಿಜ ಮೊತ್ತಗಳು ಜಿಡಿಪಿ ಬೆಳವಣಿಗೆಯ ಮಟ್ಟಕ್ಕೆ ಕೂಡ ಬೆಳೆದಿಲ್ಲ. ಜಿಡಿಪಿಯಲ್ಲಿ ಸರಕಾರದ ವೆಚ್ಚಗಳ ಪಾಲು ಕಡಿಮೆಯಾಗುತ್ತಿದೆ. ಇದು ಬೇಡಿಕೆ ಮತ್ತು ಉದ್ಯೋಗ ಸೃಷ್ಟಿ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ. ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆ ಮತ್ತು ಗ್ರಾಮೀಣ ಅಭಿವೃದ್ಧಿ ಮೇಲಿನ ವೆಚ್ಚವನ್ನು ಮೊದಲ ಎರಡು ವರ್ಷಗಳಲ್ಲಿ ಮೋದಿ ಸರಕಾರ ಕಡಿತ ಗೊಳಿಸಿದೆ. ಅದು ಪರೋಕ್ಷ ತೆರಿಗೆಗಳನ್ನು ಹೆಚ್ಚಿಸಿದೆ. ಆ ರೀತಿ ಮಾಡುವುದರಿಂದ, ಜಿಡಿಪಿಯನ್ನು ಮಾರುಕಟ್ಟೆ ದರದಲ್ಲಿ ಲೆಕ್ಕ ಹಾಕುವ ಈಗಿನ ವಿಧಾನದಲ್ಲಿ ಬೆಳವಣಿಗೆ ದರ ಕೃತಕವಾಗಿ ಏರುತ್ತದೆ. ಈ ಎರಡೂ ಅಂಶಗಳು ಜನಸಮೂಹದ ಕೊಳ್ಳುವ ಶಕ್ತಿಯನ್ನು ಪರಿಮಿತಗೊಳಿಸಿವೆ. ಶ್ರೀಮಂತರಿಗೆ ಹೋಲಿಸಿದರೆ ಶ್ರಮ ಶಕ್ತಿ ಹೆಚ್ಚು ಬೇಕಾಗಿರುವ ಸರಕುಗಳಿಗೆ ಜನಸಾಮಾನ್ಯರ ಬೇಡಿಕೆ ಹೆಚ್ಚಿರುತ್ತದೆ.

ಇದಕ್ಕೆ ಮೋದಿ ಸರಕಾರದ ನವ-ಉದಾರವಾದಿ ಪ್ರತಿಕ್ರಿಯೆ ಎಂದರೆ ಉದ್ಯೋಗ ಬೆಳವಣಿಗೆ ಕುಂದಲು ಕಾರ್ಮಿಕ ಕಾನೂನುಗಳ ಕಾಠಿಣ್ಯವೇ ಕಾರಣ ಎಂದು ಆಪಾದಿಸುವುದು. ಉದ್ಯೋಗ ಸೃಷ್ಟಿಯ ಬದಲು ಈಗ ಕಾರ್ಮಿಕ ಕಾನೂನುಗಳ ಎಲ್ಲಾ ಕಾರ್ಮಿಕ ಮತ್ತು ಉದ್ಯೋಗ ಸ್ನೇಹಿ ಅಂಶಗಳನ್ನು ತೆಗೆದುಹಾಕಿ, ಅವುಗಳ ಜಾಗದಲ್ಲಿ ಕರಾಳ ಕಾರ್ಮಿಕ-ವಿರೋಧಿ ಅಂಶಗಳನ್ನು ತರಲು ಮೋದಿ ಸರಕಾರ ತುದಿಗಾಲಿನ ಮೇಲೆ ನಿಂತಿದೆ.

ಕೃಷಿ ಬಿಕ್ಕಟ್ಟಿನ ಜೊತೆಯಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಸಾಮೂಹಿಕ ಅತೃಪ್ತಿ ಮತ್ತು ಸಾಮಾಜಿಕ ಬಿಗುವುಗಳಿಗೆ ಕಾರಣವಾಗುತ್ತಿದೆ. ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಗಾಗಿ ಗುಜರಾತ್‌ನಲ್ಲಿ ಪಾಟಿದಾರ್‌ಗಳ ಚಳವಳಿ, ಹರ್ಯಾಣದಲ್ಲಿ ಜಾಟ್‌ಗಳ, ಮಹಾರಾಷ್ಟ್ರದಲ್ಲಿ ಮರಾಠರ ಮತ್ತು ಆಂಧ್ರ ಪ್ರದೇಶದಲ್ಲಿ ಕಾಪುಗಳ ಚಳವಳಿಯಲ್ಲಿ ಅದು ಪ್ರತಿಫಲನಗೊಂಡಿದೆ. ಇವೆಲ್ಲ ಎಷ್ಟು ಅಲ್ಪ ಪ್ರಮಾಣದಲ್ಲಿ ಉತ್ಪಾದಕ ಉದ್ಯೋಗ ನಿರ್ಮಾಣ ಮಾಡುತ್ತಿರುವುದರಿಂದಾಗಿ ಯಾವ ರೀತಿಯಲ್ಲಿ ಸರಕಾರಿ ರಂಗದಲ್ಲಿ ಮಾತ್ರ ಲಭ್ಯವಿರುವ ಸುಭದ್ರ ಉದ್ಯೋಗಗಳಿಗೆ ಬೇಡಿಕೆ ಬರುತ್ತಿದೆ ಎನ್ನುವುದರ ಲಕ್ಷಣಗಳು.

ಹೀಗಾಗಿ ಮೋದಿ ಸರಕಾರದ ಉದ್ಯೋಗ ಕೊಲ್ಲುವ ಧೋರಣೆಗಳ ವಿರುದ್ಧ ಹೋರಾಟ ನಡೆಸುವುದು ಅತ್ಯಗತ್ಯವಾಗಿದೆ. ಹಾಗೂ ಕೃಷಿ ಬೆಳವಣಿಗೆಯನ್ನು ಪುನರುಜ್ಜೀವನಗೊಳಿಸುವ ಮೂಲಕ ಉದ್ಯೋಗ ಸೃಷ್ಟಿಸುವ, ಆರ್ಥಿಕತೆಯಲ್ಲಿ ಬೇಡಿಕೆ ಹೆಚ್ಚಳಕ್ಕೆ ಕಾರಣವಾಗುವ ಮತ್ತು ಶ್ರಮ ಶಕ್ತಿಯೇ ಹೆಚ್ಚಾಗಿ ಬೇಕಾಗಿರುವ ಕೈಗಾರಿಕೆಗಳ ಬೆಳವಣಿಗೆಯನ್ನು ಸ್ಫುರಿಸುವ ಪರ್ಯಾಯ ನೀತಿಗಳ ಜಾರಿಗಾಗಿ ಹೋರಾಡುವುದು ಅಗತ್ಯವಾಗಿದೆ. ●

ಅನುವಾದ : ವಿಶ್ವ

ಜೆಎನ್‌ಯು ವಿದ್ಯಾರ್ಥಿಗಳು ಮತ್ತೆ ಚಳುವಳಿಯ ಕಣದಲ್ಲಿ

ಪುಟ 2 ರಿಂದ

ಉಪಕುಲಪತಿ ಸೇರಿದಂತೆ ವಿವಿ ಆಡಳಿತ ಕ್ರಮ ವಹಿಸದೆ ಹಲ್ಲೆ ನಡೆಸಿದ ಎಬಿವಿಪಿ ಮಂದಿಯ ರಕ್ಷಣೆಗೆ ಮುಂದಾಗಿದೆ, ಅವರೊಂದಿಗೆ ಶಾಮೀಲಾಗಿ ಇದಕ್ಕೆ ಕೋಮು ಬಣ್ಣ ಕೊಡಲು ಅರೆ ಸತ್ಯಗಳನ್ನು, ಕೆಲವೊಮ್ಮೆ ಹಸಿ ಸುಳ್ಳುಗಳನ್ನು ಹರಡಿಸುತ್ತಿದೆ, ಜೆಎನ್‌ಯು ವಿದ್ಯಾರ್ಥಿ ಸಂಘದ ವಿರುದ್ಧ ಅಪಪ್ರಚಾರಕ್ಕೆ ಇದನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ವಿದ್ಯಾರ್ಥಿಗಳು ಆರೋಪಿಸುತ್ತಿದ್ದಾರೆ.

ಆಕ್ರೋಶಗೊಂಡ ವಿದ್ಯಾರ್ಥಿಗಳು ಉಪಕುಲಪತಿ ಮತ್ತು ಇತರ ವಿವಿ ಆಡಳಿಗಾರರ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ, ಈ ನಡುವೆ ನಜೀಬ್ ಅವರ ತಂದೆ-ತಾಯಿ ಪೋಲೀಸರಿಗೆ ದೂರುಕೊಟ್ಟ ನಂತರವೇ ಅಪಹರಣ ಮತ್ತು ತಪ್ಪಾಗಿ ಕೂಡಹಾಕಿದ್ದಾರೆ ಎಂಬ ಎಫ್‌ಐಆರ್ ದಾಖಲಾಗಿದೆ. ಆದರೆ ನಜೀಬ್ ಪತ್ತೆಯಾಗಿಲ್ಲ. ಆತ ನಾಪತ್ತೆಯಾಗಿ ಏಳು ದಿನಗಳ ನಂತರವೂ ವಿವಿ ಆಡಳಿತ ಈ ಬಗ್ಗೆ ಗಮನವನ್ನೇ ಕೊಡದಿರುವುದನ್ನು ಕಂಡು ವಿದ್ಯಾರ್ಥಿಗಳು ಅಕ್ಟೋಬರ್21ರಂದು ಗೃಹಮಂತ್ರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಲು ಹೋದಾಗ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಬಂಧಿಸಲಾಯಿತು.

ಜೆಎನ್‌ಯುಎಸ್‌ಯು ನೇತೃತ್ವದಲ್ಲಿ ನಡೆಯುತ್ತಿರುವ ನಜೀಬ್‌ಗೆ ನ್ಯಾಯ ಕೊಡಿಸಬೇಕೆಂಬ ಚಳುವಳಿ ಆರಂಭವಾಗಿದೆ. ನಜೀಬ್ ಪತ್ತೆಗೆ ತ್ವರಿತ ಪೋಲೀಸ್ ಕ್ರಮಗಳನ್ನು ಕೈಗೊಳ್ಳಬೇಕು, ಜೆಎನ್‌ಯು ಆಡಳಿತ ಅಧಿಕೃತವಾಗಿ ಪೋಲೀಸ್‌ಗೆ ದೂರು ನೀಡಬೇಕು, ಅಕ್ಟೋಬರ್14ರ ಘಟನೆಗಳ ವಿಚಾರಣಾ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು, ಸಮಯಬದ್ಧ ಕ್ರಮ ಮತ್ತು ಕ್ಯಾಂಪಸ್‌ನಲ್ಲಿ ನಜೀಬ್‌ಗೆ ಸುರಕ್ಷಿತತೆ-ಇವೀಗ ಈ ಚಳುವಳಿಯ ಬೇಡಿಕೆಗಳು.

ಅಕ್ಟೋಬರ್ 24ರಂದು ಜಂತರ್‌ಮಂತರ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಮತ್ತು ಸಿಪಿಐ ಹಿರಿಯ ಮುಖಂಡ ಡಿ.ರಾಜ ಭಾಗವಹಿಸಿ ಮಾತಾಡಿದರು, ಈ ಸರಕಾರ ಕೃಪಾಪೋಷಣೆಯಲ್ಲಿ ಕೆಲವು ವಿದ್ಯಾರ್ಥಿ ಸಂಘಟನೆಗಳು ಹೇಗೆ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರಜಾಪ್ರಭುತ್ವದ ಹಕ್ಕುಗಳನ್ನು ಹೊಂದದಂತೆ, ಭಿನ್ನಾಭಿಪ್ರಾಯ, ಚರ್ಚೆಗಳನ್ನು ಬಗ್ಗುನಡೆಯಲು ಪ್ರಯತ್ನಿಸುತ್ತಿವೆ ಎಂದು ನಮಗೆ ತಿಳಿದಿದೆ ಎಂದ ಯೆಚೂರಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಸಿಪಿಐ(ಎಂ) ಈ ಪ್ರಶ್ನೆಯನ್ನು ಎತ್ತುತ್ತದೆ, ಸದಾ ನಜೀಬ್ ಕುಟುಂಬದ ಸದಸ್ಯರು ಮತ್ತು ವಿದ್ಯಾರ್ಥಿಗಳ ಬೆಂಬಲಕ್ಕೆ ನಿಲ್ಲುತ್ತದೆ ಎಂದು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ನಜೀಬ್ ಅವರ ತಾಯಿಗೆ ಭರವಸೆ ನೀಡಿದರು.

ಧರ್ಮದ ಹೆಸರಲ್ಲಿ ಮತಯಾಚನೆ 'ಭ್ರಷ್ಟ ನಡವಳಿಕೆ'ಯ ಪರಿಧಿಗೆ ಬರುವುದಿಲ್ಲವೇ?

ಎಂಬುದರ ವಿಚಾರಣೆಯಲ್ಲಿ ಮಧ್ಯಪ್ರವೇಶದ ಸಿಪಿಐ(ಎಂ) ಅರ್ಜಿಗೆ ಸುಪ್ರಿಂ ಕೋರ್ಟ್ ಸ್ವೀಕೃತಿ


ಧರ್ಮದ ಹೆಸರಲ್ಲಿ ಮತಯಾಚನೆ 'ಭ್ರಷ್ಟ ನಡವಳಿಕೆ'ಯ ಪರಿಧಿಗೆ ಬರುತ್ತದೆಯೇ ಎಂಬ ಬಗ್ಗೆ ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 123(3)ರ ಅಧಿಕಾರವಾಣಿಯ ವ್ಯಾಖ್ಯೆ ನೀಡಬೇಕೆಂಬ ಒಂದು ಸಿವಿಲ್ ಅಪೀಲಿನ ವಿಚಾರಣೆ ಸುಪ್ರಿಂ ಕೋರ್ಟಿನ ಏಳು ನ್ಯಾಯಾಧೀಶರ ಪೀಠದಿಂದ ನಡೆಯುತ್ತಿದೆ. ದೇಶದ ಮುಖ್ಯ ನ್ಯಾಯಾಧೀಶ ನ್ಯಾಯಮೂರ್ತಿ ಟಿ ಎಸ್ ಠಾಕೂರ್ ಈ ಪೀಠದ ಮುಖ್ಯಸ್ಥರಾಗಿದ್ದಾರೆ.

ಈ ವಿಚಾರಣೆಯಲ್ಲಿ ಮಧ್ಯಪ್ರವೇಶಿಸಲು ಅವಕಾಶ ನೀಡಬೇಕು ಎಂಬ ಸಿಪಿಐ(ಎಂ)ನ ಅರ್ಜಿಯನ್ನು ಸುಪ್ರಿಂ ಕೋರ್ಟ್ ಸ್ವೀಕರಿಸಿದೆ ಎಂದು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ತಿಳಿದು ಬಂದಿದೆ.

ಈ ಕಾಯ್ದೆಯ ಸೆಕ್ಷನ್ 123(3) "ಒಬ್ಬ ಅಭ್ಯರ್ಥಿ ಅಥವ ಆತನ ಏಜೆಂಟ್ ಅಥವ ಅಭ್ಯರ್ಥಿಯ ಒಪ್ಪಿಗೆಯಿಂದ ಬೇರೆ ಯಾರೇ ಆದರೂ ಆ ಅಭ್ಯರ್ಥಿಯ ಚುನಾವಣಾ ನಿರೀಕ್ಷೆಗಳನ್ನು ಹೆಚ್ಚಿಸುವ ಅಥವ ಯಾವುದೇ ಅಭ್ಯರ್ಥಿಯ ಚುನಾವಣೆಗೆ ಅಡ್ಡಿಯಾಗುವಂತಹ ರೀತಿಯಲ್ಲಿ ಭಾರತದ ನಾಗರಿಕರ ವಿವಿಧ ವರ್ಗಗಳ ನಡುವೆ ಧರ್ಮ, ಕುಲ, ಜಾತಿ, ಸಮುದಾಯ, ಅಥವ ಭಾಷೆಯ ಆಧಾರದಲ್ಲಿ ವೈರತ್ವ ಅಥವ ದ್ವೇಷದ ಭಾವನೆಗಳನ್ನು ಪ್ರೋತ್ಸಾಹಿಸುವುದು ಅಥವ ಅಂತಹ ಪ್ರಯತ್ನ ಮಾಡುವುದು......." ಭ್ರಷ್ಟ ನಡವಳಿಕೆ ಎಂದು ನಿರೂಪಿಸುತ್ತದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಮೂಲಕ ಸಲ್ಲಿಸಿರುವ ಮಧ್ಯಪ್ರವೇಶದ ಅರ್ಜಿಯಲ್ಲಿ ಸಿಪಿಐ(ಎಂ)ನ ಕಾರ್ಯಕ್ರಮ ಪರಿಚ್ಛೇದ 5.7 ಮತ್ತು 5.8ರಲ್ಲಿ ಜಾತ್ಯಾತೀತತೆಗೆ ಮತ್ತು ಅದರ ಜಾರಿಗೆ ರಾಜಿಯಿಲ್ಲದ ಹೋರಾಟ ನಡೆಸಲು ತಾನು ಬದ್ಧ ಎಂದು ಪ್ರತಿಜ್ಞೆ ಮಾಡುತ್ತದೆ ಎಂದು ಹೇಳಲಾಗಿದೆ.

ಈ ವಿಚಾರಣೆಯ ವೇಳೆಯಲ್ಲಿ ನ್ಯಾಯಪೀಠ ಧರ್ಮದ ಹೆಸರಿನಲ್ಲಿ ಮತಯಾಚನೆ ನಮ್ಮ ಪ್ರಜಾಪ್ರಭುತ್ವದಲ್ಲಿ ಚುನಾವಣೆಯ ಜಾತ್ಯಾತೀತ ಪರಿಕಲ್ಪನೆಗೆ ಬಾಧೆ ತರಬಹುದು ಎಂದು ಎಚ್ಚರಿಸುತ್ತ ಚುನಾವಣೆಯಲ್ಲಿ ಸ್ಪರ್ಧಿಸುವುದು ಒಂದು ಕಾನೂನಾತ್ಮಕ ಹಕ್ಕು, ಜಾತ್ಯಾತೀತತೆ ಒಂದು ಮೂಲ ಅಂಶ, ಜಾತ್ಯಾತೀತತೆಯನ್ನು ಪ್ರೋತ್ಸಾಹಿಸದ ಒಂದು ವ್ಯಾಖ್ಯೆ ಕೊಡಲು ಸಾಧ್ಯವೇ ಎಂದು ಕೇಳಿರುವುದಾಗಿ ಈ ಮೊದಲು ವರದಿಯಾಗಿತ್ತು.



ಕಂಪೆನಿ ಕೃಷಿಯನ್ನು ಧಿಕ್ಕರಿಸಿ, ರೈತರು, ಕೃಷಿಕೂಲಿಕಾರರ ಆಧಾರಿತ ಕೃಷಿಯನ್ನು ಸಂರಕ್ಷಿಸಲು

ಕಿಸಾನ್ ಸಂಘರ್ಷ ಜಾಥಾ

ದೇಶದ ಶೇ. 80 ರಷ್ಟಿರುವ ಬಡ, ಮಧ್ಯಮ, ಕೆಳವರ್ಗದ ರೈತರು ಕೂಲಿಕಾರರು ಮತ್ತು ದುಡಿಯುವ ವರ್ಗವನ್ನು ಪ್ರತಿನಿಧಿಸಿ ಅಖಿಲ ಭಾರತ ಕಿಸಾನ್ ಸಭಾ ನೇತೃತ್ವದಲ್ಲಿ 'ಕಿಸಾನ್ ಸಂಘರ್ಷ ಜಾಥಾ"ವನ್ನು ಸಂಘಟಿಸುತ್ತಿದೆ. ದೇಶದ 4 ದಿಕ್ಕುಗಳಿಂದ ನವೆಂಬರ್ 2 ರಂದು ಹೊರಡುವ ಜಾಥಾಗಳು ನವೆಂಬರ್ 24 ರಂದು ದೆಹಲಿಯಲ್ಲಿ ಒಂದು ಲಕ್ಷ ರೈತರ.ಬೃಹತ್ ಪ್ರತಿಭಟನೆಯ ಮೂಲಕ ಸಮಾರೋಪಗೊಳ್ಳಲಿವೆ.

ಹೆಚ್.ಆರ್. ನವೀನ್ ಕುಮಾರ್

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ದೇಶವನ್ನು ಒತ್ತೆ ಇಡುವ ಜಾಗತೀಕರಣದ ನೀತಿಗಳನ್ನು ಗಂಭಿರವಾಗಿ ಜಾರಿಗೆ ತರುತ್ತಿದ್ದು ಇದರ ಪರಿಣಾಮವಾಗಿ ದೇಶದಲ್ಲಿ ಗಂಭಿರವಾದ ಬಿಕ್ಕಟ್ಟು ಆವರಿಸಿದೆ. ಇದು ಕೃಷಿ ರಂಗವನ್ನು ತೀವ್ರವಾಗಿ ಬಾಧಿಸಿದೆ. ಬೀಜ, ಗೊಬ್ಬರ, ಕ್ರಿಮಿನಾಶಕ ಮತ್ತು ಕೃಷಿ ಉಪಕರಣಗಳ ವೆಚ್ಚಗಳು ಮತ್ತು ಸಾಲದ ಬಡ್ಡಿದರವು ದಿನೇ ದಿನೇ ಹೆಚ್ಚುತ್ತಲೇ ಇವೆ. ಅದೇ ಸಂದರ್ಭದಲ್ಲಿ ನಾವು ಬೆಳೆಯುವ ಬೆಳೆಗೆ ಅಗ್ಗ ದರದ ವಿದೇಶಿ ಕೃಷಿ ಉತ್ಪನ್ನಗಳ ಕಾರಣದಿಂದ ಮತ್ತು ಸರಕಾರಗಳು ನಮ್ಮ ಬೆಳೆಗಳಿಗೆ ವೈಜ್ಞಾನಿಕವಾಗಿ ಲೆಕ್ಕಾಚಾರ ಮಾಡಿ ಬೆಲೆಗಳನ್ನು ನಿಗದಿಸಿ, ಅವುಗಳನ್ನು ಖಾತ-ರಿಯಾಗಿ ರೈತರಿಗೆ ತಲುಪಿಸುವ ಇಚ್ಚಾಶಕ್ತಿಯನ್ನು ಹೊಂದಿಲ್ಲದಿರುವುದರಿಂದ ವ್ಯವಸಾಯ ಗಂಭೀರ ನಷ್ಟದಲ್ಲಿದೆ.

ಕಳೆದ ಹತ್ತು ವರ್ಷಗಳ ಹಿಂದೆಯೇ ಡಾ.ಎಂ. ಎಸ್.ಸ್ವಾಮಿನಾಥ್‌ರವರ ಅಧ್ಯಕ್ಷತೆಯ ಸಮಿತಿ ಶಿಪಾರಸ್ಸು ಕೃಷಿ ಉತ್ಪನ್ನದ ಖರ್ಚಿನ ಶೇ. 50 ರಷ್ಟನ್ನು ಸೇರಿಸಿ ಬೆಲೆ ನಿಗದಿಮಾಡಬೇಕೆಂದು ಶಿಫಾರಸ್ಸು ನೀಡಿದ್ದರೂ ಹಿಂದಿನ ಕಾಂಗ್ರೇಸ್ ನೇತೃತ್ವದ ಯು.ಪಿ.ಎ ಸರ್ಕಾರವಾಗಲಿ ಪ್ರಸ್ತುತ ಬಿ.ಜೆ.ಪಿ ನೇತೃತ್ವದ ಎನ್‌ಡಿಎ ಸರ್ಕಾರವಾಗಲಿ ಇವುಗಳ ಬಗ್ಗೆ ಯಾವುದೇ ಚಕಾರವನ್ನು ಎತ್ತಲಿಲ್ಲ ಬದಲಾಗಿ ನರೇಂದ್ರ ಮೋಧಿ ಸಂಪುಟದ ಕೃಷಿ ಸಚಿವರು ಸ್ವಾಮಿನಾಥನ್ ಆಯೋಗದ ಶಿಫಾರಸ್ಸುಗಳನ್ನು ಜಾರಿಮಾಡಲು ಸಾಧ್ಯವಾಗುವುದಿಲ್ಲವೆಂದು ಸುಪ್ರಿಂ ಕೋರ್ಟಿಗೆ ಅಫಿಡೆವಿಟ್ ಸಲ್ಲಿಸಿದ್ದಾರೆ.

ದೇಶದಾದ್ಯಂತ ಸಾಲ ಭಾಧಿತ ರೈತರು ಪ್ರತಿ 26 ನಿಮಿಷಕ್ಕೊಬ್ಬರಂತೆ ಆತ್ಮಹತ್ಯೆ ಮಾಡಿಕೊಂಡು, ಆತ್ಮಹತ್ಯೆಗಳ ಸಂಖ್ಯೆಯನ್ನು 3.75 ಲಕ್ಷಕ್ಕೆ ಹೆಚ್ಚಿಸಿದ್ದಾರೆ. ರೈತರ ಆತ್ಮಹತ್ಯೆಯ ಪ್ರಮಾಣ ಶೇಖಡ 26 ರಷ್ಟು ಹೆಚ್ಚಾಗಿದೆ. ದಿನೇ ದಿನೇ ಏರುತ್ತಿರುವ ಅಗತ್ಯ ವಸ್ತುಗಳ ಬೆಲೆಗಳು ಮತ್ತು ಆದುನೀಕರಣದಿಂದಾಗಿ ಕೃಷಿಯಲ್ಲಿ ಕಡಿತಗೊಳ್ಳುತ್ತಿರುವ ಉದ್ಯೋಗದ ಪರಿಣಾಮವಾಗಿ ಉಂಟಾದ ಆಧಾಯದ ಕೊರತೆಯಿಂದಾಗಿ ಇಂತಹ ಎಲ್ಲಾ ಬಡವರು ಪ್ರತಿ ನಿಮಿಷಕ್ಕೆ 5 ಜನರಂತೆ ಅಪೌಷ್ಟಿಕತೆಯ ಸಾವುಗಳಿಗೆ ತುತ್ತಾಗುತ್ತಿದ್ದಾರೆ. ಇನ್ನೊಂದೆಡೆ, ಜಾಗತೀಕರಣದ ನೀತಿಗಳಿಂದ ಮತ್ತು ಸಾಲಭಾಧಿತ ರೈತರಿಂದ ಹೊಂದಿದ ಅಪಾರ ಪ್ರಮಾಣದ ಭೂಮಿಗಳಿಂದ ಕೊಬ್ಬಿದ ಬಂಡವಾಳಶಾಹಿ ಭೂಮಾಲಕರು ಬಡ್ಡಿ ವ್ಯಾಪಾರಿಗಳು, ದಲಿತರು, ಬಡವರು ಮತ್ತು ಮಹಿಳೆಯರ ಮೇಲೆ ದೌರ್ಜನ್ಯವನ್ನು ಹೆಚ್ಚಿಸಿದ್ದಾರೆ.

ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಕೃಷಿ ರಂಗದಲ್ಲೂ ಕೋಮುವಾದವನ್ನು ಬಿತ್ತುವ ಮೂಲಕ ರೈತರ ಒಗ್ಗಟ್ಟನ್ನು ಒಡೆಯಲಾಗುತ್ತಿದೆ. ಸ್ವಯಂ ಘೋಷಿತ ಗೋರಕ್ಷಕರ ದಾಳಿಗಳಿಂದ ಜಾನುವಾರುಗಳನ್ನೇ ತಮ್ಮ ಆಧಾಯದ ಮೂಲವನ್ನಾಗಿಸಿಕೊಂಡಿದ್ದ ಶೇ. 25 ರಷ್ಟು ರೈತರು ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಅವರವರ ಆಹಾರದ ಹಕ್ಕನ್ನು ಪ್ರಶ್ನಿಸುವ ಮೂಲಕ ಏಕ ಸಂಸ್ಕೃತಿಯನ್ನು ಹೇರಿ ಹಳ್ಳಿಗಳಲ್ಲಿದ್ದ ಒಗ್ಗಟ್ಟನ್ನು ದುರ್ಬಲಗೊಳಿಸಲಾಗುತ್ತಿದೆ.

ಅದೇ ಸಂದರ್ಭದಲ್ಲಿ ಈ ಸರಕಾರಗಳನ್ನು ನಂಬದೇ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಮುಂದಾಗಿ ಸರಕಾರಿ ಹಾಗೂ ಅರಣ್ಯ ಜಮೀನುಗಳನ್ನು ಅಭಿವೃದ್ಧಿ ಪಡಿಸಿ ಫಲವತ್ತಾದ ಜಮೀನುಗಳನ್ನಾಗಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದ ಈ ಬಡವರಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹಕ್ಕು ಪತ್ರ ನೀಡಿ ರಕ್ಷಣೆ ನೀಡುವ ಬದಲು ಅವರನ್ನು ಒಕ್ಕಲೆಬ್ಬಿಸಿ ಸದರಿ ದಶ ಲಕ್ಷಾಂತರ ಎಕರೆ ಭೂಮಿಗಳನ್ನು ಭೂ ಬ್ಯಾಂಕಿಗೆ ಸೇರ್ಪಡೆ ಮಾಡಿ ದೊಡ್ಡ ದೊಡ್ಡ ಕಂಪೆನಿಗಳಿಗೆ ನೀಡುವ ಪ್ರಯತ್ನವನ್ನು ನಡೆಸಿವೆ. ಅದೇ ರೀತಿ, ದೊಡ್ಡ ದೊಡ್ಡ ಕಂಪೆನಿಗಳು ಗುತ್ತಿಗೆ ಬೇಸಾಯದಲ್ಲಿ ತೊಡಗಲು ಅನುಕೂಲಮಾಡುತ್ತಿದ್ದಾರೆ ಮಾತ್ರವಲ್ಲಾ ದಶ ಕೊಟಿ ಎಕರೆಗಟ್ಟಲೆ ಜಮೀನನ್ನು ಬಲವಂತವಾಗಿ ಸ್ವಾಧೀನ ಮಾಡಿ ಕೈಗಾರಿಕ ಕಾರಿಡಾರ್ ಮಾಡುವಲ್ಲಿ ನಿರತವಾಗಿವೆ.

ಕೃಷಿ ರಂಗ ಅತ್ಯಂತ ಬಿಕ್ಕಟ್ಟನ್ನು ಎದುರಿಸುತ್ತಿರುವ ಸಂದರ್ಭದಲ್ಲೇ ಆಳುವ ಸರ್ಕಾರಗಳು ಕೃಷಿ ರಂಗದಲ್ಲಿ ಶೇ. 100 ರಷ್ಟು ವಿದೇಶಿ ನೇರ ಬಂಡವಾಳವನ್ನು ಆಹ್ವಾನಿಸಿ ಕಂಪನಿ ಕೃಷಿಗೆ ಒತ್ತು ನೀಡಿ ರೈತ ಪರವಾದ ಕೃಷಿಯನ್ನು ನಾಶಮಾಡುತ್ತಿವೆ. ಇದಕ್ಕಾಗಿ ದೇಶದಲ್ಲಿ ರೈತ ಕೃಷಿ ಉಳಿಯಬೇಕಾದರೆ ಕೃಷಿಯಲ್ಲಿ ಸಹಕಾರಿ

ಪುಟ 10 ಕ್ಕೆ

ಹಕ್ಕೊತ್ತಾಯಗಳು

1. ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಎಲ್ಲಾ ಜಾಗತೀಕರಣದ ನಡೆಗಳನ್ನು ತಕ್ಷಣವೇ ವಾಪಾಸು ಪಡೆಯಬೇಕು.
2. ನಿವೇಶನ ಹಾಗೂ ಸರಕಾರಿ ಮತ್ತು ಅರಣ್ಯ ಭೂಮಿ ಹಕ್ಕನ್ನು ಖಾತರಿ ಪಡಿಸಿರಿ ಜಂಟಿ ಪಟ್ಟಾ ಒದಗಿಸಿರಿ. ಬಡ ಗೇಣಿದಾರರ ರಕ್ಷಿಸಿರಿ. ಎಲ್ಲಾ ಬಡವರಿಗೆ ಬದುಕು ಕಟ್ಟಿಕೊಡುವ ಹಿತ್ತಲು ಸಹಿತ ವಸತಿಯನ್ನು ಉಚಿತವಾಗಿ ನಿರ್ಮಿಸಿಕೊಡಬೇಕು. ಬಲವಂತದ ಭೂಸ್ವಾಧೀನ ಬೇಡ. ದಲಿತರಿಗೆ ತಲಾ ಐದು ಎಕರೆ ಜಮೀನು ಒದಗಿಸಿ. ಪ್ರಗತಿಪರ ಭೂ ಸುಧಾರಣಾ ನೀತಿ ಜಾರಿಗೆ ತನ್ನಿ.
3. ರೈತರು ಹಾಗೂ ಕೂಲಿಕಾರರ ಮತ್ತು ಕಸುಬುದಾರರ ಖಾಸಗೀ ಸಾಲವೂ ಸೇರಿದಂತೆ ಎಲ್ಲಾ ಸಾಲ ಮನ್ನಾ ಮಾಡಬೇಕು. ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗೆ ತಲಾ 10 ಲಕ್ಷ ಪರಿಹಾರ ಒದಗಿಸಿ.
4. ಅತಿವೃಷ್ಟಿ ಮತ್ತು ಬರದಿಂದಾದ ಬೆಳೆ ನಷ್ಟ ಪರಿಹಾರ ತಲಾ ಎಕರೆಗೆ 50 ಸಾವಿರ ಒದಗಿಸಿ. ಬೆಳೆ ವಿಮೆ ರೈತರಿಗೆ ದೊರೆಯುವಂತೆ ಖಾತರಿ ಪಡಿಸಿ. ಶಾಶ್ವತ ನೀರಾವರಿಗೆ ಕ್ರಮಕೈಗೊಳ್ಳಿ.
5. ರೈತರ ಬೆಳೆಗೆ ಡಾ. ಎಂಎಸ್ ಸ್ವಾಮಿನಾಥನ್ ಸಲಹೆಯಂತೆ ಶೇ 50 ಲಾಭಾಂಶವಿರುವ ವೈಜ್ಞಾನಿಕವಾದ ಬೆಂಬಲ ಬೆಲೆ ನಿಗದಿಸಿ ಖಾತರಿಯಾಗಿ ದೊರೆಯುವಂತೆ ಮಾಡಿರಿ.
6. ಉದ್ಯೋಗ ಖಾತ್ರಿ ಕೂಲಿಯನ್ನು 600ರೂ.ಗಳಿಗೆ ಮತ್ತು ಉದ್ಯೋಗವನ್ನು 200 ದಿನಗಳಿಗೆ ಹೆಚ್ಚಿಸಿ ಹಾಗೂ ನಗರಕ್ಕೂ ವಿಸ್ತರಿಸಿ. ಭ್ರಷ್ಠಾಚಾರವನ್ನು ತಡೆಯಲು ಕಠಿಣ ಕ್ರಮವಹಿಸಿ. ಕನಿಷ್ಠ ವೇತನ ಮಾಸಿಕ 18,000 ದೊರೆಯುವಂತೆ ಕ್ರಮವಹಿಸಿ.
7. ರೈತರು ಹಾಗೂ ಕೂಲಿಕಾರರು ಮತ್ತು ಕಸುಬುದಾರರಿಗೆ ಕನಿಷ್ಠ 3000ರೂ. ಗಳ ಮಾಸಿಕ ಪಿಂಚಣಿ ಒದಗಿಸಿ. ಬಡ ರೈತರು ಮತ್ತು ಕೃಷಿ ಕೂಲಿಕಾರರ ಸಂರಕ್ಷಣೆಗೆ ಮತ್ತು ಸಾಮಾಜಿಕ ಭದ್ರತೆಗೆ ಕೇಂದ್ರೀಯ ಶಾಸನ ರಚಿಸಿ.
8. ಆದುನಿಕ ಬೀಜ, ಗೊಬ್ಬರ, ಕ್ರಿಮಿನಾಶಕ ಮತ್ತು ಕೃಷಿ ಉಪಕರಣಗಳಿಗೆ ಶೇ 50 ರಷ್ಠು ಸಹಾಯಧನ ಒದಗಿಸಿ.
9. ಪಡಿತರ ವ್ಯವಸ್ಥೆಯನ್ನು ಸಾರ್ವತ್ರೀಕರಿಸಿ. ಅಗತ್ಯ 16 ವಸತುಗಳನ್ನು ರಿಯಾಯಿತಿ ದರದಲ್ಲಿ ಒದಗಿಸಿರಿ. ಅಂಗನವಾಡಿ, ಅಕ್ಷರ ದಾಸೋಹ ಖಾಸಗೀಕೆಣ ಬೇಡ ಬದಲಿಗೆ ಅವುಗಳನ್ನು ಬಲಪಡಿಸಿರಿ. ಕಾರ್ಮಿಕ ವಿರೋಧಿಯಾಗಿ ಕಾಯ್ದೆ ತಿದ್ದಪಡಿ ಬೇಡ.
10. ದಲಿತರು ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಕಠಿಣ ಕ್ರಮಕೈಗೊಳ್ಳಿ, ಅದೇ ರೀತಿ, ಜಾತಿವಾದಿ ಹಾಗೂ ಕೋಮುವಾದಿ ಶಕ್ತಿಗಳನ್ನು ನಿಗ್ರಹಿಸಿ.

ಕಿಸಾನ್ ಸಂಘರ್ಷ ಜಾಥಾ (ನವೆಂಬರ್ 2–24) ಮತ್ತು ದೆಹಲಿ ರ್‍ಯಾಲಿ (ನವೆಂಬರ್ 24)

ಒಂದು ಜಾಥಾವನ್ನು ತಮಿಳುನಾಡಿನ ವಿರುದುನಗರದಿಂದ ನವೆಂಬರ್ 2 ರಂದು ಎಐಕೆಎಸ್‌ನ ಹಿರಿಯ ಉಪಾಧ್ಯಕ್ಷರಾದ ಕೆ.ವರದರಾಜನ್‌ರವರು ಉಧ್ಘಾಟಿಸಲಿದ್ದಾರೆ.

ಜಮ್ಮುವಿನಿಂದ ನವೆಂಬರ್ 8 ರಂದು ಹೊರಡುವ ಜಾಥಾವನ್ನು ಎಐಕೆಎಸ್ ಅಧ್ಯಕ್ಷರಾದ ಅಮರರಾಮ್ ರವರು ಉಧ್ಘಾಟಿಸಲಿದ್ದಾರೆ.

ಕೊಲ್ಕತ್ತದಿಂದ ನವೆಂಬರ್ 8 ಕ್ಕೆ ಉಧ್ಘಾಟನೆಗೊಳ್ಳಲಿರುವ ಜಾಥಾವನ್ನು ಎಐಕೆಎಸ್‌ನ ಪ್ರಧಾನ ಕಾರ್ಯದರ್ಶಿ ಹನ್ನನ್ ಮುಲ್ಲಾರವರು ಉಧ್ಘಾಟಿಸಲಿದ್ದಾರೆ.

ಕನ್ಯಾಕುಮಾರಿಯಿಂದ ನವೆಂಬರ್ 10 ರಂದು ಹೊರಡಲಿರುವ ಜಾಥಾವನ್ನು ಕೇರಳಾದ ಮುಖ್ಯಮಂತ್ರಿ ಪಿಣರಾಯ್ ವಿಜಯನ್‌ರವರು ಉಧ್ಘಾಟಿಸಲಿದ್ದಾರೆ.

ಈ ನಾಲ್ಕೂ ಜಾಥಾಗಳು ದೇಶದ ಎಲ್ಲ ರಾಜ್ಯಗಳ ಪ್ರಮುಖ ಪ್ರದೇಶಗಳನ್ನು ಸಂದಿಸಿ ಅಲ್ಲಿ ರೈತರ ಜಾಗೃತಿ ಸಭೆಗಳನ್ನು ನಡೆಸಲಿವೆ.

ಅಂತಿಮವಾಗಿ ನವೆಂಬರ್ 24 ರಂದು ದೆಹಲಿಯಲ್ಲಿ ಸಮಾರೋಪಗೊಳ್ಳಲಿರುವ ಈ ನಾಲ್ಕು ಜಾಥಾಗಳು ಬೃಹತ್ ರೈತರ ಬಹಿರಂಗ ಸಭೆಯಲ್ಲಿ ಅಂತ್ಯಗೊಳ್ಳಲಿವೆ.

ತಮಿಳುನಾಡಿನಿಂದ ಹೊರಟ ಜಾಥಾ ಮತ್ತು ಕನ್ಯಾಕುಮಾರಿಯಿಂದ ಹೊರಟ ಎರಡೂ ಜಾಥಾಗಳು ಕರ್ನಾಟಕವನ್ನು ಹಾದು ಹೋಗಲಿವೆ. ತಮಿಳುನಾಡಿನ ಜಾಥಾ ನವೆಂಬರ್ 5 ರಂದು ಬೆಂಗಳೂರಿನ ಮೂಲಕ ಕರ್ನಾಟಕವನ್ನು ಪ್ರವೇಶಿಸಿ ಬೆಂಗಳೂರು, ದೇವನಹಳ್ಳಿ, ಕೋಲಾರ, ಶ್ರೀನಿವಾಸಪುರ, ಚಿಂತಾಮಣಿ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗುಡಿಬಂಡೆ ನಂತರ ಅನಂತಪುರದ ಮೂಲಕ ನವೆಂಬರ್ 8 ರಂದು ಆಂದ್ರಪ್ರದೇಶವನ್ನು ಪ್ರವೇಶಿಸಲಿದೆ.

ಕನ್ಯಾಕುಮಾರಿಯಿಂದ ಹೊರಟ ಜಾಥಾವು ಮಂಗಳೂರು ಮೂಲಕ ಕರ್ನಾಟಕವನ್ನು ನವೆಂಬರ್ 14 ರಂದು ಪ್ರವೇಶಿಸಿ ಮಂಗಳೂರು, ಕುಂದಾಪುರ, ಹೊನ್ನಾವರ ಕಾರವಾರ, ಬೆಳಗಾವಿ ಮೂಲಕ ನವೆಂಬರ್ 16 ರಂದು ಮಹಾರಾಷ್ಟ್ರವನ್ನು ಪ್ರವೇಶಿಸಲಿದೆ. ರಾಜ್ಯದಲ್ಲಿ ಜಾಥಾವನ್ನು ಸ್ವಾಗತಿಸಲು ಸಿದ್ದತೆಗಳು ನಡೆಯುತ್ತಿವೆ.

ಕರ್ನಾಟಕದಲ್ಲಿ ಕಿಸಾನ್ ಸಂಘರ್ಷ ಜಾಥಾ 1 ರ ಮಾರ್ಗಸೂಚಿ ವಿವರ

ಕ್ರ ಸಂ	ದಿನಾಂಕ	ಜಾಥಾ ಬರುವ ಸ್ಥಳ	ಸಮಯ	ಕಾರ್ಯಕ್ರಮ
01	05.11.16	ಬೆಂಗಳೂರು	ರಾತ್ರಿ 9.00	-
02	06.11.16	ಬೆಂಗಳೂರು	ಬೆಳಿಗ್ಗೆ 8.30	-
03	06.11.16	ಬೆಂಗಳೂರು	ಬೆಳಿಗ್ಗೆ 11,00-2,00	ಬಹಿರಂಗ ಸಭೆ
04	06.11.16	ದೇವನಹಳ್ಳಿ	ಸಂಜೆ 4.30-6.30	ಬಹಿರಂಗ ಸಭೆ
05	07.11.16	ದೇವನಹಳ್ಳಿ	ಬೆಳಿಗ್ಗೆ 8.30	-
06	07.11.16	ಕೋಲಾರ	ಬೆಳಿಗ್ಗೆ 11.00-2.00	ಬಹಿರಂಗ ಸಭೆ
07	07.11.16	ಶ್ರೀನಿವಾಸಪುರ	ಸಂಜೆ 4.00-6.00	ಬಹಿರಂಗ ಸಭೆ
08	07.11.16	ಚಿಂತಾಮಣಿ	ಸಂಜೆ 7.30	-
09	08.11.16	ಚಿಂತಾಮಣಿ	ಬೆಳಿಗ್ಗೆ 8:00	-
10	08.11.16	ಚಿಕ್ಕಬಳ್ಳಾಪುರ	ಬೆಳಿಗ್ಗೆ 11.00-2.00	ಬಹಿರಂಗ ಸಭೆ
11	08.11.16	ಬಾಗೇಪಲ್ಲಿ	ಮಧ್ಯಾಹ್ನ 3.00-5.00	ಬಹಿರಂಗ ಸಭೆ
12	08.11.16	ಗುಡಿಬಂಡೆ	ಸಂಜೆ 6:00-8;30	ಬಹಿರಂಗ ಸಭೆ
13	08.11.16	ಅನಂತಪುರ	ರಾತ್ರಿ 11.30	-

ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಸಿಐಟಿಯು, ಮುಂತಾದ 15ಕ್ಕೂ ಹೆಚ್ಚು ಸಂಘಟನೆಗಳು ಬಡವರು, ದಲಿತರ ಪರವಾಗಿ, ಭೂಮಿ ಹಾಗೂ ನಿವೇಶನ ಸಹಿತ ವಸತಿ ಪ್ರಶ್ನೆಗಾಗಿ ಹೋರಾಟವನ್ನು ತೀವ್ರ ಹಾಗೂ ವ್ಯಾಪಕಗೊಳಿಸಲು ನಿರ್ಧರಿಸಿವೆ. ಮುಂಬರುವ ನವೆಂಬರ್ 18ರಂದು ರಾಜ್ಯದಾದ್ಯಂತ ಎಲ್ಲಾ ತಾಲೂಕಾ ಕೇಂದ್ರಗಳಲ್ಲಿ ಸಾವಿರಾರು ಜನರನ್ನು ಅಣಿ ನೆರೆಸುವ ಮೂಲಕ ರಾಜ್ಯದಲ್ಲಿ ಕನಿಷ್ಟ ಒಂದು ಲಕ್ಷ ಜನರನ್ನು ಹೋರಾಟದಲ್ಲಿ ತೊಡಗಿಸಲು ಹಾಗೂ ಅವರಲ್ಲಿ ಸುಮಾರು 10 ಸಾವಿರ ಜನರನ್ನು ಜೈಲು ತುಂಬುವ ಚಳುವಳಿಯಲ್ಲಿ ಭಾಗಿಯಾಗುವಂತೆ ಕ್ರಮವಹಿಸಲು ನಿರ್ಧರಿಸಿವೆ. ಈ ಬೃಹತ್ ಜೈಲು ಭರೋ ಚಳುವಳಿಯ ಹಿನ್ನೆಲೆ ಮತ್ತು ಹಕ್ಕೊತ್ತಾಯಗಳನ್ನು ವಿವರಿಸುವ ಲೇಖನಗಳ ಸರಣಿಯಲ್ಲಿ ಇದು ಎರಡನೇ ಲೇಖನ. ಮೊದಲನೆಯ ಲೇಖನದಲ್ಲಿ ಭೂಮಿ ಪ್ರಶ್ನೆಯ ಹಿನ್ನೆಲೆಯನ್ನು ವಿವರಿಸಲಾಗಿತ್ತು. ಈ ಲೇಖನದಲ್ಲಿ ಭೂಮಿ ಮತ್ತು ನಿವೇಶನ ಸಹಿತ ವಸತಿ ಹಕ್ಕಿನ ಹಕ್ಕೊತ್ತಾಯಗಳನ್ನು ನಿರೂಪಿಸಲಾಗಿದೆ.



ನವೆಂಬರ್ 18 ಜೈಲು ಭರೋ

ಭೂಮಿ ಹಾಗೂ ನಿವೇಶನ ಸಹಿತ ವಸತಿ ಹಕ್ಕಿಗಾಗಿ

ಯು. ಬಸವರಾಜ್

ದೇಶಕ್ಕೆ ಸ್ವಾತಂತ್ರ್ಯ ಬಂದು 70 ವರ್ಷಗಳನ್ನು ಪೂರೈಸುವ ಅವಧಿಯಲ್ಲಿದ್ದೇವೆ. ದೇಶದ ಮೂಲಭೂತ ಸಮಸ್ಯೆಗಳ ಪರಿಹಾರಕ್ಕಾಗಿ ಏನೇನೆಲ್ಲಾ ಕಾನೂನುಗಳು ಮತ್ತು ಕೇಂದ್ರ ಹಾಗೂ ಎಲ್ಲಾ ರಾಜ್ಯ ಸರಕಾರಗಳು ಕೋಟ್ಯಾಂತರ ಕೋಟಿ ಹಣವನ್ನು ಮೂಲಭೂತ ಸಮಸ್ಯೆಗಳ ಪರಿಹಾರಕ್ಕಾಗಿ ಖರ್ಚು ಮಾಡಿವೆ. ಆದಾಗ್ಯೂ, ಈಗಲೂ ಬಡತನ, ನಿರುದ್ಯೋಗ, ದಲಿತರು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ, ಅಸ್ಪೃಶ್ಯತೆ, ಜಾತಿ ತಾರತಮ್ಯ ಕಡಿಮೆಯಾಗಲಿಲ್ಲ ಬದಲಿಗೆ ಹೆಚ್ಚುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಸ್ವತಃ ಕೇಂದ್ರ ಸರಕಾರವೇ ಈಗಲೂ ದೇಶದಲ್ಲಿ ಶೇ 75 ರಷ್ಟು ಜನರ ತಲಾ ಆದಾಯ ದಿನಕ್ಕೆ ಕೇವಲ 20 ರೂ. ಗಿಂತಲೂ ಕಡಿಮೆ ಇರುವುದನ್ನು ಒಪ್ಪಿಕೊಳ್ಳುತ್ತಿದೆ. ಅದೇ ರೀತಿ, ದೇಶದಲ್ಲಿ ಪ್ರತಿ ನಿಮಿಷಕ್ಕೆ 5 ಹಸಿವಿನ ಅಥವಾ ಅಪೌಷ್ಠಿಕತೆಯ ಸಾವುಗಳು ಸಂಭವಿಸುತ್ತಿರುವುದನ್ನು ಹಾಗೂ ಶೇ. 60 ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿರುವುದನ್ನು ಮತ್ತು ಶೇ. 55 ಕ್ಕೂ ಹೆಚ್ಚು ಶಿಶುಗಳು ಅಗತ್ಯ ತೂಕ ಹೊಂದಿಲ್ಲದಿರುವುದನ್ನು ಸರ್ಕಾರದ ಅಂಕಿ ಸಂಖ್ಯೆಗಳು ಹೇಳುತ್ತಿವೆ. ಮಾತ್ರವಲ್ಲ, ಈ ಆದಾಯದ ಕೊರತೆಯು ಇಳಿ ವಯಸ್ಸಿನಲ್ಲಿ ಸೂಕ್ತ ರಕ್ಷಣೆಗಳಿಲ್ಲದ ಈ ಜನಗಳನ್ನು ಅತ್ಯಂತ ಸಂಕಷ್ಟಕ್ಕೆ ಈಡುಮಾಡಿವೆ. ಅನೇಕರನ್ನು ಭಿಕ್ಷಾಟನೆಗೆ ದೂಡಿವೆ.

ಅಂದರೆ, ರಾಜ್ಯದ ದೇವದಾಸಿ ಮಹಿಳೆಯರು, ಅಂಗನವಾಡಿ, ಬಿಸಿಯೂಟ, ಆಶಾ, ಹಾಸ್ಟೆಲ್/ವಸತಿ ನಿಲಯಗಳ ಕೆಲಸಗಾರ ಮಹಿಳೆಯರು ಸೇರಿದಂತೆ ಬಹುತೇಕ ಮಹಿಳೆಯರು; ದಲಿತರು; ಒಂದು ಕೋಟಿ ಕೂಲಿಕಾರರು, ವಿವಿಧ ಕಸುಬುದಾರರು, ಹಮಾಲಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಪಂಚಾಯ್ತಿ, ಪುರಸಭೆ ಮುಂತಾದ ಸ್ಥಳೀಯ ಸಂಸ್ಥೆಗಳಲ್ಲಿ ದುಡಿಯುವವರು; ಮತ್ತು ಸುಮಾರು 50 ಲಕ್ಷಕ್ಕೂ ಅಧಿಕವಿರುವ ಬಡ ರೈತರು, ನಗರಗಳ ಕೊಳಚೆ ಪ್ರದೇಶದ ನಿವಾಸಿಗಳು, ಅಸಂಘಟಿತ ವಲಯದ ಇನ್ನಿತರೇ ಕಾರ್ಮಿಕರು: ಅದೇ ರೀತಿ, ಯೋಜನೆಗಳಲ್ಲಿ ದುಡಿಯುವ ಕೋಟ್ಯಾಂತರ ಅಸಂಘಟಿತ ಕಾರ್ಮಿಕರು ಇದರಲ್ಲಿ ಬರಲಿದ್ದಾರೆ. ಈ ಆದಾಯದ ಕೊರತೆಯ ಸಾಲಿನಲ್ಲಿ ಬರಲಿದ್ದಾರೆ. ಇನ್ನೂ ಕನಿಷ್ಠ ವೇತನ ದೊರೆಯದ ಅಸಂಖ್ಯಾತ ಕಾರ್ಮಿಕರು, ಗುತ್ತಿಗೆ ಆಧಾರಿತ ಕೆಲಸಗಾರರು ಮುಂತಾದವರು ಬಡತನದಲ್ಲಿ ಬದುಕುವವರು ಇದ್ದಾರೆ.

ಇಂತಹ ಜನಗಳಿಗೆ ದಿನ ನಿತ್ಯ ಅವರ ಮತ್ತು ಅವರ ಕುಟುಂಬದ ಹೊಟ್ಟೆ ಹೊರೆಯುವುದೇ ಪ್ರಧಾನ ಆದ್ಯತೆಯಾಗಿದೆ. ಹೀಗಿರುವಾಗ, ಇವರು ತಲೆಯ ಮೇಲೊಂದು ಸೂರುಗಳಿಸುವುದು ದುರ್ಲಭವಾಗಿದೆ.

ಕನಿಷ್ಠ ಜೀವನ ನಿರ್ವಹಣೆಗಾಗಿ, ದೇಶದ ಕಾರ್ಮಿಕ ಸಂಘಟನೆಗಳು ಕನಿಷ್ಠ ವೇತನವನ್ನು ರೂ. 18 ಸಾವಿರ ಎಂದು ನಿಗದಿಸಲು ಒತ್ತಾಯಿಸುತ್ತಾ ಬಂದಿವೆ. ಅದರರ್ಥ ಪ್ರತಿ ದಿನದ ತಲಾ ಆದಾಯ ಕನಿಷ್ಠ 150 ರೂ. ಗಳಾದರೂ ಇರಬೇಕೆಂಬುದಾಗಿದೆ. ಇದನ್ನು ಸಾಧಿಸುವುದು ಅಗತ್ಯವಿದೆ. ಆದರೆ ಈಗ ದೇಶದ 90 ಕೋಟಿಯಷ್ಟು ಮತ್ತು ರಾಜ್ಯದ 5 ಕೋಟಿಯಷ್ಟು ಜನತೆ ಕಡು ಬಡತನದಲ್ಲಿ ಜೀವಿಸುತ್ತಿದ್ದಾರೆ. ಇಂತಹ ಜನಗಳಿಗೆ ದಿನ ನಿತ್ಯ ಅವರ ಮತ್ತು ಅವರ ಕುಟುಂಬದ ಹೊಟ್ಟೆ ಹೊರೆಯುವುದೇ ಪ್ರಧಾನ ಆದ್ಯತೆಯಾಗಿದೆ. ಹೀಗಿರುವಾಗ, ಇವರು ತಲೆಯ ಮೇಲೊಂದು ಸೂರುಗಳಿಸುವುದು ಹೇಗೆ ಸಾ ಧ್ಯ ದುರ್ಲಭವಾಗಿದೆ.

ಆರೋಗ್ಯಕರ ಮತ್ತು ಬದುಕು ಕಟ್ಟಿಕೊಡುವ ವಸತಿ ಯೋಜನೆ ಆರಂಭಿಸಿ

ಇಂದಿನ ತೀವ್ರ ಬೆಲೆ ಏರಿಕೆಯ ಕಾಲದಲ್ಲಿ, ರಾಜ್ಯದ ಯಾವ ಮೂಲೆಗೆ ಹೋದರೂ ಕನಿಷ್ಟ ನಿವೇಶನದ ಬೆಲೆಯು ಕನಿಷ್ಠ 5 ಲಕ್ಷ ರೂ. ಗಳಾಗಿದೆ. ಅದನ್ನು ಪಡೆದು ವಸತಿಯನ್ನು ನಿರ್ಮಿಸಿಕೊಳ್ಳಲಿಕ್ಕೆ ಇನ್ನೂ ಕನಿಷ್ಠ 7–8 ಲಕ್ಷ ರೂಗಳ ಅಗತ್ಯ ಇರುತ್ತದೆ. ಹೀಗಾಗಿ ಈ ಜನತೆ ಇಂತಹದೊಂದು ಕನಿಷ್ಠ ವಸತಿಯನ್ನು ಹೊಂದುವುದು ಬಹುತೇಕ ಕನಸಿನ ಮಾತಾಗಿದೆ. ಬಹುತೇಕ ದಲಿತರು ಹಿಂದೆ ಯಾವಾಗಲೋ ಸರಕಾರವೇ ಕಟ್ಟಿಸಿಕೊಟ್ಟ ಜನತಾ, ಇಂದಿರಾ ಆವಾಸ್ ಮುಂತಾದ ಹೆಸರಿನ ಯಾವುದೇ ಅಗತ್ಯ ಅನುಕೂಲಗಳಿಲ್ಲದ ಮನೆಯೆಂಬ ಹಂದಿ ಗೂಡಿನಲ್ಲಿ ವಾಸಿಸುತ್ತಿದ್ದಾರೆ. ಖಂಡಿತಾ ಅವು ಆರೋಗ್ಯ ಸ್ನೇಹಿಯಾಗಿಲ್ಲ. ಇಂತಹ ಮನೆಗಳು ಮತ್ತು ಗುಡಿಸಲುಗಳಲ್ಲಿ ಸಾಕಷ್ಟು ಗಾಳಿ ಬೆಳಕಿಗೆ ಅವಕಾಶಗಳಿಲ್ಲದಿರುವದರಿಂದ, ಹೊಗೆಯ ಕಾರಣದಿಂದ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಪ್ರತಿವರ್ಷ 20 ಲಕ್ಷ ಜನ ಸಾವೀಗಿಡಗುತ್ತಿರುವ ವರದಿ ಇದೆ.

ಇದೀಗ ಅವರ ಕುಟುಂಬಗಳು ಬೆಳೆದಿವೆ. ಅದೆ ರೀತಿ, ಇದೀಗ ಅವರ ಕುಟುಂಬಗಳು ಬೆಳೆದಿವೆ. ಅಲ್ಲೀಗ ಹೊಸದಾಗಿ ಮದುವೆಯಾದ ಜೋಡಿ ಮಾತ್ರವೇ ಮಲಗಲು ಸ್ಥಳವಿರುವುದು. ಉಳಿದ ತಂದೆ ತಾಯಿಗಳಿಗೆ, ಸಹೋದರ, ಸಹೋದರಿಯರಿಗೆ ಬಯಲು ಜಾಗವೇ ಇಲ್ಲವೇ ದೇವಸ್ಥಾನಗಳೇ ಗತಿಯಾಗಿವೆ. ಇದೇ ಪರಿಸ್ಥಿತಿ ಎಲ್ಲಾ ಬಡವರದಾಗಿದೆ. ಮಳೆಗೆ ಬಿದ್ದವುಗಳನ್ನು ಕಟ್ಟಿಸಿಕೊಳ್ಳಲಾಗುತ್ತಿಲ್ಲ. ನಗರಗಳ ಬಡಕುಟುಂಬಗಳು ಒತ್ತೊತ್ತಾದ ಸ್ಥಳಗಳಲ್ಲಿ ಯಾವುದೇ ಮೂಲ ಸೌಕರ್ಯಗಳಿಲ್ಲದ ಕೊಳೆಗೇರಿಗಳಲ್ಲೂ ದಯನೀಯ ಸ್ಥಿತಿಯಲ್ಲಿ ಬದುಕುತ್ತಿವೆ. ಬಾಡಿಗೆ ಮನೆಗಳು ದುಡಿಮೆಯ ಬಹುತೇಕ ಭಾಗವನ್ನು ಬೇಡುತ್ತಿವೆ. ಅಗತ್ಯದ ಒಂದಂಶವನ್ನು ಪೂರೈಸಲಾಗದ ಸರಕಾರಿ ವಸತಿ ಯೋಜನೆಗಳು ಈಗಲೂ ಇವೆಯಾದರೂ, ಅದನ್ನು ಪಡೆಯಲು ನಿವೇಶನವನ್ನು ಹೊಂದಿರಬೇಕಾಗುತ್ತದೆ. ನಿವೇಶನ ಖರೀಧಿಸಲು ಅಗತ್ಯ ಹಣ ಬೇಕಾಗುತ್ತದೆ. ಅದಿಲ್ಲದೇ ಇರುವುದರಿಂದ ಸರ್ಕಾರಿ ವಸತಿ ಯೋಜನೆ ಲಾಭವನ್ನು ಹೊಂದಲು ಸಾದ್ಯವಾಗುತ್ತಿಲ್ಲ. ಸರಕಾರದ ಬಡವರ ವಸತಿ ಯೋಜನೆಗಳು ನಿವೇಶನ ಸಹಿತವಾಗಿಲ್ಲ. ಹೀಗಾಗಿ, ಬಹುತೇಕ ಬಡವರ ಕೈಗೆ ಇವು ದೊರೆಯುತ್ತಿಲ್ಲ. ಒಟ್ಟಾರೆ ರಾಜ್ಯದಲ್ಲಿ ನಿವೇಶನ ಸಹಿತ ವಸತಿಯ ಪ್ರಶ್ನೆ ಗಂಭೀರವಾಗಿಯೇ ಇರುವುದನ್ನ ಎಲ್ಲವು ಹೇಳುತ್ತಿವೆ.

ಸಾಮಾನ್ಯವಾಗಿ ವಸತಿಗಳೆಂದರೆ, ಅವು ಬಹುತೇಕ ಸ್ವತಃ ಆಧಾಯಕ್ಕೆ ಅನುಕೂಲ ಮಾಡಿಕೊಡುವವು ಆಗಿರುತ್ತವೆ. ನಮ್ಮ ರೈತರ ಹಾಗೂ ಕೂಲಿಕಾರರ ಮನೆಗಳಲ್ಲಿ ಹೈನುಗಾರಿಕೆಗಾಗಿ ಮತ್ತು ಪಶು ಸಾಕಾಣೆಗಾಗಿ ವ್ಯವಸ್ಥೆಗಳನ್ನು ಮಾಡಲಾಗುತ್ತದೆ. ಹಿತ್ತಲುಗಳು ಮನೆಯ ಅಥವಾ ವಸತಿಯ ಭಾಗವೇ ಆಗಿದೆ. ಕರಾವಳಿ, ಮಲೆನಾಡು ಪ್ರದೇಶದಲ್ಲಿ ತೆಂಗು ಹಾಗೂ ಮತ್ತಿತರೇ ಹಣ್ಣಿನ ಮರಗಳನ್ನು ಬೆಳೆದು ಹಿತ್ತಲುಗಳನ್ನು ಆದಾಯದ ಆಕರಗಳನ್ನಾಗಿ ಮಾಡಿಕೊಳ್ಳಲಾಗಿದೆ. ಕಸುಬುದಾರರ ಮನೆಗಳಲ್ಲಿ ಕಸುಬು ನಿರ್ವಹಣೆಗಾಗಿ ಹಿತ್ತಲು ಇರುತ್ತದೆ. ಆದರೇ ಬಡವರಿಗಾಗಿ ಇರುವ ಸರಕಾರದ ವಸತಿ ಯೋಜನೆಗಳಲ್ಲಿ ಇದು ಕಾಣದೇ ಇರುವುದು ವಿಶೇಷ.



ಕೇರಳದ ಇಎಂಎಸ್ ನಂಬೂದಿರಿ ಪಾಡ್ ನೇತೃತ್ವದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಮೊದಲ ಸರಕಾರ ಮುಖ್ಯವಾಗಿ, ಸರಕಾರಿ ಜಮೀನುಗಳ ಸಾಗುವಳಿಯಲ್ಲಿ ತೊಡಗಿದ್ದ ಬಡವರಿಗೆ ಜಮೀನಿನ ಹಕ್ಕು ಮತ್ತು ವಸತಿಗಾಗಿ 7.5 ಸೆಂಟ್ಸ ಭೂಮಿ ಒದಗಿಸಿದ್ದು ಈಗ ಇತಿಹಾಸ. ಬಡವರು 2.5 ಸೆಂಟ್ಸನಲ್ಲಿ ವಸತಿ ನಿರ್ಮಿಸಿಕೊಂಡರೆ, ಉಳಿದ 5 ಸೆಂಟ್ಸ್ ಹಿತ್ತಲನ್ನು ಪಶುಪಾಲನೆಗೆ, ತೆಂಗು ಬೆಳೆಯಲು, ಕೋಳಿ, ಕುರಿ, ಮೀನು ಸಾಕಾಣೆಗೆ ಬಳಸಲು ಉಪಕ್ರಮವಹಿಸಿ ಆದಾಯ ಹೆಚ್ಚಿಸಿಕೊಂಡಿದ್ದುದನ್ನು ನಾವು ಕಂಡಿದ್ದೇವೆ.

ಆದ್ದರಿಂದ ಕರ್ನಾಟಕ ಸರಕಾರವೂ ಹಿತ್ತಲನ್ನು ಒಳಗೊಂಡ ನಿವೇಶನ ಸಹಿತ ವಸತಿ ಯೋಜನೆಯನ್ನು ಈ ಬಡವರಿಗಾಗಿ ರೂಪಿಸುವುದು ಅಗತ್ಯವಿದೆ. ಕನಿಷ್ಟ 8–10 ಸೆಂಟ್ಸ್ ಸ್ಥಳವನ್ನು ಒದಗಿಸುವುದು ಮತ್ತು ಹಿತ್ತಲಿನಲ್ಲಿ ಆದಾಯವನ್ನು ಹೆಚ್ಚಿಸಿಕೊಳ್ಳಲು ಅಗತ್ಯ ನೆರವಿನ ಕಾರ್ಯಕ್ರಮಗಳನ್ನು ಸರಕಾರ ಈ ಬಡ ಜನಗಳಿಗಾಗಿ ರೂಪಿಸಲು ಮತ್ತು ಇದಕ್ಕಾಗಿ ಅಗತ್ಯವಾದ ಜಮೀನನ್ನು ಒದಗಿಸಲು ವಸತಿ ಯೋಜನೆಗಾಗಿ ಭೂ ಸ್ವಾಧೀನವನ್ನು ಕೈಗೊಳ್ಳುವಂತೆ ಮತ್ತು ಅದಕ್ಕೆ ಅಗತ್ಯವಾದ ಹಣಕಾಸಿನ ನೆರವು ಒದಗಿಸುವಂತೆ ಒತ್ತಾಯಿಸುವುದು ನಮ್ಮ ಜಂಟಿ ಚಳುವಳಿಯ ಪ್ರಥಮ ಹಕ್ಕೊತ್ತಾಯವಾಗಿದೆ.

ಉಳುವವನನ್ನೇ ಭೂ ಒಡೆಯನನ್ನಾಗಿಸಿ :

ಕರ್ನಾಟಕದ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ದೇವದಾಸಿ ಮಹಿಳೆಯರು, ಅವರ ಮಕ್ಕಳು, ಮಸಣ ಕಾರ್ಮಿಕರು, ಇತರೇ ದಲಿತರು ಮತ್ತು ಆದಿವಾಸಿಗಳು, ಇತರೇ ಹಿಂದುಳಿದ ಮತ್ತು ಮುಂದುವರೆದ ಜಾತಿಗಳ ಬಡವರು, ಕೂಲಿಕಾರರು ಬಹುತೇಕ ವ್ಯವಸಾಯದಲ್ಲಿ ಮತ್ತು ಅರಣ್ಯ ಉತ್ಪನ್ನಗಳ ಸಂಗ್ರಹದಲ್ಲಿ ತಮ್ಮ ಹಿತವನ್ನು ಕಾಣುತ್ತಿದ್ದಾರೆ. ಅವರು ತಮಗಿರುವ ಅನುಭವದ ಆಧಾರದಲ್ಲಿ ವ್ಯವಸಾಯದಲ್ಲಿ ತೊಡಗಿ ಪರಾವಲಂಬಿತನದಿಂದ ತಮ್ಮನ್ನು ಬಿಡಿಸಿಕೊಂಡು ಸ್ವಾವಲಂಬಿಗಳಾಗಲು ಬಯಸಿದ್ದಾರೆ. ತಮ್ಮ ಶೋಷಣೆಯಿಂದ ಮುಕ್ತಿಯನ್ನು ಬಯಸಿದ್ದಾರೆ. ಹಲವರು ವಿವಿಧ ಸರಕಾರಿ ಹೆಸರಿನ ಮತ್ತು ಅರಣ್ಯ ಭೂಮಿಯ ಸಾಗುವಳಿಯಲ್ಲಿ ತಮ್ಮನ್ನು ತೊಡಗಿಸಿ ಅವುಗಳ ಅಭಿವೃದ್ಧಿ ಪಡಿಸಿಕೊಂಡಿದ್ದು ಅವುಗಳ ಹಕ್ಕುಪತ್ರ ಹೊಂದಲು ಅಪೇಕ್ಷಿಸಿದ್ದಾರೆ. ಆದಿವಾಸಿಗಳು ಇತರೇ ಅರಣ್ಯವಾಸಿಗಳು ಅರಣ್ಯ ಭೂಮಿ ಮತ್ತು ಅರಣ್ಯ ಉತ್ಪನ್ನಗಳಲ್ಲಿ ತಮ್ಮ ಹಿತಗಳನ್ನು ಕಂಡು ಕೊಂಡಿದ್ದಾರೆ. ಅದೇ ರೀತಿ, ಜಾಗತೀಕರಣದ ನೀತಿಗಳ ಜಾರಿಯಿಂದಾಗಿ, ಹಿಂದಿನ ಭೂಮಾಲಕರು ಈಗ ಭಾರೀ ಭೂಮಾಲಕ ಬಂಡವಾಳದಾರರಾಗಿ ಅಭಿವೃದ್ಧಿ ಹೊಂದಿದ್ದು ಅವರು ದೊಡ್ಡ ಪ್ರಮಾಣದಲ್ಲಿ ಭೂಮಿಯನ್ನು ಕೇಂದ್ರೀಕರಿಸಿಕೊಂಡಿದ್ದಾರೆ. ಇದೇ ಜಾಗತೀಕರಣ ನೀತಿಗಳು ಮೇಲ್ಮಧ್ಯಮ ಹಾಗೂ ಶ್ರೀಮಂತ ರೈತರನ್ನು ಗೇಣಿಗಾಗಿ ಜಮೀನು ನೀಡುವಂತೆ ಒತ್ತಾಯ ಮಾಡಿದೆ. ಇದೆಲ್ಲವೂ ಗ್ರಾಮೀಣ ಪ್ರದೇಶದಲ್ಲಿ ಈ ಬಡವರಿಗೆ ಮುಖ್ಯವಾಗಿ ದಲಿತರಿಗೆ

ಕರ್ನಾಟಕ ಸರಕಾರವೂ ಹಿತ್ತಲನ್ನು ಒಳಗೊಂಡ ನಿವೇಶನ ಸಹಿತ ವಸತಿ ಯೋಜನೆಯನ್ನು ಈ ಬಡವರಿಗಾಗಿ ರೂಪಿಸುವುದು ಅಗತ್ಯವಿದೆ. ಕನಿಷ್ಟ 8–10 ಸೆಂಟ್ಸ್ ಸ್ಥಳವನ್ನು ಒದಗಿಸುವುದು ಮತ್ತು ಹಿತ್ತಲಿನಲ್ಲಿ ಆದಾಯವನ್ನು ಹೆಚ್ಚಿಸಿಕೊಳ್ಳಲು ಅಗತ್ಯ ನೆರವಿನ ಕಾರ್ಯಕ್ರಮಗಳನ್ನು ಸರಕಾರ ಈ ಬಡ ಜನಗಳಿಗಾಗಿ ರೂಪಿಸಲು ಒತ್ತಾಯಿಸುವುದು ನಮ್ಮ ಜಂಟಿ ಚಳುವಳಿಯ ಪ್ರಥಮ ಹಕ್ಕೊತ್ತಾಯವಾಗಿದೆ.

ಪುಟ 10 ಕ್ಕೆ

ನವೆಂಬರ್ 18 ಜೈಲು ಭರೋ......... ಪುಟ 9 ರಿಂದ

ಗೇಣಿ ಅಥವಾ ಗುತ್ತಿಗೆಗೆ ಭೂಮಿ ದೊರೆಯುವಂತೆ ಮಾಡಿದೆ. ರಾಜ್ಯದಲ್ಲಿ ಇಂತಹ ಲಕ್ಷಾಂತರ ಗೇಣಿದಾರರು ಕಾಣ ಸಿಗುತ್ತಾರೆ. ಇವರು ಕೂಡ ಕೇಂದ್ರ ಹಾಗೂ ರಾಜ್ಯ ಸರಕಾರಗಳು ತಮ್ಮನ್ನು ಗುರುತಿಸಿ ನೊಂದಾಯಿಸಿ ಅಗತ್ಯ ನೆರವು ನೀಡಲು ಕೋರುತ್ತಿದ್ದಾ–ರೆ. ಇವರೆಲ್ಲರ ಅಪೇಕ್ಷೆಯು, ತಮ್ಮ ಈ ದಿನದ ಉದ್ಯೋಗದ ಅಭದ್ರತೆಯಿಂದ ಮತ್ತು ಆದಾಯದ ಕೊರತೆಯಿಂದ ಮುಂದೆ ಸಾಗಲೂ, ಸ್ವಲ್ಪವಾದರೂ ಉದ್ಯೋಗದ ಭದ್ರತೆ ಮತ್ತು ಆದಾಯವನ್ನು ಗಳಿಸಲು ನೆರವಾಗುವದೆಂಬ ನಿರೀಕ್ಷೆಯನ್ನು ಹೊಂದಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಉಳುವವನನ್ನು ಭೂ ಒಡೆಯನನ್ನಾಗಿಸುವುದೇ, ವ್ಯವಸಾಯದಲ್ಲಿ ಹಿತ ಹೊಂದಿದವನಿಗೆ ಭೂಮಿ ನೀಡುವುದೇ ಇಂದಿನ ತುರ್ತು ಅಗತ್ಯವಾಗಿದೆ. ಕರ್ನಾಟಕ ಸರಕಾರ ದೇವದಾಸಿ ಮಹಿಳೆಯರು, ಮತ್ತಿತರೇ ದಲಿತರಿಗೆ ಭೂಮಿಯನ್ನು ಒದಗಿಸುವ ಭೂಮಿ ಯೋಜನೆಯನ್ನು ಹೊಂದಿದೆಯಾದರೂ ಅದು ಅಸಮರ್ಪಕವಾಗಿದೆ. ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಾಗಿದೆ. ಭೂಮಿಯ ಹಕ್ಕು ನಮ್ಮ ಜಂಟಿ ಹೋರಾಟದ ಮತ್ತೊಂದು ಪ್ರಮುಖ ಅಂಶವಾಗಿದೆ.

ಭೂಮಿಯ ವ್ಯಾಪಕ ಕೇಂದ್ರೀಕರಣವೇ ದೌರ್ಜನ್ಯದ ಮೂಲ

ಗ್ರಾಮೀಣ ಪ್ರದೇಶದಲ್ಲಿ ಕೊಬ್ಬಿದ ಭೂಮಾಲಕ ಬಂಡವಾಳದಾರರು, ಬಡ್ಡಿ ವ್ಯಾಪಾರಸ್ಥರು, ಗುತ್ತಿಗೆದಾರರು ತಮ್ಮೊಳಗೆ ದೊಡ್ಡ ಪ್ರಮಾಣದಲ್ಲಿ ಜಮೀನು ಮತ್ತು ಸಂಪತ್ತನ್ನು ಸುಲಿಗೆಯ ಮೂಲಕ ಕ್ರೋಢೀಕರಿಸಿ ಕೊಂಡಿರುವುದರಿಂದ ಈ ಎಲ್ಲರ ಬವಣೆಗಳ ಮೂಲವಾಗಿದ್ದಾರೆ. ಇವರ ಕೊಬ್ಬುವಿಕೆಯಿಂದ ದೇಶದಲ್ಲಿ ಮಹಿಳೆಯರ ಮತ್ತು ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಲಿವೆ. ಪ್ರತಿ 20 ನಿಮಿಷಕ್ಕೊಂದರಂತೆ ಮಹಿಳೆಯರ ಮೇಲೆ ಅತ್ಯಾಚಾರ ಮತ್ತಿತರೇ ರೀತಿಯ ದೌರ್ಜನ್ಯಗಳು ಘಟಿಸುತ್ತಿವೆ. ಪ್ರತಿ ಅರ್ಧ ಘಂಟೆಗೊಂದರಂತೆ ದಲಿತರ ಮೇಲಿನ ದೌರ್ಜನ್ಯದ ಪ್ರಕರಣಗಳು ದಾಖಲಾಗುತ್ತಿವೆ. ದಾಖಲಾಗದಿರುವ ಪ್ರಕರಣಗಳು ಅಗಾಧವಾಗಿವೆ. ಪ್ರತಿ ದಿನಕ್ಕೆ ಇಬ್ಬರು ದಲಿತರು ಆದಿವಾಸಿಗಳ ಕೊಲೆಗಳು ನಡೆಯುತ್ತಿವೆ. ಈ ಶಕ್ತಿಗಳೇ ಜಾತಿ ಪದ್ಧತಿ ಮತ್ತು ಅಸ್ಪೃಶ್ಯಾಚರಣೆಯ ಹಾಗೂ ಜಾತಿವಾದ, ಕೋಮುವಾದದ ಬೆಳವಣಿಗೆಯ ಪ್ರೇರಕರೂ ಆಗಿದ್ದಾರೆ. ಆ ಮೂಲಕ ಜನತೆಯನ್ನು ವಿಭಜಿಸಿ ಆಳುವ ತಮ್ಮ ಪರಂಪರೆಯನ್ನು ಮುಂದುವರೆಸಿದ್ದಾರೆ.

ಇಂತಹ ಭೂಮಾಲಕರು ವಾಸ್ತವಿಕವಾಗಿ ಉಳುಮೆಯಲ್ಲಿ ತೊಡಗಿದವರಲ್ಲ! ಉಳುಮೆಗಾಗಿ ಇವರು ಬಡವರು, ದಲಿತರನ್ನು ಆದರಿಸಿದವರು. ಇವರು ಉಳುವವನನ್ನೇ ಭೂಮಿ ಒಡೆಯನನ್ನಾಗಿಸುವ ಘೋಷಣೆಯ ಜಾರಿಯ ವಿರೋಧಿಗಳು ಆಗಿದ್ದಾರೆ. ಇವರು ಒಂದೆಡೆ, ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ಉಳುಮೆಗೆ ನೀಡುವಿಕೆಯಿಂದ, ಮತ್ತೊಂದೆಡೆ, ಸಾಲ ಮತ್ತು ಕೃಷಿ ಹೂಡಿಕೆಗಳಾದ ರಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕ, ಬೀಜ ಹಾಗೂ ಯಂತ್ರೋಪಕರಣಗಳ ಬಾಡಿಗೆ ದುಬಾರಿ ಬಡ್ಡಿಯ ವ್ಯಾಪಾರದ ಮೂಲಕ ಮತ್ತು ರೈತರ ಬೆಳೆಗಳನ್ನು ಅಗ್ಗದರಕ್ಕೆ ಕೊಳ್ಳುವ ಹಾಗೂ ಮತ್ತಿತರೇ ವ್ಯಾಪಾರದ ಮೂಲಕ ಬಹುತೇಕ ಜನಗಳ ಶ್ರಮ ಸಂಪತ್ತು ಕೈವಶ ಮಾಡಿಕೊಳ್ಳುವವರು ಆಗಿದ್ದಾರೆ. ಪಂಚಾಯ್ತಿಗಳಲ್ಲಿ ಬಹುತೇಕ ಇವರದೇ ಆಡಳಿತವಾಗಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಉಳುವವನನ್ನು ಭೂ ಒಡೆಯನನ್ನಾಗಿಸುವುದೇ, ವ್ಯವಸಾಯದಲ್ಲಿ ಹಿತ ಹೊಂದಿದವನಿಗೆ ಭೂಮಿ ನೀಡುವುದೇ ಇಂದಿನ ತುರ್ತು ಅಗತ್ಯವಾಗಿದೆ. ಕರ್ನಾಟಕ ಸರಕಾರ ದೇವದಾಸಿ ಮಹಿಳೆಯರು, ಮತ್ತಿತರೇ ದಲಿತರಿಗೆ ಭೂಮಿಯನ್ನು ಒದಗಿಸುವ ಭೂಮಿ ಯೋಜನೆಯನ್ನು ಹೊಂದಿದೆಯಾದರೂ ಅದು ಅಸಮರ್ಪಕವಾಗಿದೆ. ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಾಗಿದೆ. ಕೊಟ್ಟಿರುವ ಭೂಮಿಯು ಬಹುತೇಕ ಭೂ ಸುದ–ಾ ರಣಾ ಕಾನೂನಿನ ವ್ಯಾಪ್ತಿಯ ಆಚೆ ಅಂದರೆ ಭೂಮಾಲಕರ ಹೆಚ್ಚುವರಿ ಜಮೀನಾಗಿದ್ದು ಸರಕಾರ ಅದನ್ನು ಭೂಮಾಲಕರಿಂದ ಸ್ವಾಧೀನ ಪಡಿಸಿಕೊಂಡು ಅವರಿಗೆ ಪರಿಹಾರ ನೀಡುವ ಭೂಮಿಯಾಗಿದ್ದು, ಬಹುತೇಕ ಅವುಗಳ ಹಕ್ಕು ಪತ್ರಗಳನ್ನು ಮಾತ್ರ ದಲಿತರಿಗೆ ವಿತರಿಸಲಾಗಿದೆ. ಅನೇಕ ಭೂಮಾಲಕರು ಇಂತಹ ಜಮೀನುಗಳಿಗೆ ಹಕ್ಕು ಪತ್ರ ಪಡೆದವರಿಂದ ಸಹಿ ಮಾಡಿಸಿಕೊಂಡು ಅವುಗಳ ಮೇಲೆ ಬ್ಯಾಂಕುಗಳಲ್ಲಿ ಸಾಲವನ್ನು ಎತ್ತಿ ಬಿಟ್ಟಿದ್ದಾರೆ. ಮಾತ್ರವಲ್ಲ, ಜಮೀನುಗಳನ್ನು ತಮ್ಮ ವಶದಲ್ಲಿಯೇ ಇಟ್ಟು–ಕೊಂಡಿದ್ದಾರೆ. ಬಹುತೇಕರಿಗೆ ದಲಿತರಿಗೆ ತಮ್ಮಗೆ ನೀಡಲಾದ ಜಮೀನು ಎಲ್ಲಿದೆಯೆಂಬುದೇ ತಿಳಿಯದಾಗಿದೆ. ಅದೇ ರೀತಿ, ಇಂತಹ ಅನೇಕ ಜಮೀನುಗಳು ಕೋರ್ಟಗಳಲ್ಲಿ ವಿವಾದವನ್ನು ಎದುರಿಸುತ್ತಿವೆ. ದಕ್ಷಿಣ ಕನ್ನಡ ಅಥವಾ ಕರಾವಳಿ ಪ್ರದೇಶದಲ್ಲಿ ದಲಿತರಿಗೆ ಮೀಸಲಾದ ಡೀಸಿ ಮನ್ನಾ ಜಮೀನು ಇದೆಯಾದರೂ ಅದನ್ನು ಅವರಿಗೆ ಒದಗಿಸಲಾಗುತ್ತಿಲ್ಲ. ಬದಲಿಗೆ, ಅವುಗಳನ್ನು ಬಲಾಢ್ಯರು ಒತ್ತುವರಿ ಮಾಡಿಕೊಂಡಿದ್ದಾರೆ. ದಲಿತರಿಗೆ ನೀಡಲಾದ ಮತ್ತು ಮೀಸಲಾದ ಜಮೀನುಗಳನ ಅವರ ವಶಕ್ಕೆ ನೀಡಲು ಯಾವುದೇ ಗಂಭೀರ ಕ್ರಮಗಳನ್ನ ಹೊಂದಿಲ್ಲದಿರುವುದರಿಂದ ಪರಿಸ್ಥಿತಿ ಈಗೇಯೆ ಮುಂದುವರೆದಿದೆ.

ಸಾಮಾನ್ಯ ಜನತೆಯ ತಲಾ ಆದಾಯವನ್ನು ಹೆಚ್ಚಿಸದೇ ಜಗತ್ತನ್ನು ಬಿಕ್ಕಟ್ಟಿನಿಂದ ಪಾರು ಮಾಡುವ ಪ್ರಯತ್ನಗಳೆಲ್ಲಾ ಇನ್ನೊಂದು ಗಂಭಿರ ಬಿಕ್ಕಟ್ಟಿಗೆ ದಾರಿಯಾಗಲಿದೆಯೇ ಹೊರತು ಪರಿಹಾರವಾಗಿಲ್ಲ. ಆದ್ದರಿಂದಲೇ ಭೂಮಿಯ ಪ್ರಶ್ನೆಯು ಬಡವರು, ದಲಿತರು, ಆದಿವಾಸಿಗಳು ಮತ್ತು ಮಹಿಳೆಯರ ಹಾಗೂ ರೈತರು, ಕೂಲಿಕಾರರ ಪರವಾಗಿ ಇತ್ಯರ್ಥ ಪಡಿಸುವುದು ಅಗತ್ಯವಾಗಿದೆ.

ಹೀಗಾಗಿ, ಭೂಮಿಯ ಹಕ್ಕು ನಮ್ಮ ಜಂಟಿ ಹೋರಾಟದ ಮತ್ತೊಂದು ಪ್ರಮುಖ ಅಂಶವಾಗಿದೆ. ಅದಕ್ಕಾಗಿ,

1. ಸರಕಾರ ತಕ್ಷಣವೇ ಎಲ್ಲಾ ದೇವದಾಸಿ ಮಹಿಳೆಯರು, ಅವರ ಮಕ್ಕಳು, ಮಸಣ ಕಾರ್ಮಿಕರು, ಮಂಗಳವಾದ್ಯ ಕಲಾವಿಧರು, ಇತರೇ ದಲಿತರು, ಆದಿವಾಸಿಗಳು ಮತ್ತಿತರೇ ಬಡ ಜನಗಳಿಗೆ ತಲಾ ಐದು ಎಕರೆ ಜಮೀನನ್ನು ಒದಗಿಸಬೇಕು. ಇದಕ್ಕಾಗಿ, ತಲಾ ಕುಟುಂಬದ ಭೂಮಿತಿಯನ್ನು 10 ಎಕರೆಗೆ ಇಳಿಸಲು ಮತ್ತು ಭೂಮಿ ಖರೀಧಿಸಲು ಮತ್ತು ಹೊಂದಲು ಇರುವ ಆದಾಯದ ಮಿತಿಯನ್ನು ಈ ಹಿಂದಿನಂತೆ 2 ಲಕ್ಷರೂಗಳಿಗೆ ಇಳಿಸಲು ಮತ್ತು ಅದೇ ರೀತಿ, ಗುತ್ತಿಗೆ ಬೇಸಾಯದಲ್ಲಿ ತೊಡಗಿರುವ ಬಡ–ರೈತರು ಮತ್ತು ಕೂಲಿಕಾರರ ನೊಂದಾವಣೆಗೆ ಹಾಗೂ ಸಂರಕ್ಷಣೆಗೆ ಮತ್ತು ಅವರ ಬೇಸಾಯಕ್ಕೆ ನೆರವಾಗಲೂ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತರಬೇಕು. ಹೀಗೆ ಬರುವ ಹೆಚ್ಚುವರಿ ಜಮೀನುಗಳನ್ನು ಅವರಿಗೆ ವಿತರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.
2. ನಗರ ವ್ಯಾಪ್ತಿಯೂ ಸೇರಿದಂತೆ ವಿವಿಧ ಸರಕಾರಿ ಜಮೀನುಗಳಲ್ಲಿ ಸಾಗುವಳಿಯಲ್ಲಿ ತೊಡಗಿದ ಎಲ್ಲಾ ಬಡ ರೈತರಿಗೆ ಅವರ ಉಳುಮೆಯ ಹಕ್ಕನ್ನು ಖಾತರಿ ಪಡಿಸಲು ತಕ್ಷಣವೇ ಭೂ ಕಂದಾಯ ಕಾಯ್ದೆಗೆ ಅಗತ್ಯ ತಿದ್ದುಪಡಿಗಳನ್ನು ಮಾಡಬೇಕು. ಅರಣ್ಯ ಭೂಮಿ ಸಾಗುವಳಿನಿರತ ಬಡವರಿಗೆ ಹಕ್ಕುಪತ್ರ ನೀಡಲು ಅಡ್ಡಿಯಾಗಿರುವ ಅರಣ್ಯ ಹಕ್ಕು ಮಾನ್ಯತಾ ಕಾಯ್ದೆಗೆ ತಿದ್ದುಪಡಿ ತರಬೇಕು. ಈ ಎಲ್ಲರ ಜಮೀನುಗಳನ್ನು ತಕ್ಷಣವೇ ಸರ್ವೇ ನಡೆಸಿ ವಾಸ್ತವಿಕತೆಯ ಆಧಾರದಲ್ಲಿ ಈ ಎಲ್ಲರ ಹೆಸರುಗಳನ್ನು ಪಹಣಿ ಪತ್ರಿಕೆಯ ಸಾಗುವಳಿ ಕಲಂನಲ್ಲಿ ಸೇರ್ಪಡೆ ಮಾಡಬೇಕು. ಅರಣ್ಯವಾಸಿಗಳಿಗೆ ಅರಣ್ಯ ಉತ್ಪನ್ನಗಳ ಮೇಲಿನ ಅವರ ಪರಂಪರಾಗತ ಹಕ್ಕನ್ನು ಉಳಿಸಿ ಬೆಳೆಸಬೇಕು.
3. ಕಸ್ತೂರಿ ರಂಗನ್ ವರದಿಯನ್ನು ಯಥಾರ್ಥವಾಗಿ ಜಾರಿಗೆ ತರುವುದನ್ನು ತಕ್ಷಣ ನಿಲ್ಲಿಸಬೇಕು ಮತ್ತು ಪರಿಸರ ಸ್ನೇಹಿ ಅಭಿವೃದ್ಧಿಗೆ ಮತ್ತು ಅರಣ್ಯವಾಸಿಗಳ ಅರಣ್ಯ ಹಕ್ಕುಗಳಿಗೆ ಪೂರಕವಾಗುವಂತೆ ಅಗತ್ಯ ತಿದ್ದುಪಡಿಗೆ ಮುಂದಾಗಬೇಕು.
4. ಅರಣ್ಯ ಇಲಾಖೆಯಿಂದ ವಾಪಾಸು ಪಡೆಯಲಾಗುವ ಕಂದಾಯ ಇಲಾಖೆಯ 18 ಲಕ್ಷ ಎಕರೆ ಜಮೀನನ್ನು ಅದರ ಮೂಲ ಬಡ ಸಾಗುವಳಿದಾರರಿಗೆ ವಾಪಾಸು ನೀಡಬೇಕು. ಉಳಿದುದನ್ನು ಬಡವರಿಗೆ ನೀಡಬೇಕು.
5. ದಲಿತರಿಗೆ ನೀಡಲಾದ ಹೆಚ್ಚುವರಿ ಜಮೀನುಗಳಲ್ಲಿ ಅವರು ಸಾಗುವಳಿಯಲ್ಲಿ ತೊಡಗುವಂತಾಗಲೂ ಅಗತ್ಯ ಕ್ರಮಗಳನ್ನು ವಹಿಸಬೇಕು ಮತ್ತು ಅಂತಹವರಿಗೆ ಸೂಕ್ತ ರಕ್ಷಣೆ ಮತ್ತು ಭೂ ಅಬಿವೃಧ್ಧಿಗೆ ಸೂಕ್ತ ನೆರವನ್ನು ಒದಗಿಸಬೇಕು. ನ್ಯಾಯಾಲಯದಲ್ಲಿರುವ ವ್ಯಾಜ್ಯಗಳು ತ್ವರಿತವಾಗಿ ಇತ್ಯರ್ಥವಾಗುವಂತೆ ಕ್ರಮವಹಿಸಬೇಕು. ಡೀಸಿ ಮನ್ನಾ ಜಮೀನುಗಳ ಯಾದಿಯನ್ನು ತಯಾರಿಸಿ, ಅಂತಹ ಜಮೀನುಗಳನ್ನು ಒತ್ತುವರಿಯನ್ನು ತೆರವುಗೊಳಿಸಿ ದಲಿತರಿಗೆ ವಿತರಿಸಲು ಕ್ರಮವಹಿಸಬೇಕು.
6. ದಲಿತರು, ದೇವದಾಸಿ ಮಹಿಳೆಯರು ಮತ್ತು ಆದಿವಾಸಿಗಳಿಗೆ ಇತರೇ ಬಡವರಿಗೆ ಜಮೀನು ಒದಗಿಸಲು ಭೂಮಿ ಯೋಜನೆಯನ್ನು ಬಲಗೊಳಿಸಬೇಕು. ಅದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಹಣಕಾಸು ನೆರವು ನೀಡ ಬೇಕು.
7. ಈ ಎಲ್ಲಾ ಸಂದರ್ಭದಲ್ಲೂ ಅಂದರೆ ವಸತಿ ಯೋಜನೆಯೂ ಸೇರಿದಂತೆ ಭೂಮಿ ವಿತರಣೆಯಲ್ಲಿಯೂ ಹಕ್ಕು ಪತ್ರಗಳನ್ನು ನೀಡುವಾಗ ಜಂಟಿ ಹಕ್ಕುಪತ್ರವನ್ನು ನೀಡುವುದಾಗಬೇಕು.

ಇದು ಇಂದಿನ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ದಿನಮಾನಗಳಲ್ಲಿ ಅಗತ್ಯವೂ ಆಗಿದೆ. ಸಾಮಾನ್ಯ ಜನತೆಯ ತಲಾ ಆದಾಯವನ್ನು ಹೆಚ್ಚಿಸದೇ ಜಗತ್ತನ್ನು ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡುಲು ಸಾಧ್ಯವಿಲ್ಲ. ಹಾಗೇ ಮಾಡದೇ ಮಾಡಲಾಗುವ ಇತ–ರೆ ಪ್ರಯತ್ನಗಳೆಲ್ಲಾ ಜಗತ್ತನ್ನು ಬಿಕ್ಕಟಿನಿಂದ ಪಾರು ಮಾಡುವ ಬದಲು ಅದನ್ನು ಮತ್ತೊಂದು ಗಂಭಿರ ಬಿಕ್ಕಟ್ಟಿನೆಡೆಗೆ ತಳ್ಳಲಿದೆ.

ಬಡವರಿಗೆ ಭೂಮಿ ಹಂಚಿದ ಕೇರಳದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಸರ್ಕಾರದ ಈ ಹೆಜ್ಜೆಯು ಕೃಷಿ ಕೂಲಿಕಾರರ ಸಂಖ್ಯೆಯನ್ನು ಅಲ್ಲಿ ಗಣನೀಯವಾಗಿ ಕುಗ್ಗಿಸಿತಲ್ಲದೇ, ಅಪಾರ ಬೇಡಿಕೆಯನ್ನು ತಂದಿತ್ತು. ಇದರ ಜೊತೆ ಆ ಸರ್ಕಾರ ರೂಪಿಸಿದ ಬಡವರಿಗೆ ಪಿಂಚಣಿ ಮತ್ತು ಭವಿಷ್ಯ ನಿಧಿ ಯೋಜನೆಯು ಸಾಮಾಜಿಕ ಬದಲಾವಣೆಗೆ ಒಂದು ಹೊಸ ತಿರುವು ನೀಡಿದುದನ್ನು ನಾವು ನೋಡುತ್ತೇವೆ.

ಅದು ಜೀತ ಪದ್ಧತಿ, ದೇವದಾಸಿ ಪದ್ಧತಿ, ಭಿಕ್ಷಾಟನೆಗೆ ಕೊಡಲಿ ಏಟು ನೀಡಿತಲ್ಲದೇ, ದಲಿತರ ಸ್ವಾವಲಂಬನೆಗೆ, ಸ್ವಾಭಿಮಾನದ ಹೆಚ್ಚಳಕ್ಕೆ ಕಾರಣವಾಯಿತು. ಆದ್ದರಿಂದಲೇ ಭೂಮಿಯ ಪ್ರಶ್ನೆಯು ಬಡವರು, ದಲಿತರು, ಆದಿವಾಸಿಗಳು ಮತ್ತು ಮಹಿಳೆಯರ ಹಾಗೂ ರೈತರು, ಕೂಲಿಕಾರರ ಪರವಾಗಿ ಇತ್ಯರ್ಥ ಪಡಿಸುವುದು ಅಗತ್ಯವಾಗಿದೆ. ಇದು ಮಾತ್ರವೇ ಜನತೆಯನ್ನು ಅವರ ಮೇಲಿನ ದೌರ್ಜನ್ಯ ಮತ್ತು ಆದಾಯದ ಕೊರತೆಯಿಂದ ಪಾರು ಮಾಡಬಲ್ಲದು. ■

ಕಿಸಾನ್ ಸಂಘರ್ಷ ಜಾಥಾ......... ಪುಟ 8 ರಿಂದ

ಪದ್ದತಿಯನ್ನು ಅನುಸರಿಸಬೇಕು. ಒಂದೆಡೆ ಕೃಷಿ ಉತ್ಪಾದನಾ ಚಟುವಟಿಕೆಯಲ್ಲಿ ಮತ್ತು ಕೃಷಿ ಸಂಬಂಧಿ ಕೃಗಾರಿಕಾ ಚಟುವಟಿಕೆಗಳಲ್ಲೂ ಸಹಕಾರಿ ಪದ್ದತಿಗನ್ನು ಅಳವಡಿಸಿಕೊಂಡು ಅಲ್ಲಿ ಕೆಲಸ ಮಾಡುವ ಕೃಷಿ ಕೂಲಿಕಾರರಿಗೆ ಕನಿಷ್ಟಕೂಲಿಯನ್ನು ನೀಡಿದರೆ ಮತ್ತು ಮಾರುಕಟ್ಟೆಯನ್ನು ಸಂಪೂರ್ಣವಾಗಿ ಖಾಸಗಿ ಹಿಡಿತದಿಂದ ತಪ್ಪಿಸಿ ಅಲ್ಲಿಯೂ ಸಹಕಾರಿ ತತ್ವದಡಿ ನಡೆಸಿದರೆ ನಿಜವಾಗಲೂ ರೈತ ಕೃಷಿ ಉಳಿಯುತ್ತದೆ. ಅದನ್ನೇ ನಂಬಿ ಬದುಕುತ್ತಿರುವ ಅಪಾರ ಸಂ–ಖ್ಯೆಯ ರೈತ ಮತ್ತು ಕೂಲಿಕಾರರು ಉಳಿಯುತ್ತಾರೆ. ಆಮೂಲಕ ನೈಜ ಭಾರತ ಉಳಿಯುತ್ತದೆ. ■

ಕಿಸಾನ್ ಸಂಘರ್ಷ ಜಾಥಾ 2 ರ ಮಾರ್ಗಸೂಚಿ ವಿವರ

ಕ್ರ ಸಂ	ದಿನಾಂಕ	ಜಾಥಾ ಬರುವ ಸ್ಥಳ	ಸಮಯ	ಕಾರ್ಯಕ್ರಮ
01	14.11.16	ಮಂಗಳೂರು	ರಾತ್ರಿ 9.00	–
02	15.11.16	ಮಂಗಳೂರು	ಬೆಳಿಗ್ಗೆ 8.30	–
03	15.11.16	ಮಂಗಳೂರು	ಬೆಳಿಗ್ಗೆ 11,00–2,00	ಬಹಿರಂಗ ಸಭೆ
04	15.11.16	ಕುಂದಾಪುರ	ಸಂಜೆ 04.30–6.30	ಬಹಿರಂಗ ಸಭೆ
05	16.11.16	ಕುಂದಾಪುರ	ಬೆಳಿಗ್ಗೆ 8.30	–
06	16.11.16	ಹೊನ್ನಾವರ	ಬೆಳಿಗ್ಗೆ 11.00–1.00	ಬಹಿರಂಗ ಸಭೆ
07	16.11.16	ಕಾರವಾರ		
08	16.11.16	ಬೆಳಗಾವಿ	ಮದ್ಯಾಹ್ನ 12.00–3.00	ಬಹಿರಂಗ ಸಭೆ

ಕೇಳಿಸಿದ್ದು

ಜಾತಿ ವಿನಾಶದ
ಹೋರಾಟದಲ್ಲಿ ತೊಡಗಿರುವವರು
ಮಾರ್ಕ್ಸ್‌ರವರನ್ನು ಓದಬೇಕು.
ವರ್ಗ ವಿನಾಶದ
ಹೋರಾಟದಲ್ಲಿ ತೊಡಗಿರುವವರು
ಅಂಬೇಡ್ಕರ್‌ರವರನ್ನು ಓದಬೇಕು'.

– ಪ್ರೊ॥ ಬಿ.ಎಂ. ಪುಟ್ಟಯ್ಯ.
ಪ್ರಾಧ್ಯಾಪಕರು, ಹಂಪಿ ಕನ್ನಡ ವಿಶ್ವವಿದ್ಯಾಲಯ.





ಒಂದೇ 'ಆಧಾರ್' ಇದ್ದ 708 ನಕಲಿ ರೇಶನ್ ಕಾರ್ಡುಗಳು !

ಬೆಂಗಳೂರಿನ ವೀರಪುರದಲ್ಲಿರುವ ಒಂದು ನ್ಯಾಯಬೆಲೆ ಅಂಗಡಿಯ ವ್ಯಾಪ್ತಿಯಲ್ಲೇ 708 ರೇಶನ್ ಕಾರ್ಡುಗಳಿಗೆ ಒಂದೇ ಒಂದು ಆಧಾರ ಸಂಖ್ಯೆಯನ್ನು ಜೋಡಿಸಲಾಗಿದೆ! ಇದೇ ಅಕ್ಟೋಬರ್ 12ರಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಕಾರ್ಯದರ್ಶಿಗಳೇ ಬಹಿರಂಗ ಪಡಿಸಿದ ಈ ಮಾಹಿತಿ ಬೆಚ್ಚಿಬೀಳಿಸುವಂತಹುದು. ವ್ಯಕ್ತಿಯ ಬೆರಳಚ್ಚು ಮತ್ತು ಕಣ್ಣಿನ ಪಾಪೆ ವ್ಯಕ್ತಿಗೆ ವಿಶಿಷ್ಟ, ಆಧಾರ್ ಸಂಖ್ಯೆಯ ಜೊತೆಗೆ ಈ ವಿವರಗಳನ್ನೂ ಜೋಡಿಸಿ ಒಂದು ಮಾಹಿತಿ ಗುಂಪಾಗಿ ಸಂಗ್ರಹಿಸಲಾಗುತ್ತದೆ. ಯಾವುದೇ ಸಂದರ್ಭದಲ್ಲಿಯೂ ವ್ಯಕ್ತಿಯನ್ನು ನಿಖರವಾಗಿ ಗುರುತಿಸಲು ಈ ಮಾಹಿತಿಯನ್ನು ಬಳಸಿಕೊಳ್ಳಬಹುದು.

ಇದು 'ಆಧಾರ್' ಪ್ರಾಜೆಕ್ಟಿಗೆ ಪ್ರಮುಖ ಆಧಾರ. ಮಾತ್ರವಲ್ಲ, 'ಆಧಾರ್' ಕೇಂದ್ರ ಸರಕಾರದ ಹಲವು ಯೋಜನೆಗಳ ಫಲಾನುಭವಿಗಳನ್ನು ನಿಖರವಾಗಿ ಗುರುತಿಸಲು ಸಿದ್ಧಪಡಿಸಲಾಗುತ್ತಿರುವ ಇ-ಆಡಳಿತ ವ್ಯವಸ್ಥೆಯ ಆಧಾರ ಕೂಡಾ. ಒಬ್ಬ ವ್ಯಕ್ತಿ ಒಂದಕ್ಕಿಂತ ಹೆಚ್ಚು ಆಧಾರ್ ಸಂಖ್ಯೆಗಳನ್ನು ಪಡೆಯಲು ಸಾಧ್ಯವೇ ಇಲ್ಲ. ಒಂದು ಆಧಾರ್ ಸಂಖ್ಯೆ ಹಲವು ವ್ಯಕ್ತಿಗಳಿಗೆ ನೀಡಲು ಸಾಧ್ಯವೇ ಇಲ್ಲ. ಇಂಥ ಆಧಾರ್ ಸಂಖ್ಯೆಯನ್ನು ರೇಶನ್ ಕಾರ್ಡಿಗೆ ಜೋಡಿಸುವುದರಿಂದ ಒಬ್ಬ ವ್ಯಕ್ತಿಯ ಹೆಸರು ಒಂದಕ್ಕಿಂತ ಹೆಚ್ಚು ಪಡಿತರ ಚೀಟಿಗಳಲ್ಲಿ ಇರುವುದು ಸಾಧ್ಯವಿಲ್ಲ. ನಕಲಿ ಪಡಿತರ ಚೀಟಿಯನ್ನು ಹೋಗಲಾಡಿಸಲು ಇದು ಬಹಳ ಪರಿಣಾಮಕಾರಿ ವಿಧಾನ ಎಂದಿತ್ತು ಸರಕಾರ, ಆದರೆ ಈಗ ವರದಿಯಾಗಿರುವ ಈ ಪ್ರಕರಣ ಸರಕಾರದ ಈ ಹೇಳಿಕೆಯ ಆಧಾರವನ್ನೇ ಬುಡಮೇಲು ಮಾಡಿದೆ.

ರೇಶನ್ ಕಾರ್ಡು ಮತ್ತು ಆಧಾರ್ ಮಾಹಿತಿ ಗಳ ನೀಡಿಕೆಯ ಸಾಫ್ಟ್ ವೇರ್ ನಲ್ಲಿ ಅಥವಾ ಅವನ್ನು ಹೋಲಿಸುವ ಜೋಡಿಸುವ ಸಾಫ್ಟ್ ವೇರ್ ನಲ್ಲಿ ತಪ್ಪಾಗಿರುವ ಸಾಧ್ಯತೆ ಇದೆ. ಅಥವಾ ಇಂತಹ ನಕಲಿ ಡುಪ್ಲಿಕೇಟ್ ರೇಶನ್ ಕಾರ್ಡು ನೀಡಲು ಸಂಬಂಧ ಪಟ್ಟವರು ಬೇಕೆಂತಲೇ ಇಂತಹ ವ್ಯವಸ್ಥೆಯನ್ನು ಇಟ್ಟಿರಬೇಕು. ಎರಡನೇ ಸಾಧ್ಯತೆಯೇ ಹೆಚ್ಚು. ಏಕೆ-ಂದರೆ ಮೊದಲನೆಯದು ನಿಜವಾಗಿದ್ದರೆ ಇದು ಎಂದೋ ಬಯಲಿಗೆ ಬರಬೇಕಿತ್ತು. ಇದು ಇಲ್ಲಿಯ ತನಕ ಬಯಲಿಗೆ ಬಂದಿಲ್ಲ ಎಂದಾದರೆ ಇಲ್ಲೊಂದು ದೊಡ್ಡ ಹಗರಣವೇ ಇದೆ ಎಂದರ್ಥ.

ನಕಲಿ ರೇಶನ್ ಕಾರ್ಡುಗಳನ್ನು ಹೋಗಲಾಡಿಸಲು ಮತ್ತು ಅಪಾತ್ರರು ರೇಶನ್ ಪಡೆದುಕೊಳ್ಳುವುದನ್ನು ತಡೆಯಲು ಹಲವು ವಿಧಾನಗಳನ್ನು ಸರಕಾರ ಜಾರಿಗೆ ತಂದಿದೆ. ಕಾರ್ಡಿನಲ್ಲಿ ಫೋಟೋ, ರೇಶನ್ ಅಂಗಡಿಗಳಲ್ಲಿ ಬಯೊಮೆಟ್ರಿಕ್ಸ್, ವಿದ್ಯುತ್ ಕನೆಕ್ಷನಿನ ಆರ್.ಆರ್. ನಂಬರಿನ ಜತೆ ಹೋಲಿಕೆ, ಆಧಾರ್ ಜತೆ ಹೋಲಿಕೆ, ಇತ್ತೀಚೆಗೆ ಪ್ರತಿ ಬಾರಿ ಕಾರ್ಡು ತೋರಿಸಿ ಕೂಪನ್ ಪಡೆದುಕೊಳ್ಳುವುದು – ಸರಕಾರ ತಂದಿರುವ ಕೆಲವು ವಿಧಾನಗಳು. ಅವೆಲ್ಲವೂ ವಿಫಲವಾಗಿವೆ ಎಂಬುದಕ್ಕೆ, ಇಷ್ಟು ವಿವಿಧ ವಿಧಾನಗಳ ಪ್ರಯೋಗ ನಡೆದಿದೆ ಎಂಬುದಕ್ಕಿಂತ ಹೆಚ್ಚಿನ ನಿದರ್ಶನ ಬೇಕೆ?

ಸರಕಾರ ಈ ಪ್ರಕರಣದ ಬಗ್ಗೆ ತನಿಖೆಗೆ ಆಜ್ಞೆ ಮಾಡಿದೆ. ಕೆಲವು ಬಂಧನಗಳೂ ಆಗಿವೆ. ಅಲ್ಲದೆ ಇನ್ನೂ ಇಂತಹ ಪ್ರಕರಣಗಳು ಹೊರ ಬರುತ್ತಿವೆ. ಒಬ್ಬ ವ್ಯಕ್ತಿಯನ್ನು ಪೂರ್ಣವಾಗಿ ಯಂತ್ರ-ತಂತ್ರಜ್ಞಾನದ ಸಹಾಯದಿಂದ ಯಾವುದೇ ತಪ್ಪಿನ ಸಾಧ್ಯತೆ ಇಲ್ಲದೆ ಗುರುತಿಸುವುದು ಸಾಧ್ಯವೇ? ಅದೂ ಇಡೀ ದೇಶದ ಎಲ್ಲಾ ವ್ಯಕ್ತಿಗಳ ಮಾಹಿತಿ ಇಟ್ಟಿರುವ ಒಂದು ಕೇಂದ್ರೀಕೃತ ವ್ಯವಸ್ಥೆಯಿಂದ ಸಾಧ್ಯತವೇ? ಈ ಪ್ರಶ್ನೆಗಳಿಗೆ ಎಲ್ಲಾ ತಜ್ಞರು ಒಪ್ಪುವ ಒಂದೇ ಉತ್ತರವಿಲ್ಲ. ಹಲವು ತಜ್ಞರು ಇಲ್ಲವೆಂದೇ ಹೇಳುತ್ತಾರೆ.

ಆದರೂ ಕೇಂದ್ರ/ರಾಜ್ಯ ಸರಕಾರಗಳು ಇಂತಹ ಯಂತ್ರ/ತಂತ್ರಜ್ಞಾನ ಆಧಾರಿತ "ಪರಿಹಾರ"ಗಳ ಮೇಲೆ ಕೋಟ್ಯಾಂತರ ರೂ.ಗಳನ್ನು ಖರ್ಚು ಮಾಡಿವೆ. ಆದರೆ ಅವುಗಳ ನಿಜವಾದ ಉದ್ದೇಶ ನಕಲಿ ರೇಶನ್ ಕಾರ್ಡುಗಳನ್ನು ಅಥವಾ ಅಪಾತ್ರರು ರೇಶನ್ ಪಡೆಯುವುದನ್ನು ಹೋಗಲಾಡಿಸುವುದು ಅಲ್ಲವೇ ಅಲ್ಲ. ರೇಶನ್ ನಿಜವಾದ ಬಡವರಿಗೆ ಸಿಗಬೇಕು ಎಂಬುದೂ ಅಲ್ಲ. ಈ ಎಲ್ಲಾ 'ಪರಿಹಾರ'ಗಳ ನಿಜವಾದ ಉದ್ದೇಶ, ರೇಶನ್ ಕಾರ್ಡುಗಳ ಸಂಖ್ಯೆ, ರೇಶನ್ ಪಡೆಯುವವರ ಸಂಖ್ಯೆ ಕಡಿಮೆ ಮಾಡುತ್ತಾ ಹೋಗಿ ಅದನ್ನು ಒಂದು ದಿನ ಇಲ್ಲವಾಗಿಸುವುದು.

ಈ ಸಮಸ್ಯೆಗೆ 'ಯಾವುದೇ ಹುಳುಕು ಇಲ್ಲದ' ಯಂತ್ರ/ತಂತ್ರಜ್ಞಾನ ಆಧಾರಿತ "ಪರಿಹಾರ"ಗಳು ಇಲ್ಲ. ಶ್ರೀಮಂತರು, ಸ್ಥಿತಿವಂತರು ಇಂದಿನ ಪರಿಸ್ಥಿತಿಯಲ್ಲಿ ಕ್ಯೂ ನಿಂತು ರೇಶನ್ ತೆಗೆದುಕೊಳ್ಳುವುದಿಲ್ಲ. ಆದ್ದ-ರಿಂದ ಬಡವರು ಅಲ್ಲದವರು ಎಂಬ ಈ ಕೃತಕ ರೇಖೆಯನ್ನು ಅಳಿಸಿ ಹಾಕಿ, ಸಾರ್ವತ್ರಿಕ ರೇಶನ್ ವ್ಯವಸ್ಥೆಯನ್ನು ಜಾರಿಗೊಳಿಸುವುದೊಂದೇ ಇದಕ್ಕೆ ಪರಿಹಾರ.

ಬರ-ನೆರೆ ಪರಿಹಾರಕ್ಕೆ ಕೇಂದ್ರ ನೆರವಿಗೆ ಮನವಿ

ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಬರ ಪೀಡಿತ 110 ತಾಲ್ಲೂಕುಗಳಲ್ಲಿ 11,300 ಕೋಟಿ ಮೊತ್ತದ ಬೆಳೆ ನಷ್ಟ ಆಗಿದೆ ಎಂದು ರಾಜ್ಯ ಸರ್ಕಾರ ಅಂದಾಜು ಮಾಡಿದೆ. ಹೈದರಾಬಾದ್ – ಕರ್ನಾಟಕ ಭಾಗದಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಬಿದ್ದ ಅಕಾಲಿಕ ಮಳೆಯಿಂದ ಉಂಟಾದ ಪ್ರವಾಹದಲ್ಲಿ 2,485 ಕೋಟಿ ಮೊತ್ತದ ಬೆಳೆ, ಆಸ್ತಿಪಾಸ್ತಿ ನಷ್ಟ ಆಗಿದೆ ಎಂದೂ ಸರ್ಕಾರದ ಸಮೀಕ್ಷೆ ಖಚಿತಪಡಿಸಿದೆ.

ಬರ ಪರಿಹಾರಕ 3,300 ಕೋಟಿ ಮತ್ತು ಪ್ರವಾಹದ ಹಾನಿಗೆ 386 ಕೋಟಿ ನೆರವು ನೀಡುವಂತೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಿದೆ. ಬರ ಮತ್ತು ಪ್ರವಾಹದಿಂದ ಉಂಟಾಗಿರುವ ನಷ್ಟವನ್ನು ಕೃಷಿ, ತೋಟಗಾರಿಕೆ ಮತ್ತು ಕಂದಾಯ ಇಲಾಖೆ ಅಧಿಕಾರಿಗಳ ತಂಡ ಜಂಟಿಯಾಗಿ ಸಮೀಕ್ಷೆ ನಡೆಸಿ ಅಂದಾಜಿಸಿದೆ.

ಬರ ಪೀಡಿತ ತಾಲ್ಲೂಕುಗಳಲ್ಲಿ ರಾಗಿ, ಜೋಳ, ಶೇಂಗಾ, ಮೆಣಸಿನಕಾಯಿ, ಈರುಳ್ಳಿ, ಟೊಮೆಟೊ ಹೆಚ್ಚು ಹಾನಿಗೊಳಗಾಗಿದೆ. ಒಟ್ಟು 25 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಬೆಳೆದ ಕೃಷಿ ಉತ್ಪನ್ನಗಳು ನಷ್ಟವಾಗಿದೆ.

ಕಲಬುರ್ಗಿ, ಯಾದಗರಿ, ರಾಯಚೂರು ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಸಂಭವಿಸಿದ ಅತಿವೃಷ್ಟಿಯಲ್ಲಿ ಭತ್ತ, ಜೋಳ, ಉದ್ದು, ತೊಗರಿಗೆ ಹೆಚ್ಚು ನಷ್ಟ ಉಂಟಾಗಿದೆ. ಕಟ್ಟಡಗಳು, ರಸ್ತೆ ಸೇರಿದಂತೆ ಮೂಲಸೌಕರ್ಯಗಳೂ ಹಾನಿಗೆ ಒಳಗಾಗಿವೆ. ಪ್ರವಾಹದಲ್ಲಿ 10 ಮಂದಿ ಮೃತಪಟ್ಟಿದ್ದಾರೆ. 217 ಜಾನುವಾರುಗಳು ಸತ್ತಿವೆ. 23 ಸಾವಿರ ಮನೆಗಳು ಹಾನಿಗೆ ಒಳಗಾಗಿವೆ ಎಂದೂ ಸಮೀಕ್ಷೆ ಹೇಳಿದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಮಳೆಯಾಶ್ರಿತ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್‌ಗೆ 6,800 ನಷ್ಟ ಪರಿಹಾರ ನೀಡುವಂತೆ ಮನವಿ ಸಲ್ಲಿಸಲು ಅವಕಾಶ ಇದೆ. ನೀರಾವರಿ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್‌ಗೆ 13,500 ಹಾಗೂ ಬಹು ವಾರ್ಷಿಕ ಬೆಳೆಗೆ (ತೆಂಗು, ಅಡಿಕೆ) ಪ್ರತಿ ಹೆಕ್ಟೇರ್‌ಗೆ 18,000 ಪರಿಹಾರ ಕೇಳಬಹುದಾಗಿದೆ. ರಾಜ್ಯ ಸರ್ಕಾರ ಮನವಿ ಸಲ್ಲಿಸಿದ ಬಳಿಕ ಕೇಂದ್ರ ಸರ್ಕಾರ ಪರಿಸ್ಥಿತಿ ಅಧ್ಯಯನಕ್ಕೆ ತಂಡ ಕಳುಹಿಸಲಿದೆ. ಈ ತಂಡ ನೀಡುವ ವರದಿಯನ್ನು ಕೇಂದ್ರ ಉನ್ನತ ಸಮಿತಿ ಪರಿಶೀಲಿಸಿ ಪರಿಹಾರ ಮೊತ್ತ ನಿರ್ಧರಿಸಲಿದೆ.

ಆದರೆ ಬರ-ನೆರೆ ಪರಿಹಾರಕ್ಕೆ ಕೇಂದ್ರ ಸರಕಾರದ ಅನುದಾನ ಕಾಯುತ್ತಾ ಕೂರುವುದು ತರವಲ್ಲ. ಕೇಂದ್ರ ಸರಕಾರದ ಅನುದಾನದ ಪ್ರಮಾಣವಾಗಲಿ ಸಮಯಬದ್ಧ ಪಾವತಿಗಾಗಲಿ ಯಾವುದೇ ನಿಶ್ಚಿತತೆ ಇಲ್ಲ. ಕಳೆದ ಸಾಲಿನಲ್ಲಿ ಬರದಿಂದ 15 ಸಾವಿರ ಕೋಟಿ ನಷ್ಟ ಉಂಟಾಗಿದ್ದು, 3,850 ಕೋಟಿ ಪರಿಹಾರ ನೀಡುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿತ್ತು. ಆದರೆ, ಕೇಂದ್ರ 1,540 ಕೋಟಿ ಬಿಡುಗಡೆ ಮಾಡಿತ್ತು. ಅದೂ ಬಹಳ ತಡವಾಗಿ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಆದ್ದರಿಂದ ರಾಜ್ಯ ಸರಕಾರ ತನ್ನ ಮೂಲಗಳಿಂದ ಪರಿಹಾರ ಕಾರ್ಯಕ್ರಮಗಳನ್ನು ಸಮರೋಪಾದಿಯಲ್ಲಿ ಆರಂಭಿಸಿ ನಡೆಸಬೇಕು.

ಯಡಿಯೂರಪ್ಪ 'ದೋಷಮುಕ್ತ'

'ಜಿಂದಾಲ್ ಸ್ಟೀಲ್ ವರ್ಕ್ಸ್' (ಜೆಎಸ್‌ಡಬ್ಲ್ಯು) ನಿಂದ 'ಪ್ರೇರಣಾ ಟ್ರಸ್ಟ್'ಗೆ ದೇಣಿಗೆ ಪಡೆದ ಪ್ರಕರಣದಲ್ಲಿ ಆರೋಪಿಯಾಗಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅವರ ಪುತ್ರರಾದ ಶಾಸಕ ಬಿ.ವೈ. ರಾಘವೇಂದ್ರ, ಬಿ.ವೈ. ವಿಜಯೇಂದ್ರ ಹಾಗೂ ಅಳಿಯ ಸೋಹನ್ ಕುಮಾರ್ ಅವರನ್ನು ಸಿಬಿಐ ವಿಶೇಷ ನ್ಯಾಯಾಲಯ ಬುಧವಾರ ದೋಷಮುಕ್ತಗೊಳಿಸಿದೆ. ಯಡಿಯೂರಪ್ಪ ಉಪ ಮುಖ್ಯಮಂತ್ರಿ ಹಾಗೂ ಮುಖ್ಯಮಂತ್ರಿ ಆಗಿದ್ದಾಗ ಅಧಿಕಾರ ದುರ್ಬಳಕೆ ಮಾಡಿಕೊಂಡು ಎರಡು ಪ್ರತ್ಯೇಕ ಪ್ರಕರಣಗಳಲ್ಲಿ 40 ಕೋಟಿ ಲಂಚ ಪಡೆದ ಆರೋಪಕ್ಕೆ ಒಳಗಾಗಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದ ಆದೇಶವನ್ನು ಸಿಟಿ ಸಿವಿಲ್ ಕೋರ್ಟ್ನ 21ನೇ ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಆರ್.ಬಿ.ಧರ್ಮಗೌಡರ್ ಪ್ರಕಟಿಸಿದರು. ರಾಘವೇಂದ್ರ, ವಿಜಯೇಂದ್ರ ಹಾಗೂ ಸೋಹನ್ ಕುಮಾರ್ ಟ್ರಸ್ಟಿಗಳಾಗಿರುವ ಪ್ರೇರಣಾ ಟ್ರಸ್ಟ್‌ಗೆ ಜೆಎಸ್‌ಡಬ್ಲ್ಯು ಖಾತೆಯಿಂದ 20 ಕೋಟಿ ದೇಣಿಗೆ ರೂಪದಲ್ಲಿ ವರ್ಗಾವಣೆ ಮಾಡಲಾಗಿದೆ. ಅಲ್ಲದೆ, ಬೆಂಗಳೂರು ಹೊರವಲಯದ ರಾಚೇನಹಳ್ಳಿ ಬಳಿ 1 ಎಕರೆ 12 ಗುಂಟೆ ಜಮೀನು ಅಕ್ರಮವಾಗಿ ಡಿನೋಟಿಫೈ ಮಾಡಿ ಜಿಂದಲ್ ಕಂಪೆನಿಗೆ ಮಾರಿದ ಪ್ರಕರಣ ಇದಾಗಿದೆ. ಈ ಪ್ರಕರಣದಲ್ಲಿ ಯಡಿಯೂರಪ್ಪ ಮತ್ತಿತರರು ನಿರ್ದೋಷಿಗಳು ಎಂದು ನ್ಯಾಯಾಲಯ ಸಾರಿದೆ.



ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು, ರಾಜ್ಯದಲ್ಲಿನ ಅಕ್ರಮ ಗಣಿಗಾರಿ-ಕೆಗೆ ಸಂಬಂಧಿಸಿದಂತೆ 2008ರ ಡಿಸೆಂಬರ್‌ನಲ್ಲಿ ಮೊದಲ ಹಾಗೂ 2011ರ ಜುಲೈನಲ್ಲಿ ಎರಡನೇ ವರದಿ ಸಲ್ಲಿಸಿದ್ದರು. ಈ ವರದಿಯ ಮೇಲೆ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಸಮಾಜ ಪರಿವರ್ತನಾ ಸಮುದಾಯದ ಹಿರೇಮಠರು ಹಾಗೂ ಇತರರು ಸುಪ್ರೀಂ ಕೋರ್ಟಿನಲ್ಲಿ 2009ರಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆಯಲ್ಲಿ, ಯಡಿಯೂರಪ್ಪ ಮತ್ತು ಇತರರ ವಿರುದ್ಧ ತನಿಖೆ ನಡೆಸುವಂತೆ 2012ರ ಮೇ ನಲ್ಲಿ ಸಿಬಿಐಗೆ ನಿರ್ದೇಶಿಸಿತ್ತು.

2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ, ಬಿಜೆಪಿ, ಆರೆಸ್ಸೆಸ್ ಮತ್ತು ಸಂಘಪರಿವಾರದ ಹಲವು ನಾಯಕರು, ಕಾರ್ಯಕರ್ತರ ಮೇಲೆ ಇದ್ದ ಹಲವು ಗುರುತರವಾದ ಭ್ರಷ್ಟಾಚಾರ, ಅಪರಾಧ, ಭಯೋತ್ಪಾದನೆಯ ಹಲವು ಪ್ರಕರಣಗಳಲ್ಲಿ 'ದೋಷಮುಕ್ತ'ಗೊಳಿಸಲಾಗಿದೆ. ಗುಜರಾತ್ ದಂಗೆ, ಇಶ್ರತ್ ನಕಲಿ ಎನ್ ಕೌಂಟರ್, ಸಮಜೌತಾ ಎಕ್ಸ್ ಪ್ರೆಸ್ ಸ್ಫೋಟ, ಮಲೆಗಾಂವ್ ಸ್ಫೋಟ – ಮುಂತಾದ ಹಲವು ಪ್ರಕರಣಗಳ ಆಪಾದಿತರು 'ದೋಷಮುಕ್ತ'ಗೊಂಡಿದ್ದಾರೆ ಅಥವಾ ಬೈಲ್ ಕೊಡಲಾಗಿದೆ. ಹೈ ಕೋರ್ಟು ಜೀವಾವಧಿ ಶಿಕ್ಷೆ ವಿಧಿಸಿದ್ದ ಪ್ರಕರಣದಲ್ಲೂ ಬೈಲ್ ಸಿಕ್ಕಿದೆ. ಹೀಗಿರುವಾಗ ಯಡಿಯೂರಪ್ಪ 'ದೋಷಮುಕ್ತ'ರಾಗಿದ್ದರಲ್ಲಿ ಆಶ್ಚರ್ಯವೇನಿಲ್ಲ.

'ಆರೋಪ ಸಾಬೀತುಪಡಿಸಲು ಅಗತ್ಯವಾದ ಸಾಕ್ಷ್ಯಾಧಾರಗಳನ್ನು ಒದಗಿಸಲು ಪ್ರಾಸಿಕ್ಯೂಷನ್ ವಿಫಲವಾಗಿರುವುದರಿಂದ ಎಲ್ಲ ಆರೋಪಿಗಳನ್ನು ದೋಷಮುಕ್ತಗೊಳಿಸಲಾಗಿದೆ' ಎಂಬ ಈ ಪ್ರಕರಣದಲ್ಲಿ ಕೊಡಲಾಗಿರುವ ಕಾರಣವೇ ಎಲ್ಲಾ ಕೇಸುಗಳಲ್ಲಿ ಕೇಳ ಬಂದಿರುವುದು. ವಿರೋಧ ಪಕ್ಷವಾಗಿದ್ದಾಗ 'ಪಂಜರದ ಗಿಳಿ' ಎಂದೇ ಬಿಜೆಪಿ ಹೆಸರಿಟ್ಟಿದ್ದ ಸಿಬಿಐ, ಪಂಜರದ ಕೀಲಿ ಕೈ ಯಾರ ಬಳಿ ಇರುತ್ತದೋ ಅವರಿಗೆ ಬೇಕಾದಂತೆ ಹಾಡುವುದು ಆಶ್ಚರ್ಯದ ಸಂಗತಿಯೇನಲ್ಲ. ಯಡಿಯೂರಪ್ಪ ಅವರು ಇನ್ನು ನಿರಾಳ ಎಂದು ಹಿಗ್ಗುತ್ತಿರಬಹುದು. ಆದರೆ ಅವರು ನಿರಾಳವಾಗಿರಲು ಹಿರೇಮಠರು ಬಿಡುವುದಿಲ್ಲವಲ್ಲ!

ರಾಜ್ಯದಲ್ಲಿ ಶೇ.8ರಷ್ಟು ಮಾನಸಿಕ ಅಸ್ವಸ್ಥರು

ದೇಶದಲ್ಲಿನ 15 ಕೋಟಿ ಯುವ ಭಾರತೀಯರು ನಾನಾ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಕರ್ನಾಟಕದಲ್ಲಿ ಶೇ.8ರಷ್ಟು ಮಂದಿ ಮಾನಸಿಕ ಅಸ್ವಸ್ಥತೆ ಹೊಂದಿದ್ದು, 13 ರಿಂದ 17 ವಯಸ್ಸಿನವರ ಗುಂಪಿನಲ್ಲಿ ಶೇ.7.3 ಮಂದಿಗೆ ಚಿಕಿತ್ಸೆಯ ಅಗತ್ಯವಿದೆ. ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ(ನಿಮ್ಹಾನ್ಸ್) ನಡೆಸಿದ 'ರಾಷ್ಟ್ರೀಯ ಮಾನಸಿಕ ಆರೋಗ್ಯ ಸಮೀಕ್ಷೆ(ಎನ್‌ಎಂಎಚ್‌ಎಸ್)–2016' ಸಮೀಕ್ಷೆಯಿಂದ ಈ ಗಂಭೀರ ಅಂಶ ಹೊರಬಂದಿದೆ.

10 ರೋಗಿಗಳ ಪೈಕಿ ಒಬ್ಬರಲ್ಲಿ ಖಿನ್ನತೆ, ಆತಂಕದ ಸಮಸ್ಯೆಗಳು ಮತ್ತು ಮಾದಕವಸ್ತು ಬಳಕೆಯ ಅಸ್ವಸ್ಥತೆಗಳು ಸಾಮಾನ್ಯವಾಗಿ ಕಂಡು ಬಂದಿವೆ. ನ್ಯೂರೋಸಿಸ್ ಮತ್ತು ದಣಿವು ಸಂಬಂಧಿ ಸಮಸ್ಯೆಗಳಾದ ಫೋಬಿಯಾಗಳು, ಆತಂಕ ಸಂಬಂಧಿ ಸಮಸ್ಯೆಗಳು ಪುರುಷರಿಗಿಂತಲೂ ಮಹಿಳೆಯರಲ್ಲಿ ಹೆಚ್ಚಿನದಾಗಿವೆ. ಶೇ.2ಕ್ಕೂ ಕಡಿಮೆ ಮಂದಿಯಲ್ಲಿ ತೀವ್ರಮಟ್ಟದ ಮಾನಸಿಕ ಅಸ್ವಸ್ಥತೆ ಇದೆ ಎನ್ನುವ ಅಂಶ ಸಮೀಕ್ಷೆಯಲ್ಲಿದೆ.

18 ವರ್ಷ ಮೀರಿದ ಪುರುಷರಲ್ಲಿ ಶೇ.4.6ರಷ್ಟು ಮಂದಿಯು ಮದ್ಯ– ಸಂಬಂಧಿ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಮಾದಕ ವ್ಯಸನಿಗಳ ಸಂಖ್ಯೆ ಶೇ. 0.6ರಷ್ಟಿದೆ. ಜನಸಂಖ್ಯೆಯ ಶೇ.0.9ರಷ್ಟು ಜನರು ಆತ್ಮಹತ್ಯೆ ಪ್ರವೃತ್ತಿ ಹೊಂದಿದ್ದಾರೆ. ನಾಲ್ವರಲ್ಲಿ ಒಬ್ಬರಷ್ಟೆ ನಿರ್ದಿಷ್ಟ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹಳ್ಳಿಗಳಿಗಿಂತಲೂ ನಗರ ಪ್ರದೇಶಗಳಲ್ಲೇ ಮಾನಸಿಕ ಅಸ್ವಸ್ಥರ ಸಂ-ಖ್ಯೆ ಹೆಚ್ಚಾಗಿದೆ. ಕಡಿಮೆ ಆದಾಯ ಮತ್ತು ಕಡಿಮೆ ವಿದ್ಯಾಭ್ಯಾಸ ಮಾಡಿದವರಲ್ಲೇ ಹೆಚ್ಚಿನ ಅಸ್ವಸ್ಥತೆ ಇರುವುದು ಸಮೀಕ್ಷೆಯಿಂದ ತಿಳಿದುಬಂದಿದೆ.

ಮಾನಸಿಕ ಕಾಯಿಲೆಯನ್ನೇ ಒಪ್ಪದ, ದೈಹಿಕ ಕಾಯಿಲೆಯಂತೆಯೇ ಗುಣಪಡಿಸಬಹುದಾದ ಕಾಯಿಲೆ ಎಂಬ ಅರಿವು ಇಲ್ಲದಿರುವ ನಮ್ಮ ದೇಶದಲ್ಲಿ ಇದು ಬಹಳ ಗಂಭೀರ ಸ್ಥಿತಿ. ಈ ಬಗ್ಗೆ ವ್ಯಾಪಕ ಅರಿವು ಮೂಡಿಸುವುದು, ಮಾನಸಿಕ ಕಾಯಿಲೆ ಗುರುತಿಸಿ ಚಿಕಿತ್ಸೆ ಕೊಡಲು ವ್ಯಾಪಕ ವ್ಯವಸ್ಥೆ ಮಾಡುವುದು ಆರೋಗ್ಯ ನೀತಿಯ ಭಾಗವಾಗಬೇಕಾಗಿದೆ.

ಕಪ್ಪು ಹಣ, ಕಾರ್ಪೊರೇಟ್ ಸುಸ್ತಿಸಾಲದ ಮೇಲೆ 'ಸರ್ಜಿಕಲ್ ಸ್ಟ್ರೈಕ್'! ಪ್ರಧಾನಿಗಳನ್ನು ತಡೆದಿರುವವರಾದರೂ ಯಾರು?


ಈಗ ಎಲ್ಲೆಂದರಲ್ಲಿ 'ಸರ್ಜಿಕಲ್ ಸ್ಟ್ರೈಕ್'ಗಳ ಸ್ಪರ್ಧೆ ನಡೆಯುತ್ತಿದೆ. ಪ್ರಧಾನ ಮಂತ್ರಿಗಳೂ ಅದರಲ್ಲಿ ಭಾಗವಹಿಸಿದ್ದಾರೆ. ಗುಜರಾತಿನ ವಡೋದರಾದಲ್ಲಿ ಸಾರ್ವಜನಿಕ ರ್‍ಯಾಲಿಯಲ್ಲಿ ಮಾತಾಡುತ್ತ ತಮ್ಮ ಸರಕಾರ 65000 ಕೋಟಿ ರೂ.ಗಳಷ್ಟು ಕಪ್ಪು ಹಣವನ್ನು ಹೊರತೆಗೆದಿದೆ, 36,000ಕೋಟಿ ರೂ,ಗಳಷ್ಟು ನೇರ ವರ್ಗಾವಣೆಯ ಮೂಲಕ ಉಳಿಸಿದೆ, ಒಟ್ಟು 1ಲಕ್ಷ ಕೋಟಿ ರೂ.ಗಳಷ್ಟು ದೇಶಕ್ಕೆ ಉಳಿಸಿ ಕೊಟ್ಟಿದೆ ಎಂದು ಬೆನ್ನುತಟ್ಟಿಕೊಂಡಿದ್ದಾರೆ. ಇವನ್ನೆಲ್ಲ 'ಸರ್ಜಿಕಲ್ ಸ್ಟ್ರೈಕ್' ಮಾಡದೇ ಗಳಿಸಲಾಗಿದೆ. ಇನ್ನು ನಿಯಂತ್ರಣ ರೇಖೆಯಲ್ಲಿ ನಡೆಸಿದ 'ಸರ್ಜಿಕಲ್' ಪ್ರಹಾರ'ವನ್ನು ಕಪ್ಪು ಹಣದ ಮೇಲೂ ಮಾಡಿದ್ದರೆ ಎಂತಹ ಪರಿಣಾಮ ಆಗಬಹುದು ಎಂದು ಯೋಚಿಸಿ ಎಂದು ಗುಡುಗಿದರಂತೆ.

ಆದರೆ ಕಪ್ಪು ಹಣದ ಮೇಲೆ ಸರ್ಜಿಕಲ್ ಪ್ರಹಾರ ಮಾಡದಂತೆ ಅವರನ್ನು ತಡೆದವರಾದರೂ ಯಾರು? ಅಷ್ಟೇ ಏಕೆ, ಭಾರತದ ಜನತೆ ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಜನಸಾಮಾನ್ಯರ ಉಳಿತಾಯಗಳನ್ನು ಸಾಲವಾಗಿ ಪಡೆದು ಅವನ್ನು ಹಿಂದಿರುಗಿಸದೆ ಮೆರೆದಾಡುತ್ತಿರುವ ಕಾರ್ಪೊರೇಟ್ ಕುಳಗಳ ಮೇಲೂ ಇಂತಹ 'ಸರ್ಜಿಕಲ್' ಪ್ರಹಾರ ನಡೆಸಬೇಕು ಎಂದು ನಿರೀಕ್ಷಿಸುತ್ತಿದ್ದಾರೆ. ಈ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಇತ್ತೀಚೆಗೆ ಎರಡೆರಡು ಬಾರಿ(ಜುಲೈ7 ಮತ್ತು ಅಕ್ಟೋಬರ್4) ಪತ್ರ ಬರೆದು ನೆನಪಿಸಿದ್ದಾರೆ. **ಪ್ರಧಾನ ಮಂತ್ರಿಗಳು ತನ್ನ ಸರಕಾರ ದೇಶಕ್ಕೆ ಉಳಿಸಿದೆ ಎಂದು ಹೇಳುತ್ತಿರುವುದಕ್ಕಿಂತಲೂ ದೊಡ್ಡ ಮೊತ್ತದಷ್ಟು, ಅಂದರೆ ರೂ.1,12,089 ಕೋಟಿ ರೂ.ಗಳಷ್ಟು ಭಾರೀ ಮೊತ್ತವನ್ನು ಇದೇ ಜನವಂಚಕ ಕಾರ್ಪೊರೇಟ್ ಕುಳಗಳ ಸಾಲಗಳನ್ನು ಇದೇ ಸರಕಾರ ಮನ್ನಾಮಾಡಿದ್ದರಿಂದಾಗಿ ದೇಶದ ಜನಸಾಮಾನ್ಯರು ಕಳಕೊಂಡಿದ್ದಾರೆ** ಎಂಬ ಸಂಗತಿಯತ್ತ ಅವರು ಪ್ರಧಾನಿಗಳ ಗಮನ ಸೆಳೆದಿದ್ದರು.

ಅದಿರಲಿ, ಮೊದಲು ಕಪ್ಪುಹಣದ ಬಗ್ಗೆ ನೋಡೋಣ. ಈಗಾಗಲೇ ಈ ಅಂಕಣದಲ್ಲಿ ಗಮನಿಸಿರುವಂತೆ ಸಪ್ಟಂಬರ್ 30ರಂದು ಕೊನೆಗೊಂಡ ಸ್ವಯಮಿಚ್ಛೆಯಿಂದ ಕಪ್ಪು ಹಣವನ್ನು ಸರಕಾರಕ್ಕೆ ಒಪ್ಪಿಸುವವರಿಗೆ ಕ್ಷಮಾದಾನದ ಸ್ಕೀಮಿನಲ್ಲಿ ಪ್ರಧಾನಿಗಳು ಹೊರತೆಗೆಯಲಾಗಿದೆ ಎಂದಿರುವ 65,000 ಕೋಟಿ ರೂ. ಅವರದ್ದೇ ಪಕ್ಷ ಅಂದಾಜು ಮಾಡಿರುವ ಕಪ್ಪು ಹಣದ ಕೇವಲ 4%!. ಅಷ್ಟೇ ಅಲ್ಲ, ಈ 4%ದಲ್ಲೂ ಸ್ವಯಮಿಚ್ಛೆಯಿಂದ ಘೋಷಣೆಯಾದದ್ದು ಕೇವಲ 15ಶೇ., ಅಂದರೆ ಒಟ್ಟು ಕಪ್ಪು ಹಣದ 0.6%! ಆದಾಯ ತೆರಿಗೆ ಇಲಾಖೆ ದೇಶದ 18 ಆದಾಯ ತೆರಿಗೆ ವಲಯಗಳಲ್ಲಿ ನಡೆಸಿದ 200 ಸರ್ವೆ ಮತ್ತು ಇಲಾಖೆಗೆ ಲಭ್ಯವಿರುವ ಇತರ ಮಾಹಿತಿಗಳಿಂದ ಸುಮಾರು 7ಲಕ್ಷ ತೆರಿಗೆಗಳ್ಳರಿಗೆ ಈ ಸ್ಕೀಮನ್ನು 'ಸದುಪಯೋಗ' ಪಡಿಸಿಕೊಳ್ಳುವಂತೆ ಪತ್ರಗಳು ಹೋಗಿದ್ದವಂತೆ. ಇವರಲ್ಲಿ 7ರಿಂದ 8ಶೇ. ಮಂದಿ ಮಾತ್ರವೇ ಈ ಸ್ಕೀಮನ್ನು ಬಳಸಿಕೊಂಡಿದ್ದಾರೆ ಎನ್ನಲಾಗಿದೆ. **ಸರಕಾರದ ಬಳಿ ಇಂತಹ ಮಾಹಿತಿ ಇರುವಾಗ ಕೇವಲ 0.6% ಹೊರತೆಗೆವ ಈ ಕ್ಷಮಾಯೋಜನೆಯ ಬದಲು ಪ್ರಧಾನಿಗಳು ಹೇಳಿರುವಂತೆ 'ಸರ್ಜಿಕಲ್ ಸ್ಟ್ರೈಕ್' ಮಾಡಬಹುದಿತ್ತಲ್ಲ, ಹಾಗೆ ಮಾಡಲು ಅಡ್ಡಿಯಾದರೂ ಏನು ಅಥವ ಯಾರು, ಪ್ರತಿಪಕ್ಷಗಳವರೇ? ಪ್ರಧಾನಿಗಳು ಈ ಬಗ್ಗೆ ಏನೂ ಹೇಳಿಲ್ಲ.**

ಹಿಂದಿನ ಯುಪಿಎ ಸರಕಾರ ದೇಶದ ಒಳಗೆ ಮತ್ತು ಹೊರಗೆ ಎಷ್ಟು ಕಪ್ಪು ಹಣ ಇದೆ ಎಂಬುದರ ಅಂದಾಜು ಮಾಡುವ ಅಧ್ಯಯನಗಳನ್ನು ನಡೆಸಲು ರಾಷ್ಟ್ರೀಯ ಸಾರ್ವಜನಿಕ ಹಣಕಾಸು ಮತ್ತು ಧೋರಣೆ ಸಂಸ್ಥೆ(ಎನ್‌ಐಪಿಎಫ್‌ಪಿ), ರಾಷ್ಟ್ರೀಯ ಆನ್ವಯಿಕ ಅರ್ಥಶಾಸ್ತ್ರ ಸಂಶೋಧನಾ ಮಂಡಳಿ(ಎನ್‌ಸಿಎಇಆರ್) ಮತ್ತು ರಾಷ್ಟ್ರೀಯ ಹಣಕಾಸು ನಿರ್ವಹಣಾ ಸಂಸ್ಥೆ(ಎನ್‌ಐಎಫ್‌ಎಂ)ಗೆ ವಹಿಸಿತ್ತು. ಇವುಗಳ ಅಧ್ಯಯನಗಳ ವರದಿಗಳು ಹಿಂದಿನ ಸರಕಾರಕ್ಕೆ ಡಿಸೆಂಬರ್2013ರಲ್ಲಿ, ನಂತರ ಈ ಸರಕಾರಕ್ಕೆ ಜುಲೈ2014ರಲ್ಲಿ ಮತ್ತು ಆಗಸ್ಟ್2014ರಲ್ಲಿ ಸಿಕ್ಕಿದ್ದವು.

ಇದಾಗಿ ಎರಡು ವರ್ಷಗಳು ಕಳೆದರೂ ಈ ವರದಿಗಳ ಪ್ರಕಾರ ಕಪ್ಪು ಹಣ ಎಷ್ಟಿದೆ ಎಂಬ ಮಾಹಿತಿ ಹಕ್ಕಿನ (ಅರ್‌ಟಿಐ)ಅಡಿಯಲ್ಲಿ ಕೇಳಿರುವ ಮಾಹಿತಿಯನ್ನು ಕೊಡಲು ಮೋದಿ ಸರಕಾರದ ಹಣಕಾಸು ಮಂತ್ರಾಲಯ ನಿರಾಕರಿಸಿದೆ. ಇನ್ನೂ ಈ ಸರಕಾರ ಈ ಅಧ್ಯಯನಗಳನ್ನು ಪರಿಶೀಲಿಸುತ್ತಲೇ ಇದೆಯಂತೆ! ಆದರೂ ಕಪ್ಪುಹಣದ ಮೇಲೆ ಸರ್ಜಿಕಲ್ ಪ್ರಹಾರದ ಬಡಾಯಿ!



ಇನ್ನು ದೇಶದ ದೊಡ್ಡ–ದೊಡ್ಡ ಕಾರ್ಪೊರೇಟ್ ಕುಳಗಳು ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಪಡೆದ ರೂ.5,73,682 ಕೋಟಿ ಸಾಲಗಳನ್ನು ಮರುಪಾವತಿ ಮಾಡಿಲ್ಲ ಎಂಬುದು ಸರಕಾರವೇ ರಾಜ್ಯಸಭೆಗೆ ಆಗಸ್ಟ್‌ನಲ್ಲಿ ನೀಡಿರುವ ಮಾಹಿತಿ.

ಈ ವಾರ ದೇಶದ ಸರ್ವೋಚ್ಚ ನ್ಯಾಯಾಲಯವೇ ಒಟ್ಟು 85000 ಕೋಟಿ ರೂ.ಗಳನ್ನು ಬಾಕಿಯಿಟ್ಟುಕೊಂಡಿರುವ 87 ವ್ಯಕ್ತಿಗಳ ಹೆಸರುಗಳನ್ನು ಬಹಿರಂಗ ಪಡಿಸಬಾರದೇಕೆ ಎಂದು ಪ್ರಶ್ನಿಸಿದೆ. ಇದಕ್ಕೆ ಸರ್ಜಿಕಲ್ ಪ್ರಹಾರ ಬೇಕೇ? ಬೇಕಿದ್ದರೆ ಖಂಡಿತಾ ಮಾಡಿ, ಅದನ್ನು ಮಾಡದಂತೆ ನಿಮ್ಮ ಕೈಕಟ್ಟಿರುವವರು ನಾವಂತೂ ಖಂಡಿತಾ ಅಲ್ಲ ಎನ್ನುತ್ತಿದ್ದಾರೆ ಜನಸಾಮಾನ್ಯರು.

ತೋಪಾದ ರೈಲ್ವೆಯ 'ಸರ್ಜ್ ಪ್ರೈಸಿಂಗ್' !

ಇಳಿಮುಖಗೊಳ್ಳುತ್ತಿರುವ ರೈಲು ಆದಾಯವನ್ನು ಎತ್ತಿ ನಿಲ್ಲಿಸಲು ತಂದ ಸರ್ಜ್ ಪ್ರೈಸಿಂಗ್ ಅಥವ 'ಉಕ್ಕೇರುವ ದರ' ವ್ಯವಸ್ಥೆ' ಎಂದರೆ ರೈಲು ಸೀಟಿಗಳು ತುಂಬುತ್ತ ಹೋದಂತೆ ಟಿಕೇಟ್ ದರಗಳನ್ನು ಏರಿಸುವ ವ್ಯವಸ್ಥೆ ಆದಾಯವನ್ನು ಹೆಚ್ಚಿಸುವ ಬದಲು ಇಳಿಸಿದೆ, ಅಕ್ಟೋಬರ್22ರ ಒಂದು ಸುದ್ದಿ ಹೇಳುತ್ತದೆ. ಅಕ್ಟೋಬರ್ ತಿಂಗಳ ಮೊದಲ ಅರ್ಧಭಾಗದಲ್ಲಿ ಟಿಕೆಟ್ ಆದಾಯ ಹಿಂದಿನ ವರ್ಷದ ಈ ಅವಧಿಯ ಆದಾಯಕ್ಕೆ ಹೋಲಿಸಿದರೆ 232 ಕೋಟಿ ರೂ.ಗಳಷ್ಟು ಇಳಿದಿದೆಯಂತೆ. ಈ ಇಳಿಕೆಯ ಪ್ರವೃತ್ತಿ ಮುಂದುವರೆಯಬಹುದೆಂಬ ಸಂಕೇತಗಳಿವೆ ಎಂದೂ ಈ ವರದಿ ತಿಳಿಸುತ್ತದೆ.

ಈ ವ್ಯವಸ್ಥೆಯನ್ನು ಆರಂಭಿಸಿರುವ ರಾಜಧಾನಿ, ಶತಾಬ್ದಿ ಮತ್ತು ದುರಂತೊ ರೈಲುಗಳಲ್ಲಿ ಪ್ರಯಾಣಿಸುವವರ ಪ್ರಮಾಣದಲ್ಲಿ 15ರಿಂದ 20ಶೆ.ದಷ್ಟು ಇಳಿಕೆಯಾಗಿದೆಯಂತೆ. ಮುಂಬಯಿ, ಸಿಯಲ್ಡಾ ಮತ್ತು ತಿರುವನಂತಪುರ ರಾಜಧಾನಿ ಎಕ್ಸ್‌ಪ್ರೆಸ್‌ಗಳಲ್ಲಿ ಈ ಹಿಂದೆ ಡಿಸೆಂಬರ್ ಮಧ್ಯದಲ್ಲಿ ಸೀಟುಗಳು ತುಂಬಿ ವೇಟಿಂಗ್ ಲಿಸ್ಟ್ ಇರುತ್ತಿತ್ತು. ಈ ಬಾರಿ ಇನ್ನೂ ಹಲವು ಸೀಟುಗಳು ಖಾಲಿ ಬಿದ್ದಿವೆ ಎನ್ನಲಾಗಿದೆ.

ಒಳ್ಳೆಯ ದಿನಗಳ ಒಂದು ಸಾಧನೆ ಎಂದು ಬಿಂಬಿಸಿದ ದೇಶದ ಅತಿ ವೇಗದ 'ಗತಿಮಾನ್ ಎಕ್ಸ್‌ಪ್ರೆಸ್'ನಲ್ಲಿ ಪ್ರಯಾಣಿಸಲು ಜನ ಹಿಂದೇಟು ಹಾಕುತ್ತಿದ್ದಾರಂತೆ–ಅದರ ವೇಗದಿಂದಲ್ಲ, ಟಿಕೇಟ್ ದರದಿಂದ ಭೀತರಾಗಿ!

ರೈಲುಪ್ರಯಾಣ ದುಬಾರಿಯೇ?ವಿಮಾನದಲ್ಲಿ ಹಾರಿ! ಎನ್ನುವ ಅಮೋಘ ಉಡಾನ್ ಯೋಜನೆ

'ಬ್ರೆಡ್ ಇಲ್ಲದಿದ್ದರೆ ಕೇಕ್ ತಿನ್ನಿ' ಎಂಬ ಇಂಗ್ಲಿಷ್ ವ್ಯಂಗ್ಯ (ರೊಟ್ಟಿ ಇಲ್ಲದಿದ್ದರೆ ಹೋಳಿಗೆ ತಿನ್ನಿ?)ಈಗಿನ ಒಳ್ಳೆಯ ದಿನಗಳಲ್ಲಿ ವ್ಯಂಗ್ಯವಾಗಿ ಉಳಿದಿಲ್ಲ. ಟಿಕೇಟ್ ದರ ಏರಿರುವ ಎಕ್ಸ್‌ಪ್ರೆಸ್ ರೈಲುಗಳು ಖಾಲಿ ಓಡುತ್ತಿರುವಾಗಲೇ ಈ ಸರಕಾರ 'ಉಡಾನ್'(ಉಡೇ ದೇಶ್ ಕಾ ಆಮ್ ನಾಗರಿಕ್, ಅಂದರೆ ಹಾರಲಿ ದೇಶದ ಸಾಮಾನ್ಯ ನಾಗರಿಕ) ಯೋಜನೆ ಜಾರಿಗೊಳಿಸಿ ಬೆನ್ನು ತಟ್ಟಿಕೊಂಡಿದೆ! ಹವಾಯಿ ಚಪ್ಪಲಿಧಾರಿಗಳಿಗೂ ಹವಾಯಿ ಜಹಾಜ್(ಹಿಂದಿ ಭಾಷೆಯಲ್ಲಿ, ವಿಮಾನ) ಭಾಗ್ಯವನ್ನು ಕೊಡುತ್ತಿದ್ದೇವೆ ಎಂದಿದ್ದರೆ ಸಂಬಂಧಪಟ್ಟ ಮಂತ್ರಿಗಳು

ಒಂದು ಗಂಟೆ ಪ್ರಯಾಣದ ವಿಮಾನಯಾನದಲ್ಲಿ ಅರ್ಧದಷ್ಟು ಸೀಟುಗಳ ದರ 2500ರೂ.ದಾಟಬಾರದು, ಉಳಿದ ಅರ್ಧಕ್ಕೆ 'ಮಾರುಕಟ್ಟೆ' ದರಗಳನ್ನು ವಸೂಲಿ ಮಾಡಬಹುದು. ಇದುವರೆಗೆ ವಿಮಾನ ಸಂಪರ್ಕ ಇರದ ಸ್ಥಳಗಳಿಗೆ ವಿಮಾನ ಹಾರಿಸುವ ಬಗ್ಗೆ ಪ್ರಸ್ತಾವಗಳನ್ನು ಸಲ್ಲಿಸಬೇಕು ಎಂದು ವಿಮಾನಯಾನ ಕಂಪನಿಗಳಿಗೆ ಸರಕಾರ ಹೇಳಿದೆಯಂತೆ. ಇದಕ್ಕಾಗಿ ಪ್ರಧಾನ ವಿಮಾನ ರೂಟ್‌ಗಳ ಮೇಲೆ ಲೆವಿ ಹಾಕುವ ಸರಕಾರದ ಯೋಚನೆಯಿಂದ ಈ ಕಂಪನಿಗಳು ಕುಪಿತಗೊಂಡಿವೆಯಂತೆ. ಇನ್ನು ಹವಾಯಿಧಾರಿ ಪಯಣಿಗರು ವಿಮಾನನಿಲ್ದಾಣದಿಂದ ತಮ್ಮ ಮನೆ ತಲುಪಲು ಈ 'ಉಡಾನ್'ನಲ್ಲಿ ವ್ಯವಸ್ಥೆಯಿದೆಯೇ ತಿಳಿದಿಲ್ಲ.



ಇದೀಗ 'ವಾಟ್ಸ್‌ಆಪ್' ಆಳ್ವಿಕೆ: ಗ್ರಾಮೀಣ ಉದ್ಯೋಗಗಳಲ್ಲಿ ಕಡಿತದ ಪರೋಕ್ಷ ಆದೇಶ!

ಇತ್ತೀಚೆಗೆ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಉದ್ಯೋಗ ನಿರ್ಮಾಣ ಮಾಡುವ 'ಹುಚ್ಚು ಸ್ಪರ್ಧೆ'ಮುಂದುವರೆಯಲು ಸಾಧ್ಯವಿಲ್ಲ, ಇದರ ಅಡಿಯಲ್ಲಿ ಹೆಚ್ಚಿನ ಹಣ ನೀಡಲು ಆಗದು, ಕೊಟ್ಟದ್ದನ್ನೇ 'ವಿವೇಚನೆ'ಯಿಂದ ಬಳಸಿ ಎಂದು ರಾಜ್ಯ ಸರಕಾರಗಳಿಗೆ ಸಂದೇಶ ಕಳಿಸಿತ್ತಂತೆ. ಆದರೆ ಇದು ಅಧಿಕೃತ ಸಂದೇಶ ಅಲ್ಲ , 'ವಾಟ್ಸ್‌ಆಪ್' ಗುಂಪಿನ ಮೂಲಕ ಕಳಿಸಿದ ಅನಧಿಕೃತ ಆದೇಶ!

ಈ ಯೋಜನೆಯ ಬಗ್ಗೆ ಬಿಜೆಪಿಯ ತಿರಸ್ಕಾರದ ನಿಲುವು ಹೊಸದೇನಲ್ಲ. ಸ್ವತಃ ಪ್ರಧಾನ ಮಂತ್ರಿಗಳು ಅಧಿಕಾರಕ್ಕೆ ಬಂದ ಕೂಡಲೇ ಇದು ಯುಪಿಎ ಸರಕಾರದ 'ವೈಫಲ್ಯದ ಸ್ಮಾರಕ' ಎಂದು ಗೇಲಿ ಮಾಡಿದ್ದನ್ನು ನೆನಪಿಸಿಕೊಳ್ಳಬಹುದು. ಆದರೆ ಸತತ ಎರಡು ವರ್ಷ ಬರ ಪರಿಸ್ಥಿತಿ ದೇಶದ ಗ್ರಾಮೀಣ ಪ್ರದೇಶದಲ್ಲಿ ತಲ್ಲಣ ಉಂಟುಮಾಡಿದಾಗ ಈ ಯೋಜನೆಯ ಪ್ರಯೋಜನ ಅದರ ಗಮನಕ್ಕೂ ಬಂತು. ಅಲ್ಲದೆ ದೇಶದ ಸರ್ವೋಚ್ಚ ನ್ಯಾಯಾಲಯದ ತರಾಟೆಯನ್ನೂ ಅದು ಈ ವಿಷಯದಲ್ಲಿ ಎದುರಿಸಬೇಕಾಯಿತು. ಈ ಯೋಜನೆಯನ್ನು ಪೂರ್ಣವಾಗಿ ಪಾಲಿಸಲು ತಾನು ಬದ್ಧ ಎಂದು ಅದು ಹೇಳಲಾರಂಬಿಸಿತು.


ಆದರೂ ಈ ಬಗ್ಗೆ ಅದರ ತಿರಸ್ಕಾರ ಕಡಿಮೆಯಾದಂತಿಲ್ಲ. ಆದರೆ ಇದೊಂದು ಗ್ರಾಮೀಣ ಬಡವರಿಗೆ ಕಾನೂನು ನೀಡಿರುವ ಹಕ್ಕಾದ್ದರಿಂದ ಅದನ್ನು ಉಪೇಕ್ಷಿಸುವಂತೆಯೂ ಇಲ್ಲ. ಅದ್ದರಿಂದಲೇ ಅದನ್ನು ಬುಡಮೇಲು ಮಾಡಲು ಈ 'ವಾಟ್ಸ್ ಅಪ್' ಕಳ್ಳದಾರಿ ಅದಕ್ಕೆ ಕಂಡಿರಬೇಕು.

ಇದು ಅವರ ಉದ್ದೇಶವನ್ನು ಈಡೇರಿಸು ತ್ತಿರುವಂತೆಯೂ ಕಾಣುತ್ತಿದೆ. ಆಗಸ್ಟ್ ಮತ್ತು ಸಪ್ಟಂಬರಿನಲ್ಲಿ ರಾಜ್ಯಗಳು ಈ ಕಾನೂನಿನ ಅಡಿಯಲ್ಲಿ ನೀಡಿದ ಉದ್ಯೋಗಗಳ ಪ್ರಮಾಣದಲ್ಲಿ ಭಾರೀ ಇಳಿಕೆಯಾಗಿದೆ ಎಂದು 'ಬಿಸಿನೆಸ್ ಸ್ಟಾಂಡರ್ಡ್' (ಅಕ್ಟೋಬರ್25) ವರದಿ ಮಾಡಿದೆ.

ಆದರೆ ಇದು ಆಡಳಿತದಲ್ಲಿ ಪಾರದರ್ಶಕತೆಯನ್ನು ಕೈಬಿಡುವ ಪ್ರಯತ್ನ ಎಂದು ಪರಿಣಿತರು ಟೀಕಿಸುತ್ತಿದ್ದಾರೆ. 'ವಾಟ್ಸ್‌ಅಪ್'ನಂತಹ ಡಿಜಿಟಲ್ ಸಾಧನಗಳನ್ನು ಬಳಸಿ ಜನಸಾಮಾನ್ಯರಿಗೆ ಮೋಸ ಮಾಡುವ ಹೊಸ ದಾರಿಯನ್ನು ಆಳುವವರು ಹುಡುಕಿಕೊಳ್ಳುತ್ತಿದ್ದಾರೆಯೇ ಎಂಬ ಅನುಮಾನವನ್ನು ಇದು ಹುಟ್ಟಿಸಿದೆ.

ಈ ರೀತಿ ಅನೌಪಚಾರಿಕ ದಾರಿಯಿಂದ ರಾಜ್ಯಗಳ ಮೇಲೆ ಒತ್ತಡ ತರುವ ಮೂಲಕ ಬಿಜೆಪಿ ಸರಕಾರ ಒಕ್ಕೂಟ ತತ್ವ ಮತ್ತು ಜವಾಬುದಾರಿಕೆ ಎಂಬ ಎರಡು ಸಂವಿಧಾನಿಕ ನೀತಿಗಳ ಘೋರ ಉಲ್ಲಂಘನೆ ಮಾಡಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಖಂಡಿಸಿದ್ದಾರೆ.

ನರೇಗ ದಂತಹ ಬೇಡಿಕೆ–ಚಾಲಿತ ಕಾರ್ಯಕ್ರಮಕ್ಕೆ ಏಕಪಕ್ಷೀಯವಾಗಿ ಹಣನೀಡಿಕೆಯನ್ನು ನಿಲ್ಲಿಸುವ ಕಾನೂನುಬಾಹಿರ ಕ್ರಮದ ಅಧಿಕೃತ ಮತ್ತು ನ್ಯಾಯಾಂಗ ಪರೀಕ್ಷಣೆಯನ್ನು ತಪ್ಪಿಸಲು ವಾಟ್ಸ್‌ಅಪ್ ಸಾಧನವನ್ನು ಬಳಸಲಾಗಿದೆ, ಕಡುಬಡವರಿಗೆ ಉದ್ಯೋಗ ಲಭ್ಯಗೊಳಿಸುವ ಹಕ್ಕನ್ನು, ಅದು ಕೂಡ ಒಂದು ಅನಾವೃಷ್ಟಿಯ ವರ್ಷದಲ್ಲಿ ಬುಡಮೇಲು ಮಾಡಲಾಗುತ್ತಿದೆ ಎಂದಿರುವ ಅವರು ಇಂತಹ ಒಂದು ಸಂವಿಧಾನಿಕ ಹಕ್ಕನ್ನು ಬುಡಮೇಲು ಮಾಡುವ ಮತ್ತು ಸಂಪರ್ಕ ಕುರಿತ ಕಾನೂನುಗಳ ಗಂಭೀರ ಉಲ್ಲಂಘನೆಯ ಕೃತ್ಯ ಎಸಗಿದವರನ್ನು ಶಿಕ್ಷಿಸುವಂತೆ ಪ್ರಧಾನ ಮಂತ್ರಿಗಳು ಕ್ರಮ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.



ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ

ದೇಶಪ್ರೇಮಕ್ಕೂ ಬೆಲೆಪಟ್ಟಿ ಅಂಟಿಸಿದ 'ಒಳ್ಳೆಯ ದಿನಗಳು'!

* ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಈ ಬೆಲೆಪಟ್ಟಿ ಅಂಟಿಸುವಲ್ಲಿ ತನ್ನ ಪಾತ್ರ ಏನೂ ಇಲ್ಲ ಎಂದಿದ್ದಾರೆ, ವಾಸ್ತವವಾಗಿ ತಾನು ಅದನ್ನು ವಿರೋಧಿಸಿದ್ದೆ ಎಂದಿದ್ದಾರೆ. ಆದರೆ ಅದೇಕೋ ಯಾರೂ ನಂಬುತ್ತಿಲ್ಲ! ಇಬ್ಬರು ಕೇಂದ್ರ ಮಂತ್ರಿಗಳಿಗೂ ಈ ಬಗ್ಗೆ ಒಪ್ಪಿಗೆಯಿಲ್ಲವಂತೆ. ಅದರಲ್ಲಿ 'ಜನಗಳ ದೇಶಭಕ್ತಿಯ ಭಾವನೆಗಳಿಗೆ ಬೆಲೆ ಕೊಡಬೇಕು' ಎಂದ ಮಂತ್ರಿಗಳೂ ಸೇರಿದ್ದಾರೆ. ಬೆಲೆ ಕೊಡುವುದು ಮತ್ತು ಬೆಲೆಪಟ್ಟಿ ಹಚ್ಚುವುದರ ನಡುವೆ ತಮ್ಮ ಪಕ್ಷದ ಮುಖ್ಯಮಂತ್ರಿಗಳಿಗೆ ಗೊಂದಲವಾಗಿದೆ ಎಂದು ಅವರು ಭಾವಿಸಿದ್ದಾರೆಯೇ ಅಥವ ಎಲ್ಲೆಡೆಗಳಿಂದ ಟೀಕೆ ನೋಡಿ ಹೀಗಂದಿರಬಹುದೇ?

* ಇಂತಹ 'ದೇಶಭಕ್ತಿ'ಕಂಡು ಸೇನಾಪಡೆಗಳವರಿಗಂತೂ ಭಾರೀ ಮುಜುಗರ ಮತ್ತು ಬೇಸರವಾಗಿದೆ. "ನಾಲ್ಕು ದಶಕಗಳ ಕಾಲ ಸಮವಸ್ತ್ರಧರಿಸಿದ್ದೆ, ಎಂದೂ ಕಿತ್ತುಕೊಂಡ ಹಣದಿಂದ ಬದುಕಿಲ್ಲ, ಈ ರೀತಿ ಕಿತ್ತುಕೊಳ್ಳುವಲ್ಲಿ ಸಶಸ್ತ್ರ ಪಡೆಗಳನ್ನೇಕೆ ಭಾಗಿಯಾಗಿಸಬೇಕು, ಕಲುಷಿತ ಹಣಕ್ಕೆ ಕೈನೀಡುವವರನ್ನಾಗಿಸಬೇಕು? ಭಾರತೀಯ ಸಶಸ್ತ್ರ ಪಡೆಗಳು ರಾಜಕೀಯ ಆಕಾಂಕ್ಷೆಗಳಿಗೆ ಊರುಗೋಲುಗಳಾಗಲು ಸಾಧ್ಯವಿಲ್ಲ, ಆಗಬಾರದು. ದುರದೃಷ್ಟವಶಾತ್ ಈಗ ಅದೇ ಪ್ರವೃತ್ತಿ ಕಾಣಿಸುತ್ತಿದೆ ಎಂದು ನಿವೃತ್ತ ಏರ್‌ವೈಸ್ ಮಾರ್ಷಲ್ ಮನಮೋಹನ್ ಬಹಾದ್ದೂರ್ ಬೇಸರದಿಂದ ಹೇಳಿದ್ದಾರೆ.ರಾಜಕೀಯ ಆಕಾಂಕ್ಷೆಗಳಿಗೆ ದೇಶಭಕ್ತಿ, ಧರ್ಮ ಇತ್ಯಾದಿ ಬಳಸಿದಾಗ ಇವೆಲ್ಲ ಸಹಜ ತಾನೇ !

*** ಹಿರಿಯ ಪತ್ರಕರ್ತರೊಬ್ಬರು ಇದು ಭಾರತದಲ್ಲಿ ಸ್ವಾತಂತ್ರ್ಯದ ಮೇಲೆ ಬಿಜೆಪಿಯ 'ಸರ್ಜಿಕಲ್ ಪ್ರಹಾರ' ಎಂದಿದ್ದಾರೆ!**

ಜಿಎಸ್‌ಟಿ ದರಗಳು ರಾಜ್ಯಗಳಿಗೆ ಹೆಚ್ಚು ನ್ಯಾಯ ಸಮ್ಮತವಾಗಿರಲಿ



ಕೆ.ಎಂ.ನಾಗರಾಜ್



ಜಿಎಸ್‌ಟಿ ತೆರಿಗೆ ಪದ್ಧತಿಯಲ್ಲಿ ರಾಜ್ಯಗಳಿಗೆ ಹೆಚ್ಚಿನ ಪಾಲು ಕೊಡಬೇಕು. ರಾಜ್ಯ ಜಿಎಸ್‌ಟಿ ದರದಲ್ಲಿ ಏರಿಕೆ ಮತ್ತು ಕೇಂದ್ರ ಜಿಎಸ್‌ಟಿ ದರದಲ್ಲಿ ಇಳಿಕೆ ಮಾಡುವ ಮೂಲಕ, ಕೇಂದ್ರ–ರಾಜ್ಯಗಳ ಹಣ ಕಾಸು ಸಂಬಂಧಗಳಲ್ಲಿ ಚಾರಿತ್ರಿಕವಾಗಿ ಬೆಳೆದು ಬಂದಿರುವ ಅಸಮತೋಲನೆಯನ್ನು ಸರಿಪಡಿಸಬಹುದು ಎನ್ನುತ್ತಾರೆ ಕೇರಳದ ಎಲ್‌ಡಿಎಫ್ ಸರಕಾರದ ಹಣಕಾಸು ಮಂತ್ರಿ ಪ್ರೊ. ಥಾಮಸ್ ಐಸ್ಯಾಕ್. 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಪ್ರಕಟಿಸಿರುವ ಅವರ ಲೇಖನದ ಭಾವಾನುವಾದ.

ರಾಜ್ಯಸರ್ಕಾರಗಳು ಹೊಂದಿದ್ದ ತೆರಿಗೆ ವಿಧಿಸುವ ವಿತ್ತೀಯ ಅಧಿಕಾರವನ್ನು 1990ರ ದಶಕದಲ್ಲಿ ಜಾರಿಗೆ ತಂದ ವ್ಯಾಟ್ (ಮೌಲ್ಯವರ್ಧಿತ ತೆರಿಗೆ ಪದ್ಧತಿ) ಕಬಳಿಸಿತು. ಪಾರ್ಲಿಮೆಂಟಿನಲ್ಲಿ ಜಿಎಸ್‌ಟಿ(ಸರಕು ಮತ್ತು ಸೇವಾ ತೆರಿಗೆ) ವಿಧೇಯಕವು ಅಂಗೀಕಾರ ಪಡೆದ ನಂತರ ರಾಜ್ಯ ಸರ್ಕಾರಗಳ ಬಳಿ ಹೆಸರಿಗೆ ಮಾತ್ರ ಇದ್ದ ತೆರಿಗೆ ವಿಧಿಸುವ ಅಲ್ಪ ಸ್ವಲ್ಪ ಅಧಿಕಾರವನ್ನೂ ಕಾನೂನಿನ ಮೂಲಕ ರದ್ದು ಮಾಡಲಾಗಿದೆ. ಪೆಟ್ರೋಲ್ ಮತ್ತು ಆಲ್ಕೋಹಾಲ್‌ಗಳನ್ನು ಹೊರತು ಪಡಿಸಿದರೆ, ಈಗ, ಸರಕುಗಳ ಮೇಲೆ ತೆರಿಗೆ(ಪರೋಕ್ಷತೆರಿಗೆ) ವಿಧಿಸುವ ಸ್ವತಂತ್ರ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇಲ್ಲವಾಗಿದೆ. ಈ ಸಂಬಂಧವಾಗಿ, ಜಿಎಸ್‌ಟಿ ಕೌನ್ಸಿಲ್‌ನ ತೀರ್ಮಾನಗಳಿಗೆ ರಾಜ್ಯ ಸರ್ಕಾರಗಳು ಬದ್ಧವಾಗಿರುವುದು ಅನಿವಾರ್ಯವಾಗಿದೆ. ಎಲ್ಲ ರಾಜ್ಯಗಳೂ ಒಗ್ಗಟ್ಟಾಗಿ ಒಂದು ನಿಲುವು ತಳೆದರೂ ಸಹ ಜಿಎಸ್‌ಟಿ ಕೌನ್ಸಿಲ್‌ನಲ್ಲಿ ತೆಗೆದುಕೊಳ್ಳುವ ತೀರ್ಮಾನಗಳು ಕೇಂದ್ರ ಸರ್ಕಾರದ ಸಮ್ಮತಿಗೆ ಒಳಪಟ್ಟಿರುತ್ತವೆ. ಅಂದರೆ, ಕೇಂದ್ರ ಸರ್ಕಾರದ ಒಪ್ಪಿಗೆ ಇಲ್ಲದೆ ಜಿಎಸ್‌ಟಿ ಕೌನ್ಸಿಲ್ ಸ್ವತಂತ್ರವಾಗಿ ತೀರ್ಮಾನ ತೆಗೆದುಕೊಳ್ಳುವಂತಿಲ್ಲ. ರಾಜ್ಯ ಸರ್ಕಾರಗಳಿಗೆ ಈಗ ಸ್ವಲ್ಪವಾದರೂ ಸಮಾಧಾನ ಕೊಡುವ ಅಂಶವೆಂದರೆ, ಈವರೆಗೂ ಕೇಂದ್ರದ ಏಕಸ್ವಾಮ್ಯ ಅಧಿಕಾರಕ್ಕೆ ಒಳಪಟ್ಟಿದ್ದ ಸೇವಾ ತೆರಿಗೆಗಳಲ್ಲಿ ರಾಜ್ಯಗಳಿಗೂ ಪಾಲು ಸಿಗುವಂತಾಗಿರುವುದು.

ಜಿಎಸ್‌ಟಿಗೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಮಾಡಿರುವ ಬದಲಾವಣೆಯು ಜಿಎಸ್‌ಟಿಯನ್ನು ಜಾರಿಗೊಳಿಸಲು ಅನುವಾಗುವಂತೆ 'ಒಂದು ವಿಶಾಲ ಚೌಕಟ್ಟನ್ನು ಒದಗಿಸಿದೆ. ಈ ಚೌಕಟ್ಟಿನ ಎಲ್ಲೆಯೊಳಗೆ, ಜನತೆಯ ಮತ್ತು ರಾಜ್ಯ ಸರ್ಕಾರಗಳ ಹಿತಾಸಕ್ತಿಗಳಿಗೆ ಸ್ಪಂದಿಸುವಂತಹ ಒಂದು ಜಿಎಸ್‌ಟಿ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರುವ ಪ್ರಶ್ನೆ ಇನ್ನೂ ಇತ್ಯರ್ಥವಾಗಬೇಕಿದೆ. ಅನೇಕ ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಕೇರಳದ ಎಡರಂಗ ಸರ್ಕಾರವು ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದೆ. ಇಲ್ಲಿಯ ತನಕ ಈ ಪ್ರಯತ್ನಕ್ಕೆ ಸಿಕ್ಕಿರುವ ಬೆಂಬಲವು ಪ್ರೋತ್ಸಾಹದಾಯಕವಾಗಿದೆ. ಜಿಎಸ್‌ಟಿ ದರಗಳು, ಜಿಎಸ್‌ಟಿಯಿಂದ ವಿನಾಯ್ತಿಗಳು ಮತ್ತು ಜಿಎಸ್‌ಟಿಯನ್ನು ಕಾರ್ಯರೂಪಕ್ಕೆ ತರುವ ವಿಧಾನಗಳು ಹಾಗೂ ಜಿಎಸ್‌ಟಿಯ ಕರಡು ನಿಯಮಗಳು ಮುಂತಾದ ಮುಖ್ಯ ವಿಷಯಗಳನ್ನು ಬರುವ ದಿನಗಳಲ್ಲಿ ತೀರ್ಮಾನಿಸಬೇಕಾಗಿದೆ.

ತೆರಿಗೆ ದರಗಳ ಬಗ್ಗೆ ಚರ್ಚೆ

ಈ ಸಂಬಂಧವಾಗಿ ಇಲ್ಲಿಯ ವರೆಗೆ ಆಗಿರುವ ಚರ್ಚೆಗಳ ಪ್ರಕಾರ, ಸದ್ಯದಲ್ಲಿ ಸಂಗ್ರಹವಾಗುತ್ತಿರುವ ಒಟ್ಟು ತೆರಿಗೆಗಳಲ್ಲಿ(ಅಂದರೆ, ರಾಜ್ಯದ ವ್ಯಾಟ್ ಮತ್ತು ಕೇಂದ್ರದ ಸೇವಾ ತೆರಿಗೆಗಳಿಂದ ಬರುವ ಒಟ್ಟು ಪ್ರಮಾಣದಷ್ಟೇ ತೆರಿಗೆ ಹಣ)ಯಾವ ವ್ಯತ್ಯಾಸವೂ ಆಗದಂತೆ ನೋಡಿಕೊಳ್ಳಲು ಜಿಎಸ್‌ಟಿ ದರವನ್ನು ಶೇ.12ರಿಂದ 24ರ ನಡುವೆ ನಿಗದಿಪಡಿಸಬಹುದೆಂದು ಅಂದಾಜು ಮಾಡಲಾಗಿದೆ. ಕಾರ್ಪೊರೇಟ್, ವ್ಯಾಪಾರ ಮತ್ತು ಅಧಿಕಾರಿಗಳ ವಲಯಗಳು ಕಡಿಮೆ ಮಟ್ಟದ ಎರಡು ಅಥವಾ ಮೂರು ದರಗಳನ್ನು ನಿಗದಿಪಡಿಸುವತ್ತ ವಾಲುತ್ತಿವೆ. ಜಿಎಸ್‌ಟಿ ಆದರ್ಶವಾದಿಗಳು, ರಿಯಾಯ್ತಿಗಳಿಗೆ ಅವಕಾಶವಿಲ್ಲದ ಮತ್ತು ದೇಶವ್ಯಾಪಿಯಾಗಿ ಅನ್ವಯವಾಗುವ ಕಡಿಮೆ ಮಟ್ಟದ ಒಂದೇ ಒಂದು ತೆರಿಗೆ ದರವನ್ನು ನಿಗದಿಪಡಿಸಬೇಕೆಂದು ಬಯಸುತ್ತಾರೆ. ಕೇಂದ್ರ ಸರ್ಕಾರದ ಆರ್ಥಿಕ ಸಲಹೆಗಾರ ಅರವಿಂದ್ ಸುಬ್ರಮಣಿಯಂ ವರದಿಯು, ಶೇ.12 ಮತ್ತು 18ರ ಎರಡು ದರಗಳನ್ನು(ತಂಬಾಕು ಹಾಗೂ ಇತರ ಅನಪೇಕ್ಷಣೀಯ ಉತ್ಪನ್ನಗಳಿಗೆ ಶೇ.18 ದರವನ್ನೂ ಮತ್ತು ಇತರ ವಸ್ತುಗಳಿಗೆ ಶೇ.12 ದರವನ್ನೂ) ನಿಗದಿಪಡಿಸಬಹುದೆಂದು ಶಿಫಾರಸು ಮಾಡಿದೆ. ಜಿಎಸ್‌ಟಿಯ ಗರಿಷ್ಠ ದರವನ್ನು ಶೇ.18ಕ್ಕೆ ಸೀಮಿತಗೊಳಿಸಬೇಕೆಂದೂ ಮತ್ತು ಆ ಅಂಶವನ್ನು ಸಂವಿಧಾನದಲ್ಲಿ ಸೇರಿಸಬೇಕೆಂದೂ ಕಾಂಗ್ರೆಸ್ ಪಕ್ಷವು ಒತ್ತಾಯಮಾಡಿತ್ತು ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಜಿಎಸ್‌ಟಿ ದರಶೇ.18ಕ್ಕಿಂತ ಹೆಚ್ಚಿನ ಮಟ್ಟದಲ್ಲಿದ್ದರೆ ಬೆಲೆ ಏರಿಕೆಯಾಗಿ ಜನತೆಗೆ ದೊಡ್ಡ ಹೊರೆಯಾಗುತ್ತದೆ ಎಂಬುದಾಗಿ ಕಾಂಗ್ರೆಸ್ ಸಮರ್ಥನೆ ಕೊಟ್ಟಿತ್ತು. ಒಂದು ಕ್ಷಣ ಈ ಬಗ್ಗೆ ಪುನರಾಲೋಚನೆ ಮಾಡಿದರೆ, ಕಾಂಗ್ರೆಸ್‌ನ ಈ ಸಲಹೆಯು ತೆರಿಗೆ ಪದ್ಧತಿಯನ್ನು ಹಿಂದ–ಕ್ಕೆ ಒಯ್ಯುವ ಒಂದು ಕ್ರಮವಾಗುತ್ತದೆ ಎಂಬ ಅಂಶ ಸ್ಪಷ್ಟವಾಗುತ್ತದೆ.

ಸದ್ಯದಲ್ಲಿ, ಸುಖ ಭೋಗದ ವಸ್ತುಗಳು ಮತ್ತು ವಿಲಾಸಿ ವಾಹನಗಳಿಗೆ ಶೇ.34 ಕೇಂದ್ರ ಸುಂಕ ಮತ್ತು ಶೇ.14.5 ವ್ಯಾಟ್‌ನ ಜೊತೆಯಲ್ಲಿ ಒಂದಿಷ್ಟು ಸೇವಾ ತೆರಿಗೆಗಳನ್ನು ಹಾಕಲಾಗುತ್ತದೆ. ಕಾಂಗ್ರೆಸ್‌ನ ಸಲಹೆಯಂತೆ ಒಂದು ವೇಳೆ ಜಿಎಸ್‌ಟಿಯ ಗರಿಷ್ಠ ದರವನ್ನು ಶೇ.18ಕ್ಕೆ ಸೀಮಿತಗೊಳಿಸಿದ್ದಲ್ಲಿ, ಸುಖ ಭೋಗದ ವಸ್ತುಗಳು ಮತ್ತು ವಿಲಾಸಿ ವಾಹನಗಳಿಗೆ ವಿಧಿಸುವ ತೆರಿಗೆ ಪ್ರಮಾಣವು ಶೇ.48.5 ರಿಂದ ಗರಿಷ್ಠ ಶೇ.18ಕ್ಕೆ ಇಳಿಯುತ್ತದೆ. ಆಗ, ಈ ವಸ್ತುಗಳನ್ನು ತಯಾರಿಸುವವರಿಗೆ, ವಿತರಕರಿಗೆ ಮತ್ತು ಅವುಗಳನ್ನು ಬಳಸುವ ಅತಿ ಶ್ರೀಮಂತರಿಗೆ ಲಾಭದ ಸುರಿಮಳೆಯಾಗುತ್ತದೆ. ಇನ್ನೊಂದು ಕಡೆ, ಬಟ್ಟೆಗಳಿಗೆ ಶೇ.12.5 ಕೇಂದ್ರ ಸುಂಕದ ಜೊತೆಯಲ್ಲಿ ಅತಿಕಡಿಮೆ ದರದ ತೆರಿಗೆ (ಕೇರಳದಲ್ಲಿ ಶೇ.2) ಅಥವಾ ತೆರಿಗೆ ವಿನಾಯ್ತಿ ಇದೆ. ಅರವಿಂದ್ ಸುಬ್ರಮಣಿಯಂ ವರದಿಯ ಅನುಸಾರ ಬಟ್ಟೆಗಳ ಮೇಲೆ ಹೇರುವ ತೆರಿಗೆ ಶೇ.18 ಆಗುತ್ತದೆ. ವಿಲಾಸಿ ವಸ್ತುಗಳ ತೆರಿಗೆಯನ್ನು ಶೇ.75ರಷ್ಟು ಇಳಿಸುವುದು ಮತ್ತು ಬಟ್ಟೆಯಂತಹ ಅಗತ್ಯ ವಸ್ತುಗಳ ತೆರಿಗೆಯನ್ನು ಶೇ.25ರಷ್ಟು ಹೆಚ್ಚಿಸುವುದು ಊಹೆಗೂ ನಿಲುಕದ ಅವಿವೇಕದ ಕ್ರಮಗಳಾಗುತ್ತವೆ. ಸದ್ಯದಲ್ಲಿ, ಆಹಾರ ಪದಾರ್ಥಗಳಿಗೆ ಮತ್ತು ಅನೇಕ ಅಗತ್ಯ ವಸ್ತುಗಳಿಗೆ ತೆರಿಗೆ ವಿನಾಯ್ತಿ ಇದೆ ಅಥವಾ ಬಹಳ ಕಡಿಮೆ ಪ್ರಮಾಣದ ತೆರಿಗೆ ಇದೆ. ಅಧಿಕೃತವಾಗಿ ಮುಂದಿಡುತ್ತಿರುವ ತೆರಿಗೆ ಪ್ರಸ್ತಾಪಗಳು ಜಾರಿಗೆ ಬಂದಲ್ಲಿ ಅದೊಂದು ಊಹಿಸಿಕೊಳ್ಳಲಾಗದಷ್ಟು ಭಾರಿ ಹಿನ್ನಡೆಯ ತೆರಿಗೆ ಪದ್ಧತಿಯಾಗುತ್ತದೆ.

ಜಿಎಸ್‌ಟಿಗೆ ಸಂಬಂಧಿಸಿದಂತೆ ಸಂವಿಧಾನ ತಿದ್ದುಪಡಿಗೆ ನಾವು ಬೆಂಬಲ ಕೊಟ್ಟಿರುವುದರ ಅರ್ಥ ನವ ಉದಾರವಾದಿ ಸುಧಾರಣೆಗಳಿಗೆ ನಾವು ಶರಣಾಗಿದ್ದೇವೆ ಎಂದಲ್ಲ ಎಂಬ ಅಂಶವನ್ನು ಒತ್ತಿ ಹೇಳಬೇಕಾಗಿದೆ. ಜಿಎಸ್‌ಟಿ ಆಳ್ವಿಕೆಯಲ್ಲಿ ರಾಜ್ಯಗಳ ಮತ್ತು ಜನತೆಯ ಹಿತಾಸಕ್ತಿ ಕಾಪಾಡುವ ಅಂಶವು ನಮ್ಮ ನಿತ್ಯ ಹೋರಾಟದ ಒಂದು ಭಾಗವಾಗಿದೆ ಮತ್ತು ಈ ಹೋರಾಟವನ್ನು ಜಿಎಸ್‌ಟಿ ಕೌನ್ಸಿಲ್‌ನ ಆಚೆಗೂ ಕೊಂಡೊಯ್ಯಬೇಕಾಗಿದೆ.

ಆದ್ದರಿಂದ, ಕೇರಳವು ನಾಲ್ಕು ಅಂತಸ್ತುಗಳ ಜಿಎಸ್‌ಟಿ ದರಗಳನ್ನು ಪರ್ಯಾಲೋಚನೆಗಾಗಿ ಮಂಡಿಸಿದೆ. ವಿಲಾಸಿ ವಸ್ತುಗಳು, ಮೇಲ್‌ಸ್ತರದ ಗೃಹ ಬಳಕೆಯ ವಸ್ತುಗಳು, ತಂಬಾಕು ಮತ್ತು ಕೊಬ್ಬಿನ ವಸ್ತುಗಳು ಇವುಗಳ ಮೇಲೆ ಶೇ.35–40 ದರ; ಇದಕ್ಕೆ ಪ್ರತಿಯಾಗಿ, ಅಡಿಗೆ ಎಣ್ಣೆ, ಸಕ್ಕರೆ ಮುಂತಾದ ಅಗತ್ಯ ವಸ್ತುಗಳಿಗೆ ಶೇ.4–6 ದರ; ಕಚ್ಚಾ ವಸ್ತುಗಳೂ ಸೇರಿದಂತೆ ಅನೇಕ ವಸ್ತುಗಳಿಗೆ ಶೇ.18–20 ದರ ಮತ್ತು ಬಟ್ಟೆ/ ಉಡುಪುಗಳಿಗೆ ಶೇ.12–14 ದರ ನಿಗದಿಪಡಿಸಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಪರೋಕ್ಷ ತೆರಿಗೆಗಳು ಯಾವೊತ್ತೂ ಪ್ರಗತಿಪರವಾಗಿರುವುದಿಲ್ಲ; ಆದರೂ, ಜಿಎಸ್‌ಟಿ ಪದ್ಧತಿಯು ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಹಿನ್ನಡೆಯುಳ್ಳದ್ದಾಗಿರಬೇಕು. ದುರದೃಷ್ಟವಶಾತ್, ಜಿಎಸ್‌ಟಿಯ ಗರಿಷ್ಠ ದರವನ್ನು ಶೇ.18ಕ್ಕೆ ಸೀಮಿತಗೊಳಿಸುವಂತೆ ಕಾಂಗ್ರೆಸ್ ಪಕ್ಷವು ಮಾಡಿದ ವಿವೇಕಶೂನ್ಯ ಸಲಹೆಯನ್ನು ಹೊರತುಪಡಿಸಿದರೆ, ಜಿಎಸ್‌ಟಿ ದರಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ಗಂಭೀರ ಚರ್ಚೆಗಳೇ ನಡೆದಿಲ್ಲ.

ಪ್ರಜ್ಞಾಪೂರ್ವಕ ಆಯ್ಕೆ

ಇಡೀ ದೇಶಕ್ಕೆ ಅನ್ವಯವಾಗುವ ಏಕ ರೂಪದ ಮತ್ತು ಏಕ ದರದ ತೆರಿಗೆಯ ಪರಿಕಲ್ಪನೆಯೇ ಜಿಎಸ್‌ಟಿ. ಅದರ ಬದಲಾಗಿ, ಜಿಎಸ್‌ಟಿ ದರಗಳಲ್ಲಿ ನಾಲ್ಕು ಅಂತಸ್ತುಗಳ ಒಂದು ಪಟ್ಟಿಯನ್ನು ಇಲ್ಲಿ ನಾವು ಪ್ರಸ್ತಾಪಿಸಿದ್ದೇವೆ. ಇದೊಂದು ಪ್ರಜ್ಞಾಪೂರ್ವಕವಾದ ಆಯ್ಕೆ. ಜಿಎಸ್‌ಟಿ ದರ ಎಂದು ಹೇಳುವಾಗ ಅದು ಒಂದೇ ಒಂದು ದರವಲ್ಲ. ಅದರಲ್ಲಿ ಮೂರು ದರಗಳಿವೆ: ರಾಜ್ಯ ಜಿಎಸ್‌ಟಿ, ಕೇಂದ್ರ ಜಿಎಸ್‌ಟಿ ಮತ್ತು ಅಂತಾರಾಜ್ಯ ಜಿಎಸ್‌ಟಿ. ಕೇಂದ್ರ ಜಿಎಸ್‌ಟಿ ಮತ್ತು ಅಂತಾರಾಜ್ಯ ಜಿಎಸ್‌ಟಿ ದರಗಳು ದೇಶವ್ಯಾಪಿಯಾಗಿರುತ್ತವೆ ಮತ್ತು ಒಂದೇ ದರ ಹೊಂದಿರುತ್ತವೆ. ಆದರೆ, ರಾಜ್ಯ ಜಿಎಸ್‌ಟಿ ದರಗಳು ಎಲ್ಲ ರಾಜ್ಯಗಳಲ್ಲೂ ಸಮಾನವಾಗಿರಬೇಕಿಲ್ಲ. ಜಿಎಸ್‌ಟಿ ವ್ಯವಸ್ಥೆಗೆ ಧಕ್ಕೆಯಾಗದಂತೆ, ತಮ್ಮ ಅಭಿವೃದ್ಧಿ ಅವಶ್ಯಕತೆಗಳಿಗೆ ಹಣ ಹೊಂದಿಸಿಕೊಳ್ಳಲು ಸಾಧ್ಯವಾಗುವಂತೆ ರಾಜ್ಯ ಜಿಎಸ್‌ಟಿ ದರಗಳನ್ನು ನಿಗದಿಪಡಿಸುವ ವಿವೇಚನೆಯನ್ನು ರಾಜ್ಯಗಳಿಗೆ ಬಿಡಬೇಕು. ಜಿಎಸ್‌ಟಿ ತೆರಿಗೆ ಪದ್ಧತಿಯಲ್ಲಿ ರಾಜ್ಯಗಳಿಗೆ ಹೆಚ್ಚಿನ ಪಾಲು ಕೊಡಬೇಕೆಂದು ಕೇರಳ ಪ್ರತಿಪಾದಿಸುತ್ತದೆ. ರಾಜ್ಯ ಜಿಎಸ್‌ಟಿ ದರದಲ್ಲಿ ಏರಿಕೆ ಮತ್ತು ಕೇಂದ್ರ ಜಿಎಸ್‌ಟಿ ದರದಲ್ಲಿ ಇಳಿಕೆ ಮಾಡುವ ಮೂಲಕ, ಕೇಂದ್ರ–ರಾಜ್ಯಗಳ ಹಣ ಕಾಸು ಸಂಬಂಧಗಳಲ್ಲಿ ಚಾರಿತ್ರಿಕವಾಗಿ ಬೆಳೆದು ಬಂದಿರುವ ಅಸಮತೋಲನೆಯನ್ನು ಸರಿಪಡಿಸಬಹುದು.

ಜಿಎಸ್‌ಟಿ ಜಾರಿಯಾದಾಗ ಈಗಿರುವ ಎಲ್ಲ ತೆರಿಗೆ ವಿನಾಯ್ತಿಗಳು ಮತ್ತು ರಿಯಾಯ್ತಿಗಳನ್ನು ನಿಲ್ಲಿಸಲಾಗುತ್ತದೆ. ಯಾವುದಾದರೊಂದು ವಲಯಕ್ಕೆ ಬೆಂಬಲ ಕೊಡಬೇಕಾದಲ್ಲಿ, ತೆರಿಗೆ ವಿನಾಯ್ತಿ ಅಥವಾ ರಿಯಾಯ್ತಿಗಳ ಬದಲಾಗಿ, ಅದನ್ನು ಬಜೆಟ್‌ನಲ್ಲಿ ಒದಗಿಸಬೇಕಾಗುತ್ತದೆ. ಹಾಗಾದರೆ, ಸಾಂಪ್ರದಾಯಿಕ ಕೈಗಾರಿಕೆಗಳಾದ ಕೈಮಗ್ಗ ಮತ್ತು ಖಾದಿ ಗ್ರಾಮೋದ್ಯೋಗಗಳ ಗತಿ ಏನು? 1.5 ಕೋಟಿ ರೂಗಳಿಗೆ ಮೀರದ ವ್ಯವಹಾರ ನಡೆಸುವ ಕಿರು ಉದ್ಯಮಗಳಿಗೆ ಈಗ ತೆರಿಗೆ ವಿನಾಯ್ತಿ ಇದೆ. ಜಿಎಸ್‌ಟಿ ಬಂದ ನಂತರ ಅದನ್ನು ನಿಲ್ಲಿಸಲಾಗುತ್ತದೆ. ಇನ್ನು ಮುಂದೆ, 20 ಲಕ್ಷ ರೂಗಳನ್ನು ಮೀರಿದ ವ್ಯವಹಾರ ನಡೆಸುವ ಕಿರು ಉದ್ಯಮಗಳನ್ನು ತೆರಿಗೆ ವ್ಯಾಪ್ತಿಗೆ ತರಲಾಗುವುದು. ಈ ಬಗ್ಗೆ, ಈ ವಲಯದ ಪ್ರತಿನಿಧಿಗಳು ತಲೆ ಕೆಡಿಸಿಕೊಳ್ಳದೆ ಇರುವುದು ಶೋಚನೀಯವಾಗಿದೆ.

ತೆರಿಗೆ ಸಂಗ್ರಹಣೆಯ ಆಡಳಿತ ಯಂತ್ರದ ಬಗ್ಗೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಗಂಭೀರ ಸ್ವರೂಪದ ಭಿನ್ನಾಭಿಪ್ರಾಯಗಳಿವೆ. 1.5 ಕೋಟಿ ರೂಗಳಿಗೆ ಮೀರದ ಸರಕುಗಳ ವ್ಯವಹಾರ ನಡೆಸುವವರೊಂದಿಗೆ ಕೇಂದ್ರವು ನೇರವಾಗಿ ವ್ಯವಹರಿಸದಿರುವುದರ ಬಗ್ಗೆ ಸಹಮತ ಮೂಡಿದೆ. ಆದರೆ, ಸೇವಾ ವಲಯಕ್ಕೆ ಸಂಬಂಧಿಸಿದಂತೆ ಇಂತಹ ಯಾವುದೇ ಸಹಮತ ಮೂಡಿಲ್ಲ. ಮಾತ್ರವಲ್ಲ, ಅನೇಕ ವಿಷಯಗಳ ಬಗ್ಗೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಅನೇಕ ಭಿನ್ನಾಭಿಪ್ರಾಯಗಳಿವೆ.

ಜಿಎಸ್‌ಟಿಗೆ ಸಂಬಂಧಿಸಿದಂತೆ ಸಂವಿಧಾನ ತಿದ್ದುಪಡಿಗೆ ನಾವು ಬೆಂಬಲ ಕೊಟ್ಟಿರುವುದರ ಅರ್ಥ ನವ ಉದಾರವಾದಿ ಸುಧಾರಣೆಗಳಿಗೆ ನಾವು ಶರಣಾಗಿದ್ದೇವೆ ಎಂದಲ್ಲ ಎಂಬ ಅಂಶವನ್ನು ಒತ್ತಿ ಹೇಳಬೇಕಾಗಿದೆ. ಜಿಎಸ್‌ಟಿ ಆಳ್ವಿಕೆಯಲ್ಲಿ ರಾಜ್ಯಗಳ ಮತ್ತು ಜನತೆಯ ಹಿತಾಸಕ್ತಿ ಕಾಪಾಡುವ ಅಂಶವು ನಮ್ಮ ನಿತ್ಯ ಹೋರಾಟದ ಒಂದು ಭಾಗವಾಗಿದೆ ಮತ್ತು ಈ ಹೋರಾಟವನ್ನು ಜಿಎಸ್‌ಟಿ ಕೌನ್ಸಿಲ್‌ನ ಆಚೆಗೂ ಕೊಂಡೊಯ್ಯಬೇಕಾಗಿದೆ.

'ಸಮಾನ ಕೆಲಸಕ್ಕೆ ಸಮಾನ ವೇತನ'ದ ಹಕ್ಕು ಇನ್ನಾದರೂ ಜಾರಿಗೆ ಬರಲಿ–ಸಿಐಟಿಯು ಆಗ್ರಹ

ಅಕ್ಟೋಬರ್ 26ರಂದು ದೇಶದ ಸರ್ವೋಚ್ಚ ನ್ಯಾಯಾಲಯ ನೀಡಿರುವ ಒಂದು ತೀರ್ಪಿನಲ್ಲಿ 'ಸಮಾನ ಕೆಲಸಕ್ಕೆ ಸಮಾನ ವೇತನ'ದ ಹಕ್ಕನ್ನು ಪುನರುಚ್ಚರಿಸಿದೆ. ಸುಪ್ರಿಂ ಕೋರ್ಟಿನ ಈ ತೀರ್ಪನ್ನು ಸಿಐಟಿಯು ಸ್ವಾಗತಿಸಿದೆ.

ಒಂದೇ ರೀತಿಯ ಕೆಲಸಕ್ಕೆ ಒಂದೇ ರೀತಿಯ ಸಂಬಳವನ್ನು ನಿರಾಕರಿಸುತ್ತಿರುವ ಪ್ರಶ್ನೆಯನ್ನು ಕಾರ್ಮಿಕ ಸಂಘಗಳು ದೀರ್ಘಕಾಲದಿಂದ ಎತ್ತುತ್ತಲೇ ಬಂದಿವೆ. ಸಮಾನ ಪ್ರತಿಫಲ ಕಾಯ್ದೆ ಎಂಬುದೊಂದಿದೆ. ಅದು ಒಂದೇ ರೀತಿಯ ಕೆಲಸ ಮಾಡುವ ಪುರುಷರು ಮತ್ತು ಮಹಿಳೆಯರ ವೇತನಗಳ ನಡುವೆ ತಾರತಮ್ಯ ಇರಬಾರದು ಎನ್ನುತ್ತದೆ. ಆದರೂ ತಾರತಮ್ಯ ಇನ್ನೂ ಮುಂದುವರೆಯುತ್ತಿದೆ. ನಿಯಮಿತ ಕಾರ್ಮಿಕರು ಮತ್ತು ಕ್ಯಾಶುವಲ್, ದಿನಗೂಲಿ ಹಾಗೂ ಕಾಂಟ್ರಾಕ್ಟ್ ಕಾರ್ಮಿಕರು ಒಂದೇ ರೀತಿಯ ಕೆಲಸ ಮಾಡುತ್ತಿದ್ದರೂ ಅವರ ವೇತನಗಳು ಮತ್ತು ಸೌಲಭ್ಯಗಳ ನಡುವೆ ಅಪಾರ ತಾರತಮ್ಯದ ಪ್ರಶ್ನೆ ಇನ್ನೂ ಉಳಿದಿದೆ.

ಕೇಂದ್ರದಲ್ಲಿ ಬಂದ ಸರಕಾರಗಳ ಎದುರು ಕಾರ್ಮಿಕ ಸಂಘಗಳು ಈ ಪ್ರಶ್ನೆಯನ್ನು ಮತ್ತೆ–ಮತ್ತೆ ಎತ್ತಿವೆ ಎಂದಿರುವ ಸಿಐಟಿಯು 2009 ಮತ್ತು 2010ರಲ್ಲಿ ದೇಶದ ಅತ್ಯುನ್ನತ ತ್ರಿಪಕ್ಷೀಯ ಸಂಸ್ಥೆಯಾದ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ) ಗುತ್ತಿಗೆ ಶ್ರಮ (ರದ್ದತಿ ಮತ್ತು ನಿಯಂತ್ರಣ) ಕಾಯ್ದೆಯನ್ನು ತಿದ್ದುಪಡಿ ಮಾಡುವಾಗ ಒಂದೇ ರೀತಿಯ ಕೆಲಸಗಳಿಗೆ ಸಮನಾದ ವೇತನ ಲಭ್ಯಗೊಳಿಸಬೇಕು ಎಂದಿತ್ತು ಎಂಬುದನ್ನು ನೆನಪಿಸಿದೆ. 2015ರಲ್ಲಿ ನಡೆದ 46ನೇ ಐಎಲ್‌ಸಿ ಮತ್ತೆ ಇದನ್ನು ಪುನರುಚ್ಚರಿಸಿತು.

ಆದರೆ ಈ ವಿಷಯದಲ್ಲಿ ಸರಕಾರ ಏನೂ ಮಾಡಲಿಲ್ಲ. ಕಾರ್ಮಿಕ ಸಂಘಗಳು ಹೋರಾಟಗಳನ್ನು ನಡೆಸಿರುವ, ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಗಳನ್ನು ನಡೆಸಿರುವ ಬೇಡಿಕೆಗಳಲ್ಲಿ ಇದೂ ಒಂದು. ಈಗಲಾದರೂ ಸುಪ್ರಿಂ ಕೋರ್ಟ್ ಸಮಾನ ಕೆಲಸಕ್ಕೆ ಸಮಾನ ವೇತನದ ನೀತಿ ಪ್ರತಿಯೊಬ್ಬ ಕಾರ್ಮಿಕನಿಗೆ ಇರುವ ಒಂದು ಸ್ಪಷ್ಟ ಮತ್ತು ನಿಸ್ಸಂದಿಗ್ಧ ಹಕ್ಕಾಗಿದೆ ಎಂದು ನಿರ್ದೇಶಿಸಿರುವಾಗ ಭಾರತ ಸರಕಾರ ಮತ್ತು ರಾಜ್ಯ ಸರಕಾರಗಳು ಈ ನೀತಿಯನ್ನು ಮಾನ್ಯಮಾಡಬೇಕು, ಇದನ್ನು ಜಾರಿ ಮಾಡುವಲ್ಲಿ ಇನ್ನಷ್ಟು ವಿಳಂಬ ಮಾಡಬಾರದು ಎಂದು ಸಿಐಟಿಯು ಆಗ್ರಹಿಸಿದೆ.

ಕಾರ್ಮಿಕನ ಈ ಹಕ್ಕಿನ ಜಾರಿಯಲ್ಲಿ ಸುಪ್ರಿಂ ಕೋರ್ಟ್ ಕೆಲವು ನೀತಿಗಳನ್ನು ಎತ್ತಿ ತೋರಿದೆ. ಸುಪ್ರಿಂ ಕೋರ್ಟ್ ಹೇಳಿರುವ ಈ ನೀತಿಗಳನ್ನು ಈ ಹಕ್ಕನ್ನು ನಿರಾಕರಿಸುವ ಕುತಂತ್ರಗಳಿಗೆ ಬಳಸದಂತೆ ನೋಡಿಕೊಳ್ಳಬೇಕು ಎಂದೂ ಸಿಐಟಿಯು ಆಗ್ರಹಿಸಿದೆ.

ಈ ಹಕ್ಕನ್ನು ಎಲ್ಲ ವಲಯಗಳಲ್ಲಿ ಜಾರಿಗೆ ತರುವಂತೆ ಮಾಡುವ ಹೋರಾಟಕ್ಕೆ ಎಲ್ಲ ಸಂಘಗಳು ಮತ್ತು ಕಾರ್ಮಿಕರು ಸಿದ್ಧರಾಗಿರಬೇಕು ಎಂದು ಸಿಐಟಿಯು ಕರೆ ನೀಡಿದೆ.

ಝಾರ್ಖಂಡ್: ಬುಡಕಟ್ಟು ಜನಗಳ ಮೇಲಿನ ಧಾಳಿಯ ವಿರುದ್ಧ ಯಶಸ್ವೀ ಬಂದ್



ಝಾರ್ಖಂಡ್‌ನ ಗೋಲಾ, ಬರ್ಖಾಗಾಂವ್ ಮತ್ತು ಖುಂಟಿಯಲ್ಲಿ ಬುಡಕಟ್ಟು ಜನಗಳ ಮೇಲೆ ನಡೆದ ಪೋಲೀಸ್ ಗೋಲೀಬಾರ್ ಮತ್ತು ಛೋಟಾನಾಗ್ಪುರ ಗೇಣಿ ಕಾಯ್ದೆ ಹಾಗೂ ಸಂತಾಲ್ ಪರಗಣ ಗೇಣಿ ಕಾಯ್ದೆಯಲ್ಲಿ ಬುಡಕಟ್ಟು-ಜನ ವಿರೋಧಿ ತಿದ್ದುಪಡಿಗಳ ವಿರುದ್ಧ ಹಾಗೂ ಗೈರ್ ಮಂಜೂರ್‌ವಾ ಅಥವ ಬಗರ್ ಹುಕ್ಕುಂ ಜಮೀನಿನಿಂದ ಬಡವರ ಎತ್ತಂಗಡಿ ವಿರುದ್ಧ ಎಡ ಮತ್ತು ಜಾತ್ಯಾತೀತ ವಿರೋಧ ಪಕ್ಷಗಳು ನೀಡಿದ ಬಂದ್ ಕರೆಗೆ ಅಕ್ಟೋಬರ್ 24ರಂದು ರಾಜ್ಯದಲ್ಲಿ ಉತ್ತಮ ಸ್ಪಂದನ ದೊರೆತಿದೆ.

ಬಿಜೆಪಿ-ಎಜೆಎಸ್‌ಯು ಸರಕಾರದ ಜನವಿರೋಧೀ ಚಟುವಟಿಕೆಗಳ ವಿರುದ್ಧ ಜನರನ್ನು ಒಂದಾಗಿಸಲು ಈ ಬಂದ್ ಯಶಸ್ವಿಯಾಗಿದೆ, ದಮನಕಾರೀ ರಾಜ್ಯ ಆಡಳಿತ ಯಂತ್ರದ ಮೂಲಕ ಝಾರ್ಖಂಡಿನ ಸಂಪನ್ಮೂಲದ ವ್ಯಾಪಾರ ಮಾಡಲು ಬಿಡುವುದಿಲ್ಲವೆಂಬ ಸ್ಪಷ್ಟ ಸಂದೇಶ ನೀಡಲಾಗಿದೆ ಎಮದಿರುವ ಸಿಪಿಐ(ಎಂ) ರಾಜ್ಯಸಮಿತಿ ಜನ ವಿರೋಧೀ ಸರಕಾದ ವಿರುದ್ಧ ಕಠಿಣ ಪ್ರತಿರೋಧ ಮತ್ತು ರಕ್ಷಣಾಕೋಟೆಯನ್ನು ಪ್ರಜ್ಞಾಪೂರ್ವಕವಾಗಿ ನಿರ್ಮಿಸಬೇಕೆಂದು ಜನರಲ್ಲಿ ಮನವಿ ಮಾಡಿಕೊಂಡಿದೆ.

ಝಾರ್ಖಂಡ್ ಪೋಲೀಸರು 200ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಬಂಧಿಸಿದೆ ಎಂದು ವರದಿಯಾಗಿದೆ. ರಾಜಧಾನಿ ರಾಂಚಿಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಗೋಪಿಕಾಂತ ಬಕ್ಷಿ, ಮತ್ತಿತರ ರಾಜ್ಯ ಮುಖಂಡರೂ ಬಂಧನಕ್ಕೆ ಒಳಗಾದರು.

ರಾಜ್ಯಪಾಲರ ಬಳಿಗೆ ನಿಯೋಗ

ಇದಕ್ಕೆ ಮೊದಲು ಅಕ್ಟೋಬರ್ 22 ರಂದು ಖುಂಟಿ ಜಲ್ಲೆಯ ಸೈಕೋ ಹಳ್ಳಿಯಲ್ಲಿ ಬುಡಕಟ್ಟುಜನಗಳ ರ‍್ಯಾಲಿಗೆ ಹೋಗುತ್ತಿದ್ದ ಸಂಧರ್ಭದಲ್ಲಿ ಪೋಲೀಸರು ಪ್ರಚೊದನೆ ಇಲ್ಲದಿದ್ದರೂ ಗುಂಡಿನ ಧಾಳಿ ನಡೆಸಿರುವ ಘಟನೆಯ ಬಗ್ಗೆ ರಾಜ್ಯಪಾಲರು ಮಧ್ಯಪ್ರವೇಶಿಸಿ ಜನಗಳ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಬೇಕೆಂದು ಅವರನ್ನು ಭೇಟಿ ಮಾಡಿದ ಸಿಪಿಐ(ಎಂ) ಮತ್ತು ವಿರೋಧ ಪಕ್ಷಗಳ ನಿಯೋಗ ಒತ್ತಾಯಿಸಿದೆ. ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ಈ ಘಟನೆಯ ನ್ಯಾಯಾಂಗ ತನಿಖೆ ನಡೆಸಬೇಕು ಮತ್ತುಇದಕ್ಕ ಎಕಾರಣರಾದವರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ನಿಯೋಗ ಆಗ್ರಹಿಸಿತು.

ಈ ನಿಯೋಗದಲ್ಲಿ ಪೋಲೀಸ್ ಗೋಳಿಬಾರ್‌ನಲ್ಲಿ ಮೃತರಾದವರ, ಗಾಯಗೊಂಡವರ ಕುಟುಂಬದ ಸದಸ್ಯರೂ ಇದ್ದರು.

ಗಮನಾರ್ಹ ಸಂಗತಿಯೆಂದರೆ ಪೋಲೀಸ್ ಗುಂಡಿಗೆಡ ಬಲಿಯಾದ ಅಬ್ರಹಾಂ ಮುಂಡ ರವರ ಸೋದರ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸೈನಿಕರ ವಿಷಯ ಬಂದಾಗ ಭಾರೀ ದೊಡ್ಡ ರಾಷ್ಟ್ರೀಯವಾದಿಯಂತೆ ಪೋಸು ಕೊಡುವ ಆರೆಸ್ಸೆಸ್-ಬಿಜೆಪಿ ಅಂತಹ ರಕ್ಷಣಾ ಸಿಬ್ಬಂದಿಯ ಕುಟುಂಬದ ಸದಸ್ಯರ ಮೇಲೆಯೇ ಗೋಲೀಬಾರ್ ನಡೆಸುತ್ತಿದೆ!

ರಾಜ್ಯಗಳ ಸುತ್ತ

ಭಾರತಿ ಗಾಂವ್ಕರ್

ಪಶ್ಚಿಮ ಬಂಗಾಳ: ಆಳುವ ಕೂಟ ಕೋಮುವಾದದ ಅಗ್ನಿಪರೀಕ್ಷೆಯಲ್ಲಿ ವಿಫಲವಾಗುತ್ತಿದೆ

ಮುಹಮ್ಮದ್ ಇಸ್ಮಾಯಿಲ್ ಅನ್ಸಾರಿಯ ಸಣ್ಣ ಟೈಲರಿಂಗ್ ಅಂಗಡಿಯಲ್ಲಿದ್ದ ಎಲ್ಲ ಏಳು ಹೊಲಿಗೆ ಮೆಶೀನುಗಳು ಕಾಣೆಯಾಗಿವೆ. ನೂರು ಮಿಟರ್ ದೂದಲ್ಲಿರುವ ದಿಲೀಪ್ ಶಾನ ಕಿರಾಣಿಅಂಗಡಿ ಸುಟ್ಟು ಭಸ್ಮವಾಗಿದೆ. ಅದೇ ರಈತಿ ಅಖ್ತರ್ ಹುಸೇನ್ ಮತ್ತು ಸಿರಾಜುದ್ದೀನ್ ಅನ್ಸಾರಿಯ ಅಂಗಡಿಗಳು ಕೂಡ. ಗೀತಾ ದೇವಿಯ ಮನೆಯನ್ನು ಲಾಡಿದ್ದಾರೆ, ಪಕ್ಕದ ಮಣಿ ಜೈಸ್ವಾಲ್ ಅಂಗಡಿ ದರೋಡೆಯಾಗಿದೆ.

ಇದು ಇತ್ತೀಚೆಗೆ ಕೋಮುಗಲಭೆಯನ್ನು ಕಂಡ ಪಶ್ಚಿಮ ಬಂಗಾಳದ ಉತ್ತರ 24 ಪರಗಣಜಿಲ್ಲೆಯಲ್ಲಿರುವ ಹಾಜೀನಗರ ದೊಂದು ದೃಶ್ಯ. ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಹಲವಾರು ಘಟನೆಗಳು ಕೋಮು ಧ್ರುವೀಕರಣದ ಪ್ರಯತ್ನಗಳತ್ತ ಬೊಟ್ಟುವಾಡಿ ತೋರಿಸುತ್ತಿವೆ. ಬಿಜೆಪಿ ಮುಖಂಡ ದಿಲೀಪ್ ಘೋಷ್ ತನ್ನ ಸಾಮಾಜಿಕ ಜಾಲತಾಣದಲ್ಲಿ ಈ ಕರ್ತವ್ಯವನ್ನು ತನಗೆ ಅನುಗ್ರಹಿಸಲಾಗಿತ್ತು , ಅದನ್ನು ಈಡೇರಿಸಿರುವುದಾಗಿ ಎಂದು ಬರೆದುಕೊಂಡಿದ್ದಾರೆ. ಅವರಿಗೆ ಅನುಗ್ರಹಿಸಲಾಗಿರುವ ಕರ್ತವ್ಯ ಏನೆಮಬುದು ಸ್ಪಷ್ಟ.

ಕೆಲವು ದಿನಗಳ ಹಿಮದೆ ಚಂದ್ರಾನಗರ ಮತ್ತು ಮೊಹಮ್ಮದ್‌ಬಜಾರನಲ್ಲೂ ಇಮಹವೇ ದೃಶ್ಯಗಳು ಸೃಷ್ಟಿಯಾದವು. ಇವೆಲ್ಲ ಈ ಹಿಂದೆ ಕೋಮುಧ್ರುವೀಕರಣದ ಶಕ್ತಿಗಳನ್ನು ಹತ್ತಿರಕ್ಕೂ ಬರಗೊಡದ ಪ್ರದೇಶಗಳಾಗಿದ್ದವು. ಈಗ ಬಿಜೆಪಿ ಮತ್ತದರ ಮಿತ್ರ ಸಂಘಟನೆಗಳ ಅಪೇಕ್ಷೆಯಂತೆ ಕೋಮುದ್ರುವೀಕರಣದ ಪರಿಧಿಯಲ್ಲಿ ಸೇರಿವೆ.

ಕಳೆದ ಕೆಲ ವರ್ಷಗಳಿಂದ ರಾಜ್ಯಾಡಳಿತ, ಕಾರ್ಪೊರೇಟ್ ಮಾಧ್ಯಮಗಳು ಮತ್ತು ಅಧಿಕಾರದಲ್ಲಿರುವ ಟಿಎಂಸಿ ರಾಜಕಾರಣಿಗಳು ಕೈಜೋಡಿಸಿ ಎಡಶಕ್ತಿಗಳಿಗೆ ಅವಕಾಶವೇ ಇಲ್ಲದಂತೆ ಮಾಡಿರುವ ಪರಿಣಾಮವೆಂದರೆ ಹೀಗೆ ಉಂಟಾಗಿರುವ ನಿರ್ವಾತವನ್ನು ಕೋಮುವಾದಿ ಶಕ್ತಿಗಳು ಆಕ್ರಮಿಸಿಕೊಳ್ಳುತ್ತಿವೆ.

ಹಾಜಿನಗರದಲ್ಲನ ಇತ್ತೀಚಿನ ಘಟನೆ ಇದನ್ನೇ ಬಿಂಬಿಸುತ್ತಿವೆ ಎಂದು 'ಗಣಶಕ್ತಿ'ಯ ಪತ್ರಕರ್ತರು ಹೇಳುತ್ತಾರೆ.

ಅಕ್ಟೋಬರ್ 16 ರಂದು ಕಾಂಗ್ರೆಸ್ ಮತ್ತು ಎಡ ಪಕ್ಷಗಳ ನಿಯೋಗ ಹಿಜಾನಗರ್ ಭೇಟಿ ನೀಡಲು ಹೋದಾಗ ಪೋಲೀಸರು ಪ್ರವೇಶ ಮಾಡದಂತೆ ನಿರ್ಬಧಿಸಿದರು. ಆದರೆ ಟಿಎಂಸಿ ಮುಖಂಡರಿಗೆ ಯಾವುದೇ ಆಕ್ಷೇಪಣೆ ಇಲ್ಲದೇ ಪ್ರವೇಶಕ್ಕೆ ಅನುಮತಿ ಸಿಕ್ಕಿತು. ಟಿಎಂಸಿ ಮುಖಂಡರು ಬಹುಬಾರಿ 'ಜೈ ಶ್ರಿರಾಂ' ಎಂದುಘೋಷಣೆ ಕೂಗುವ ಗುಂಪಿನ ಜೊತೆ ಸೇರಿರುವದು ಕಂಡು ಬಂದಿದೆ. ಆಢಳಿತದ ಈ ರೀತಿಯ ದ್ವಂದ್ವ ನಿಲುವಿನಿಂದಾಗಿ ಕೋಮು ಶಕ್ತಿಗಳಿಗೆ ಹಿಂದೂ ಮುಸ್ಲಿಂಮರ ನಡುವೆ ಕಂದರ ಸೃಷ್ಟಿಸಲು ಸಹಾಯವಾಗಿದೆ. ಹಿಂದೂ ಮುಸ್ಲಿಂಮರ ಗಲಭೆಯ ಹಿಂದೆ ಟಿಎಂಸಿ ಯೊಂದಿಗೆ ಸಂಬಂಧವಿರುವ ಹೊಂದಿರುವ ಗೂಂಡಾಗಳ ದೊಡ್ಡ ಕೈವಾಡ ಇದೆ ಎಂಬ ಬಗ್ಗೆ ಇಲ್ಲಿ ಯಾವ ಮುಚ್ಚುಮರೆಯೂ ಇಲ್ಲವಂತೆ.

ಪ್ರಜಾಪ್ರಭುತ್ವದ ಮೇಲಿನ ದಾಳಿ ಕೊಮು ಶಕ್ತಿಗಳ ವೃದ್ದಿಗೆ ಸೌಕರ್ಯ ಒದಗಿಸಿ ಕೊಟ್ಟಿದೆ. ಎಡರಂಗದ ಮೇಲೆ ಧಾಳಿ ಮಾಡುವದೇ ಆರ್‌ಎಸ್‌ಎಸ್, ಬಿಜೆಪಿ, ಮತ್ತು ಟಿಎಂಸಿಗಳಿಗೆ ಸಾಮಾನ್ಯ ಅಜೆಂಡಾ ಆಗಿಬಿಟ್ಟಿದೆ.

ಈ ಭಾಗದಲ್ಲಿ ಬಹಳ ವರ್ಷಗಳಿಂದ ಕಂಡು-ಕೇಳರಿಯದ ಕೋಮುಗಲಭೆಗಳ ನಂತರವೂ ರಾಜ್ಯ ಆಡಳಿತದ ನಿಲುವು ನೋಡಿದರೆ ಜಾತ್ಯಾತೀತೆಯ ಭದ್ರ ಕೋಟೆಯಾಗಿ ಕೋಮುವಾದಿಗಳಿಗೆ ಪ್ರವೇಶವೇ ಇಲ್ಲದಿದ್ದ ಈ ರಾಜ್ಯ ಇನ್ನು ಮುಮದೆಯೂ ಕೋಮುವಾದಿ ಶಕ್ತಿಗಳ ದಾಳಿಯ ಗುರಿಯಾಗಿರುತ್ತದೆ ಎಂದು ಈ ಪತ್ರಕರ್ತರು ವಿಶ್ಲೇಷಿಸಿದ್ದಾರೆ.



ಒಡಿಶಾದಲ್ಲಿ 41 ದಿನಗಳಲ್ಲಿ 60 ಮಕ್ಕಳ ಸಾವು: ಸೂಕ್ತ ಪರಿಹಾರ, ಸರಿಯಾದ ಚಿಕಿತ್ಸೆಗೆ ಆಗ್ರಹ

ಒಡಿಶಾದ ಮಲ್ಕಾನ್‌ಗಿರಿ ಎಂಬಲ್ಲಿ ಕಳೆದ 41 ದಿನಗಳಲ್ಲಿ 60ಕ್ಕೂ ಹೆಚ್ಚು ಮಕ್ಕಳು ಜಾಪನೀಸ್ ಎನ್‌ಸೆಫಲೈಟೀಸ್ ಎಂಬ ರೋಗಕ್ಕೆ ತುತ್ತಾಗಿ ಅಸುನೀಗಿದ್ದಾರೆ. ತೀವ್ರ ಬಡತನ, ಅಜ್ಞಾನ ಇವರ ಅನಾರೋಗ್ಯಕರ ಜೀವನಕ್ಕೆ ಕಾರಣವಾಗಿದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ತೀವ್ರವಾಗಿ ಕುಸಿದಿದ್ದು ತುರ್ತುಪರಿಸ್ಥಿತಿಯ ಸಮಯದಲ್ಲಿ ಸರಿಯಾದ ಚಿಕಿತ್ಸೆ ದೊರಕುತ್ತಿಲ್ಲ. ವೈದ್ಯರಿಲ್ಲದೇ ಸಮರ್ಪಕ ಸಲಕರಣೆಗಳಿಲ್ಲದೇ ಕೇವಲ ಆಸ್ಪತ್ರೆ ಕಟ್ಟಡವೊಂದಿದ್ದರೆ ಬಡಜನರ ಚಿಕಿತ್ಸೆ ಮಾಡಲಾಗದು ಎಂದು ಸಿಪಿಐ(ಎಂ) ಡಿಸಿ ಕಛೇರಿಎದುರು ಪ್ರತಿಭಟನೆ ನಡೆಸಿತು. ಸಮರ್ಪಕ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಒತ್ತಾಯಿಸಿತು,

ಪ್ರಾಣ ಕಳೆದುಕೊಂಡ ಮಕ್ಕಳ ಕುಟುಂಬಗಳಿಗೆ ಪರಿಹಾರ, ಕೇಂದ್ರದ ನೆರವಿನೊಂದಿಗೆ ಜಾಪನೀಸ್ ಎನ್‌ಸೆಫಲೈಟೀಸ್ ರೋಗಕ್ಕೆ ಸರಿಯಾದ ಚಿಕಿತ್ಸೆ, ಖಾಲೀ ಇರುವ ವೈದ್ಯ ಹುದ್ದೆಗಳನ್ನು ತುಂಬಬೇಕು, ಭೂಮಿ,ಉದ್ಯೋಗ ಕೂಲಿ, ಶಿಕ್ಷಣ, ಸ್ವಚ್ಛ ಕುಡಿಯುವ ನೀರು ಒದಗಿಸಬೇಕು ಎಂದು ಸಿಪಿಐ(ಎಂ) ಒಡಿಶಾ ಸರಕಾರವನ್ನು ಆಗ್ರಹಿಸಿದೆ.

ದಲಿತರಿಗೆ 3 ಎಕರೆ ಭೂಮಿಯೋಜನೆಯಡಿ ಕೇವಲ 6374 ಭೂಮಿ, ಕೈಗಾರಿಕೆಗಳಿಗೆ 30 ಲಕ್ಷ ಎಕರೆ ? ಮಹಾಜನ ಪಾದಯಾತ್ರೆಯ ಪ್ರಶ್ನೆ

ಸಮಗ್ರ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಘೋಷಣೆಯೊಂದಿಗೆ ಸಿಪಿಐ(ಎಂ) ತೆಲಂಗಾಣಾದಲ್ಲಿ ಕೈಗೊಂಡಿರುವ 5 ತಿಂಗಳುಗಳ ಮಹಾಜನ ಪಾದಯಾತ್ರೆ ಈಗಾಗಲೇ 200ಕಿ.ಮಿ.ಗಳಷ್ಟು ಕ್ರಮಿಸಿದೆ. ಮುಖ್ಯಮಂತ್ರಿ ಕೆ ಚಂದ್ರಶೇಖರರಾವ್, ಅವರ ಮಂತ್ರಿಗಳು ಮತ್ತು ಆಢಳಿತ ಪಕ್ಷದ ಮುಖಂಡರು ಪಾದಯಾತ್ರೆಯ ವಿರುದ್ಧ ವಿಷ ಕಾರುತ್ತಿದ್ದರೂ ಜನಗಳು ಈ ಪಾದಯಾತ್ರೆಗೆ ನೂರಾರು ಸಂಖ್ಯೆಯಲ್ಲಿ ಬಂದು ಸ್ವಾಗತ ನೀಡುತ್ತಿದ್ದಾರೆ, ತಮ್ಮ ಕುಂದುಕೊರತೆಗಳು, ಸಮಸ್ಯೆಗಳ ಬಗಗೆ ಹೇಳುತ್ತಿದ್ದಾರೆ, ಕೆಲವು ಕಾರ್ಯಕರ್ತರು, ನಾಗರಿಕ ಸಂಸ್ಥೆಗಳ ಸದಸ್ಯರು , ಪ್ರತಿಪಕ್ಷಗಳ ನಾಯಕರು ಪಾದಯಾತ್ರೆಗೆ ಸೌಹಾರ್ದ ವ್ಯಕ್ತಪಡಿಸುತ್ತಿದ್ದಾರೆ, ರಾಜ್ಯ ಅಭಿವೃದ್ಧಿಯ ಪ್ರಶ್ನೆಗಳ ಮೇಲೆ ಸಲಹೆ-ಸೂಚನೆಗಳನ್ನು ಕೊಡುತ್ತಿದ್ದಾರೆ.

ಪಾದಯಾತ್ರೆಯ ಎಂಟನೇ ದಿನ ನಿವೃತ್ತ ನ್ಯಾಯಾಧೀಶ ಚಂದ್ರ ಕುಮಾರ್, ಮಾಜು ಗೃಹ ಮಂತ್ರಿ ಸಬಿತಾ ರೆಡ್ಡಿ, ಅಲ್ಪಸಂಖ್ಯಾತರ ಸಂಗದ ಮುಖಂಡ ಅಬ್ಬಾಸ್ ಬಂದು ಪಾದಯಾತ್ರೆಗೆ ಬೆಂಬಲ ಸಲೂಚಿಸಿದರು.

ಅಕ್ಟೋಬರ್ 27ರಂದು ರಾಜ್ಯದ ಪ್ರಖ್ಯಾತ ದಲಿತ ಚಿಂತಕರು ಮತ್ತು ಪ್ರಾಧ್ಯಾಪಕರಾದ ಪ್ರೊ.ಕಂಚ ಇಲಯ್ಯ ಪಾದಯಾತ್ರಿಗಳೊಂದಿಗೆ ಹೆಜ್ಜೆ ಹಾಕಿ ತಮ್ಮ ಸೌಹಾರ್ದವನ್ನು ವ್ಯಕ್ತಪಡಿಸಿದರು. ಅವರು ಶಿಕ್ಷಣದ ಖಾಸಗೀಕರಣದ ಬಗ್ಗೆ ಮಾತಾಡಿದರು. ಎಲ್ಲರಿಗೂ ಶಾಲಾಶಿಕ್ಷಣ ಪುಕ್ಕಟೆಯಾಗಿ ಸಿಗುವಂತಾಗಬೇಕು ಎಂದರು. ವೀರಭದ್ರಂ ನೇತೃತ್ವದ ಪಾದಯಾತ್ರಿಗಳ ತಂಡ ಈ ಮೂಲ ಪ್ರಶ್ನೆಗಳ ಮೇಲ ಹೋರಾಟ ನಡೆಸು ವುದಾಗಿ ಅವರಿಗೆ ಭರವಸೆ ನೀಡಿತು.



ಸರಕಾರದ ಅಂದಾಜಿನ ಪ್ರಕಾರ ಒಟ್ಟೂ 9616 ಎಕರೆ ಯೋಜಿತ ಭೂಮಿಯಲ್ಲಿ ಕೇವಲ 6734 ಎಕರೆಯನ್ನು 2561 ಕುಟುಂಬಗಳಿಗೆ ಹಂಚಲಾಗಿದ್ದು ಉಳಿದ ಭೂಮಿ ಕಡತಗಳಲ್ಲಿ ಉಳಿದುಕೊಂಡಿದೆ. 30 ಲಕ್ಷ ಎಕರೆ ಭೂಮಿಯನ್ನು ಕೈಗಾರಿಕೆಗಳಿಗೆ ನೀಡಲು ತುದಿಗಾಲಲ್ಲಿ ನಿಂತ ಸರಕಾರಕ್ಕೆ ಬಡಜನರಿಗೆ ಭೂಮಿ ನೀಡುವಲ್ಲಿ ಇಶ್ಚಾಶಕ್ತಿ ಇದ್ದಂತೆ ಕಾಣುತ್ತಿಲ್ಲ

ಭೂರಹಿತರಿಗೆ ಇದೊಂದು ದೊಡ್ಡ ಸಮಸ್ಯೆ ಆಗಿದೆ ಉದಾಹರಣೆಗೆ ಕುಡಬಾಕ್ಷಪಲ್ಲಿಯಲ್ಲಿ ಸರಪಂಚನೊಬ್ಬ ತನ್ನಅಧಿಕಾರವನ್ನು ಬಳಸಿ ರುದ್ರಭೂಮಿಗೆ ಬೇಲಿಹಾಕಿ ತನ್ನದೇ ಸ್ವಂತ ಬೂಮಿ ಎಂದು ಹೇಳಿ ಕೊಳ್ಳು ತ್ತಿದ್ದಾನೆ ಇದರಿಂದಾಗಿ ಅನೇಕ ಹಳ್ಳಿಯ ಜನರಿಗೆ ಶವ ಸಂಸ್ಕಾರ ಮಾಡಲು ಭೂಮಿ ಇಲ್ಲದಂತಾಗಿದೆ. ಪಾದಯಾತ್ರೆಯ ಜನರು ಅಧಿಕಾರಿಗಳಿಗೆ ಈ ವಿಷಯದ ಕುರಿತು ಮಾಹಿತಿ ಪಡೆದು ಆ ಜನರಿಗೆ ಸ್ವಲ್ಪ ಭೂಮಿ ವಿತರಿಸಲು ಕೇಳಿಕೊಂಡರು,

2 ಕೋಣೆಗಳಿರುವ ಮನೆ, ದಲಿತರಿಗೆ 3ಎಕ್ರೆ ಜಮೀನು, ಶಾಲೆಗಳಲ್ಲಿ ಶೌಚಾಲಯಗಳು, ನೀರು ಮತ್ತಿತರ ಸೌಕರ್ಯಗಳ ಅಭಾವ, ಅರ್ಹರಿಗೆ ಪೆನ್ಶನ್ ಇಲ್ಲ, ಸ್ಥಳೀಯ ಯುವಜನರಿಗೆ ಉದ್ಯೋಗವಿಲ್ಲ ಹೀಗೆ ಪಾದಯಾತ್ರೆ ಸಂಚರಿಸಿದ ಸ್ಥಳಗಳಲ್ಲೆಲ್ಲ ಸಾವಿರಾರು ದೂರುಗಳು ಕೇಳಿಬರುತ್ತಿವೆ. ಇದನ್ನು ಸಂಬಂಧಪಟ್ಟವರ ಗಮನಕ್ಕೆ ತರಲಾಗುತ್ತಿದೆ.

ವಿವಿಧ ಜನವಿಭಾಗಗಳು ಕೊಡುತ್ತಿರುವ ಮನವಿ ಪತ್ರಗಳ ಮೇಲೆ ಹೋರಾಟ ನಡೆಸುವುದಾಗಿ ಪಾದಯಾತ್ರಿಗಳು ಜನರಿಗೆ ಭರವಸೆ ಕೊಟ್ಟು ಮುಂದೆ ಸಾಗುತ್ತಿದ್ದಾರೆ.

‘ಸಹಿಷ್ಣುತೆ ಎಂಬುದು ಗೆಲುವು’........ ಪುಟ 16 ರಿಂದ

ನಡೆಸಿದ ಹೋರಾಟಗಳ ಏಳು-ಬೀಳುಗಳ ಲೋಕವನ್ನು ಹಂಚಿಕೊಂಡರು. ಭಾರತಿ ಹೆಗಡೆ ಪತ್ರಕರ್ತರ ಮತ್ತು ಅವರ ಅನುಭವಕ್ಕೆ ಬರುವ ಮಹಿಳೆಯರ ಲೋಕವನ್ನು ತೆರೆದಿಟ್ಟರು. ಎಲ್ಲರೂ ತಾತ್ಸಾರದಿಂದ ಅನುಮಾನದಿಂದ ಕಾಣುವ ತೃತೀಯ ಲಿಂಗಿಗಳ ಬದುಕಿನ ಬಗ್ಗೆ ಡಾ.ಅಕ್ಕೈ ಪದ್ಮಶಾಲಿ ಮಾತನಾಡಿದರು. ಜ್ಯೂಲಿಯಾನ ಫೆರ್ನಾಂಡೀಸ್ ಸಿದ್ದಿ ಜನಾಂಗದ ಮಹಿಳೆಯರ ಅನುಭವ ಲೋಕವನ್ನು ಪರಿಚಯಿಸಿದರು. ಕೆ.ಷರೀಫಾ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಸುಧಾ ಆಡುಕಳ ಗೋಷ್ಠಿಯನ್ನು ನಿರ್ವಹಿಸಿದರು.

‘ನಮ್ಮ ಅರಿವು ನಮ್ಮ ನಡೆ’ ಗೋಷ್ಠಿ ಮಹಿಳಾ ಚಿಂತನೆಗೆ ಮುಡಿಪಾಗಿತ್ತು. ಡಾ. ಎಚ್.ಎಸ್. ಅನುಪಮಾ ಮತ್ತು ಡಾ.ಗೀತಾ ವಸಂತ ಇಂದಿನ ಮಹಿಳಾ ಚಿಂತನೆಯ ದಿಕ್ಕು ದೆಸೆಗಳ ಪರಿಚಯ ಮಾಡಿದರು. ಡಾ. ಎಂ.ಎಸ್.ಆಶಾದೇವಿ ಅಧ್ಯಕ್ಷತೆ ವಹಿಸಿದ್ದರು. ಶ್ರೀದೇವಿ ಕೆರೆಮನೆ ಗೋಷ್ಠಿಯನ್ನು ನಿರ್ವಹಿಸಿದರು.

‘ನಮ್ಮ ನೋಟ ನಮ್ಮ ನುಡಿ’ ಗೋಷ್ಠಿ ಮಹಿಳಾ ಸಾಹಿತ್ಯದ ಇಂದಿನ ಚರ್ಚೆಗಳನ್ನು ಎತ್ತಿಕೊಂಡಿತು. ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿ.ವಿ.ಯ ಡಾ. ಸುನಂದಮ್ಮ ಆರ್., ಹಾಗೂ ಡಾ. ಸಬಿತಾ ಬನ್ನಾಡಿ, ಡಾ. ತಾರಿಣಿ ಶುಭದಾಯಿನಿ ಮಹಿಳಾ ಸಾಹಿತ್ಯದ ಬಗ್ಗೆ ಇಂದಿನ ಒಳನೋಟಗಳನ್ನು ಕೊಟ್ಟರು. ಕಾವ್ಯ ನಾಯ್ಕ ಗೋಷ್ಠಿಯ ನಿರ್ವಹಣೆ ಮಾಡಿದರು.

‘ನಮ್ಮ ಮಾತು ನಮ್ಮ ಹಕ್ಕು’ ಗೋಷ್ಠಿಯಲ್ಲಿ ಮಹಿಳಾ ಚಳುವಳಿಯ ಇಂದಿನ ಸ್ಥಿತಿ, ಸೋಲು-ಗೆಲುವು, ಸವಾಲು-ಸಾಧ್ಯಮತೆಗಳನ್ನು ತೆರೆದಿಟ್ಟವರು ಜನವಾದಿ ಮಹಿಳಾ ಸಂಘಟನೆಯ ಕೆ. ನೀಲಾ ಮತ್ತು



ಡಾ. ಅನುಸೂಯಾ ಕಾಂಬ್ಳೆ. ಡಾ. ಎನ್. ಗಾಯತ್ರಿ ಅಧ್ಯಕ್ಷತೆ ವಹಿಸಿದ್ದರು. ಯಮುನಾ ಗಾಂವ್ಕರ್ ಗೋಷ್ಠಿಯನ್ನು ನಿರ್ವಹಿಸಿದರು.

ಈ ಗೋಷ್ಠಿಗಳಲ್ಲದೆ ಸಮಾವೇಶದಲ್ಲಿ ಮಹಿಳಾ ಕಾವ್ಯಧಾರೆ ಹರಿಯಿತು. ಕಾವ್ಯ ಓದು-ಗಾಯನಕ್ಕೆ ಮೀಸಲಾಗಿದ್ದ ಗೋಷ್ಠಿಯಲ್ಲಿ ಡಾ. ಹೇಮಾ ಶೆಟ್ಟಿ, ಭಾಗೀರಥಿ ಹೆಗಡೆ, ಡಾ. ಮಾಧವಿ ಎಸ್. ಭಂಡಾರಿ, ಸುನಂದಾ ಕಡಮೆ, ಸುಧಾ ಚಿದಾನಂದಗೌಡ ತಮ್ಮ ಕವನ ಗಳನ್ನು ಓದಿದರು. ಡಾ. ಸುಕನ್ಯಾ ಮಾರುತಿ ಅದ್ಯಕ್ಷತೆ ವಹಿಸಿದ್ದರು. ನುಗ್ಗಿ ಗೌಡ ಅತಿಥಿಗಳಾಗಿದ್ದರು. ಇದಲ್ಲದೆ ಹಲವು ಕವನಗಳ ಗಾನ ಸ್ಪಂದನ ನಡೆಯಿತು. ಈ ಗೋಷ್ಠಿಯ ನಿರ್ವಹಣೆಯನ್ನು ಸಿಂಧು ಹೆಗಡೆ ಮಾಡಿದರು. ಕಾವ್ಯಕ್ಕೆ ಮೀಸಲಾಗಿದ್ದ ಗೋಷ್ಠಿಯಲ್ಲದೆ, ಪ್ರತಿ ಗೋಷ್ಠಿಯಲ್ಲೂ ಎರಡು ಕವಿಗಳ ಕಾವ್ಯಸ್ಪಂದನ ಇದ್ದಿದ್ದು ಸಮಾವೇಶದ ಇನ್ನೊಂದು ವಿಶಿಷ್ಟತೆಯಾಗಿತ್ತು.

ಮಹಿಳಾ ವಿ.ವಿ. ಕುಲಪತಿ ಡಾ. ಸಬಿಹಾ ಭೂಮಿಗೌಡ ಅವರು ಸಮಾರೋಪ ಮಾತುಗಳನ್ನಾಡುತ್ತಾ ‘ನಮ್ಮ ಅನುಭವ ವಿಸ್ತಾರಗೊಳ್ಳಬೇಕು ಅಂದರೆ ನಮ್ಮ ಮಾತು ಮತ್ತು ಬದುಕುಗಳು ಒಂದಾಗಬೇಕು. ಆಗಷ್ಟೇ ನಮ್ಮ ಬರಹ ಸೂಕ್ಷ್ಮಗೊಳ್ಳಲು, ಮೊನಚು ಪಡೆಯಲು ಸಾ ಧ್ಯ’ .. ಈ ಎರಡು ದಿನಗಳ ಕಾಲ ಭಿನ್ನ ವೇದಿಕೆ, ಭಿನ್ನ ವೇದನೆಗಳ ದನಿಯನ್ನು ಇಲ್ಲಿ ಆಲಿಸಿದ್ದೇವೆ. ಅದಕ್ಕೆ ತಕ್ಕಂತೆ ಸಹಿಷ್ಣು - ಅಸಹಿಷ್ಣುತೆಯ ಬದಲಾವಣೆಗಳನ್ನು, ಭವಿಷ್ಯದ ನಡೆಯನ್ನು ರೂಪಿಸಿಕೊಳ್ಳುವುದಕ್ಕೆ ಇಂಬುಕೊಟ್ಟಿದೆ’ ಎಂದು ಕಿವಿಮಾತು ಹೇಳಿದರು. ‘ಇತ್ತೀಚಿನ ವರ್ಷಗಳಲ್ಲಿ ಎಡಪಂಥೀಯರು ಎಲ್ಲೆಗಳನ್ನು ದಾಟಿ ಹೊಸ ಗುಂಪುಗಳನ್ನು ಒಳಗೊಳ್ಳುತ್ತ, ಹೊಸತಲೆಮಾರನ್ನು ತಲುಪುವ ಕೆಲಸ ಮಾಡುತ್ತಿದೆ. ಇದು ಒಳ್ಳೆಯ ಬೆಳವಣಿಗೆ. ವಿವಿಧ ಗುಂಪು - ಕ್ಷೇತ್ರಗಳ ಜೊತೆ ಸಂವಹನಕ್ಕೆ ಸಾಹಿತ್ಯ ಅತ್ಯಂತ ಪರಿಣಾಮಕಾರಿಯಾದ ಮಾಧ್ಯಮ. ಇದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು’ ಎಂದವರು ಹೇಳಿದರು. ಅತಿಥಿಗಳಾಗಿದ್ದ ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್.ವಿಮಲಾ ಮತ್ತು ಅಧ್ಯಕ್ಷತೆ ವಹಿಸಿದ್ದ ಡಾ. ಮೀನಾಕ್ಷಿ ಬಾಳಿ ಅವರೂ ಸಮಾರೋಪದಲ್ಲಿ ಮಾತನಾಡಿದರು.

ಗೋಷ್ಠಿಗಳಲ್ಲಿ ಸಹಿಷ್ಣುತೆಯ ನುಡಿಗಳು

ಈವರೆಗೆ ನನಗೆ ಸಿಕ್ಕಿರೋ ಪ್ರಶಸ್ತಿಗಳು ಜೈಲುವಾಸ, ಗೋಲಿಬಾರ್, ವಿಚಾರಣೆ ಇವೇ ಎಲ್ಲ. ಈ ಬಗ್ಗೆ ನನಗೆ ದುಃಖವಿಲ್ಲ, ಬದಲಿಗೆ ಹೆಮ್ಮೆ ಇದೆ. ಈ ಎಲ್ಲ ಪ್ರಶಸ್ತಿಗಳು ಸಿಕ್ಕಿರೋದು ನನ್ನ ಹೋರಾಟಕ್ಕೆ.

- ವರಲಕ್ಷ್ಮಿ,
ಸಿಐಟಿಯು ರಾಜ್ಯಾಧ್ಯಕ್ಷೆ

ಸ್ತ್ರೀಲಿಂಗ, ಪುಲ್ಲಿಂಗ ಎರಡೂ ಅಲ್ಲದವರು ನಪುಂಸಕಲಿಂಗ ಹೇಗಾಗ್ತಾರೆ? ಮೇಜು, ಕುರ್ಚಿ ಇತ್ಯಾದಿಗಳು ನಪುಂಸಕ - ಅವು ಲಿಂಗವಿಲ್ಲದವು. ನಾವು ಮನುಷ್ಯರು. ಶಿಶ್ನ ಇದ್ದೋನೇ ಗಂಡು. ಯೋನಿ ಇದ್ದೋಳೇ ಹೆಣ್ಣು ಅಂತ ತೀರ್ಮಾನ ಮಾಡಿದವರು ಯಾರು? ಯೋನಿಯಿಲ್ಲದ, ಗರ್ಭವಿಲ್ಲದ, ಮೊಲೆಯಿಲ್ಲದ ಹೆಣ್ಣುಗಳು ನಾವು.

- ಅಕ್ಕೈ ಪದ್ಮಶಾಲಿ

ಒಬ್ಬರನ್ನೊಬ್ಬರು ದ್ವೇಷಿಸುವ ಮೂಲಕ ಯಾರೂ ದೊಡ್ಡವರಾಗಲು ಸಾಧ್ಯವಿಲ್ಲ.

- ಕೆ.ಷರೀಫಾ

* ಬಾಂಬ್‌ಗಳನ್ನು ತಯಾರಿಸುವುದೇ ದೇಶಭಕ್ತಿ ಎನ್ನುವಂತಾಗಿದೆ.
* ಲಿಂಗ, ಜಾತಿ, ಧರ್ಮಗಳ ಮಾರುಕಟ್ಟೆಯಿಂದ ಅಸಹಿಷ್ಣುತೆ ಹೆಚ್ಚುತ್ತಿದೆ.
* ಸ್ತ್ರೀವಾದ ಅಂದ್ರೆ ಪುರುಷವಿರೋಧ ಅಲ್ಲ. ಪುರುಷರಂತೆ ಆಗುವುದು ಕೂಡಾ ಅಲ್ಲ.

- ಡಾ.ಎಚ್.ಎಸ್. ಅನುಪಮಾ

* ವ್ಯವಸ್ಥೆಯೊಳಗಿನ ಕೇಡುಗಳ ವಿರುದ್ಧ ಹೋಗಬೇಕಾದಾಗ ಹೆಣ್ಣು ಕೇಡನ್ನು ನಿರಾಕರಿಸ್ತಾಳೆ ಹೊರತು ವ್ಯವಸ್ಥೆಯನ್ನಲ್ಲ. ಹೆಣ್ಣು ವ್ಯವಸ್ಥೆಯ ಕ್ರೌರ್ಯಗಳನ್ನ ವಿರೋಧಿಸ್ತಾಳೆ ಹೊರತು ವ್ಯಕ್ತಿಯನ್ನಲ್ಲ. ಇದನ್ನು ಹೆಣ್ಣು ಖಚಿತ ನೆಲೆಯಲ್ಲಿ ಮಾಡುತ್ತ ಬಂದಿದ್ದಾಳೆ. ಆದರೆ ಅವಳ ಈ ದನಿಯನ್ನ ಅರ್ಥ ಮಾಡಿಕೊಳ್ಳೋದಕ್ಕೆ ಶತಮಾನಗಳು ಬೇಕಾಯ್ತು. ಹಾಗಿದ್ದೂ ಇನ್ನೂ ಕೆಲವರಿಗದು ಅರ್ಥವಾಗಿಲ್ಲ.
* ಗಂಡಸಿನ ಒಣಪ್ರತಿಷ್ಠೆಯನ್ನ ಮೌಲ್ಯ’ ಎಂಬಂತೆ ಬಿಂಬಿಸಿದರೆ, ಮುಂದೊಂದು ದಿನ ಹೆಣ್ಣು ಅದನ್ನು ಮೌಲ್ಯ ಅಂದು-ಕೊಂಡೇ ತನ್ನದಾಗಿಸಿಕೊಳ್ಳಬಹುದು. ಹಾಗೇನಾದರೂ ಆದರೆ, ಆ ದಿನ ಎಲ್ಲರೂ ‘ಅಸಹಿಷ್ಣುತೆಯ ಸೋಲು’ ಎದುರಿಸಬೇಕಾಗುತ್ತದೆ.

- ಸಬಿತಾ ಬನ್ನಾಡಿ

* ಇಂದಿನ ಸ್ತ್ರೀವಾದಿ ನೆಲೆ ಅತ್ಯಂತ ಮಾನವೀಯ ದೃಷ್ಟಿಯೊಳಗೆ ತನ್ನನ್ನು ತಾನು ಪ್ರಕಟಗೊಳಿಸ್ಕೊಳ್ಳೋದಕ್ಕೆ ಆರಂಭಿಸಿದೆ.
* ಗಾಂಧಿ ವಸಾಹತುಷಾಹಿಯನ್ನು ಎದುರಿಸಿದ್ದು ಸ್ತ್ರೀಪರಿಭಾಷೆಯ ನೆಲೆಯಲ್ಲಿ. ಉಪ್ಪು ಮಾಡಿದ್ದು, ಕಸಬರಿಕೆ ಹಿಡಿದು ಸ್ವಚ್ಛತೆಗೆ ಮುಂದಾಗಿದ್ದು ಇವೇ ಮೊದಲಾದ ಸ್ತ್ರೀ ಪರಿಕರಗಳ ಮೂಲಕ ಸಾಮ್ರಾಜ್ಯಶಾಹಿಯನ್ನೆ ಗಾಂಧೀಜಿ ಅಲುಗಾಡಿಸಿದರು.
* ಕ್ರಿಕೆಟ್ ಮ್ಯಾಚ್‌ಗೆ ಕಾಯುವಂತೆ ಯುದ್ಧಕ್ಕೆ ಕಾದು ಕೂತಿರುವವರು ನಮ್ಮಲ್ಲಿ ಇದ್ದಾರೆ. ಆದರೆ ಒಬ್ಬೇ ಒಬ್ಬ ಮಹಿಳೆ ಇಂಥ ಯುದ್ಧದ ಹಿಂಸೆಯನ್ನು ಬಯಸಲು ಸಾಧ್ಯವಿಲ್ಲ.

- ತಾರಿಣಿ ಶುಭದಾಯಿನಿ

ಗೋವಿನ ಹಾಡಿನ ಅನೇಕ ಪಠ್ಯಗಳಿವೆ. ಅವುಗಳಲ್ಲಿ ಇಂದು ಹೆಚ್ಚಾಗಿ ಬಳಸೋದು ಕೃಷ್ಣಭಟ್ಟರ ಪಠ್ಯ. ನಾನು ಇನ್ನೊಂದು ಪಠ್ಯ ಕೇಳಿದ್ದೇನೆ. ಸೋಲಿಗರ ಮಹಿಳೆಯರು ಹಾಡುತ್ತಾರೆ ಇದನ್ನು. ಈ ಹಾಡಿನಲ್ಲಿ ಹುಲಿ ‘ಕ್ರೂರವ್ಯಾಘ್ರ’ನಲ್ಲ. ಆದರೆ ಗೋವಿನ ಮಮತೆಗೆ ಮರುಗಿ ಪ್ರಾಣ ತೊರೆಯುತ್ತದೆ. ಆದರೆ ನಂತರದಲ್ಲಿ ಸೋಲಿಗರ ಹಾಡು ಮತ್ತೊಂದು ಬಗೆಯಲ್ಲಿ ಸಾಗುತ್ತದೆ. ಹಸು ತನ್ನ ಕರುವಿಗೆ ಹಾಲು ಕುಡಿಸಲು ಹೋದಾಗ ಅದು ಹುಲಿಯ ಮರಿ ಜೊತೆ ಆಟವಾಡ್ತಿರುತ್ತದೆ. ಅಮ್ಮ ಕರೆದಾಗ ಕರು, ‘ಗೆಳೆಯನ ತಾಯಿ ಹುಲಿಯೂ ಬರಲಿ’ ಅನ್ನುತ್ತದೆ. ಎಷ್ಟು ಹೊತ್ತಾದರೂ ಅಮ್ಮ ಹುಲಿ ಬರೋದಿಲ್ಲ. (ಅದು ಅದೇ ಪ್ರಾಣತೊರೆದ ಹುಲಿ). ಇದರಿಂದ ದುಃಖಗೊಳ್ಳುವ ಕರು, ತನ್ನ ತಾಯಿಗೆ ನಿನ್ನ ದೆಸೆಯಿಂದ ಸತ್ತುಹೋಗಿದ್ದು ನನ್ನ ಗೆಳೆಯನ ತಾಯಿ ಎಂದು ಮುನಿಯುತ್ತದೆ. ಕೋಪದಿಂದ ಕೆಚ್ಚಲು ಕಚ್ಚುತ್ತದೆ.
ನಮಗೆ ಬೇಕಿರೋದು ಅಸಹಿಷ್ಣುತೆಯನ್ನು ಪ್ರಚೋದಿಸುವ ಕೃಷ್ಣಭಟ್ಟರ ಪಠ್ಯವಲ್ಲ. ಬೆಸುಗೆಯ ಸೋಲಿಗರ ಪಠ್ಯ.

- ಡಾ.ಸುನಂದಮ್ಮ ಆರ್.

* ಸಮಾನತೆ ಮನುಷ್ಯ - ಮನುಷ್ಯರ ನಡುವೆ ಮಾತ್ರವಲ್ಲ, ಗಂಡು - ಹೆಣ್ಣಿನ ನಡುವೆಯೂ ಇರಬೇಕು. ಇದು ಸಾಧ್ಯವಾಗಬೇಕೆಂದರೆ ಕಾರುಣ್ಯ ಇರಬೇಕಾಗುತ್ತದೆ. ಬುದ್ಧ - ಬಸವರಲ್ಲಿದ್ದಂಥಹ ಕಾರುಣ್ಯ.
* ಮಹಿಳೆಯನ್ನು ಸದಾ ಪರಾವಲಂಬಿಯಾಗಿರಿಸಲು ಮನುವಾದ ಯತ್ನಿಸುತ್ತಿದೆ. ಪರಾವಲಂಬಿ ಜೀವಿಯ ಮಾತುಗಳು ಹಕ್ಕಾಗುವುದು ಹೇಗೆ?

- ಡಾ.ಅನಸೂಯಾ ಕಾಂಬ್ಳೆ
: ನಮ್ಮ ಮಾತು ನಮ್ಮ ಹಕ್ಕು

* ಇಂದು ಮಹಿಳಾ ಚಳವಳಿಯೂ ಸೇರಿದಂತೆ ಚಳವಳಿಗಳೇ ಇಲ್ಲ ಅಂತ ಮತ್ತೆ ಮತ್ತೆ ಹೇಳುವ ಮೂಲಕ ಚಳವಳಿಗಳನ್ನೇ ಇಲ್ಲವಾಗಿಸುವ ಕುತಂತ್ರ ನಡೆಯುತ್ತಿದೆ. ಇದು ಅಮೆರಿಕಾ ಹುಟ್ಟುಹಾಕಿದ ಕುತಂತ್ರ. ಆ ಸುಳ್ಳನ್ನು ಹೇಳುವ ಮೂಲಕ ಅದು ಖಾಲಿತನದ ಭ್ರಮೆಯನ್ನೂ ಚಳವಳಿಯೊಳಗೆ ಬಿಕ್ಕಟ್ಟನ್ನೂ ಹುಟ್ಟುಹಾಕುತ್ತಿದೆ.
* ಹೆಣ್ಣೊಳಗಿನ ತಾಯ್ತನ, ಜೀವ ಕಾರುಣ್ಯ ಜಾಗತಿಕ ಮಟ್ಟದ ದೊಡ್ಡ ಶಕ್ತಿಯಾಗಿ ನಮ್ಮೆದುರು ನಿಂತಿದೆ. ಪರಿವರ್ತನೆ ಉಂಟುಮಾಡುವ ನಿಟ್ಟಿನಲ್ಲಿ ಮಹಿಳೆ ವೈಯಕ್ತಿಕ ತಾಯ್ತನದಿಂದ ಜಾಗತಿಕ ತಾಯ್ತನದತ್ತ ಮುನ್ನಡೆಯಬೇಕಾಗುತ್ತದೆ. ‘ಕೇಸರಿ, ಅತಿರೇಕದ ಹಸಿರುಗಳಿಗೆ ಒಳಗಾಗಲು ನಮ್ಮ ಮನೆಯ ಗಂಡಸರನ್ನ ಬಿಡಲ್ಲ’ ಅಂತ ನಮ್ಮ ಹೆಣ್ಣುಮಕ್ಕಳು ಪಣ ತೊಟ್ಟರೆ ಖಂಡಿತ ಬದಲಾವಣೆ ಸಾಧ್ಯ.

- ಕೆ. ನೀಲಾ

ಸಿನೆಮಾಗಳಲ್ಲಿ ಧೂಮಪಾನ, ಮದ್ಯಪಾನದ ಸನ್ನಿವೇಶಗಳಲ್ಲಿ ’ಶಾಸನ ವಿಧಿಸಿದ ಎಚ್ಚರಿಕೆ’ ನೋಟ್ ಹಾಕಲಾಗುತ್ತೆ. ರೇಪ್, ಈವ್ ಟೀಸ್ ಸನ್ನಿವೇಶಗಳಲ್ಲಿ ಯಾಕಿಲ್ಲ? ಅಂಥ ಸನ್ನಿವೇಶಗಳಲ್ಲೂ ಎಚ್ಚರಿಕೆ ನೋಟ್ ಹಾಕಲು ಆರಂಭಿಸಬೇಕು.

- ಭಾರತಿ ಹೆಗಡೆ

ಮಲ್ಕನ್ ಗಿರಿಯಲ್ಲಿ ನಡೆದ ಪೊಲೀಸ್ ಕಾರ್ಯಾಚರಣೆಯಲ್ಲಿ 24 ನಕ್ಸಲೈಟರು ಹತರಾಗಿದ್ದಾರೆ. ಇನ್ನಾದರೂ ಮಾವೋವಾದದ ಹೆಸರಿನಲ್ಲಿ ನಡೆಸುತ್ತಿರುವ ದುಸ್ಸಾಹಸವನ್ನು ನಕ್ಸಲೈಟರು ಕೈಬಿಡಬೇಕು. ಈ ರೀತಿಯ ಬಂದೂಕಿನ ರೊಮ್ಯಾಂಟಿಸಂನಿಂದ ಸಾಧಿಸಿದ್ದು ಏನೂ ಇಲ್ಲ. ಬದಲಾಗಿ ಇಲ್ಲಿನ ದಮನಿತರ, ಶೋಷಿತರ ಚಳವಳಿಗಳು ಕಳೆದುಕೊಂಡದ್ದು ಅಪಾರ. ಈಗಲಾದರೂ ಕಾಡಿನ ಕ್ರಾಂತಿಯ ಭ್ರಮೆಯನ್ನು ಕೈಬಿಟ್ಟು ವಾಸ್ತವಕ್ಕೆ ತೆರೆದುಕೊಳ್ಳಬೇಕು. ಬಂದೂಕು ಹಿಡಿದು ಪ್ರಭುತ್ವದೊಂದಿಗೆ ಯುದ್ದ ನಡೆಸುವುದು ಅಥವಾ ಕಾರ್ಯತಂತ್ರದ ಭಾಗವಾಗಿ ತಾತ್ಕಾಲಿಕವಾಗಿ ಬಂದೂಕು ಬದಿಗಿರಿಸಿ ದಲಿತ, ದಮನಿತರ ಮಧ್ಯೆ ಭವಿಷ್ಯದ ಯುದ್ದ-ಕ್ಕೆ ಕೇಡರ್ ಗಳನ್ನು ಹುಡುಕುವುದು ಜನ ಚಳವಳಿಗಳಿಗೆ ಹಾನಿಯನ್ನಷ್ಟೆ ಉಂಟುಮಾಡಬಲ್ಲದು.
ಈ ವರಗೆ ಪ್ರಭುತ್ವದ ಬಂದೂಕಿಗೆ ಬಲಿಯಾದ ಕಾರ್ಯಕರ್ತರ ಪಟ್ಟಿಯನ್ನೊಮ್ಮೆ ಅವಲೋಕಿಸಿ. ಮುಖ್ಯವಾಹಿನಿಯಲ್ಲಿದ್ದರೆ ಅವರು ಅಪಾರವಾದದ್ದನ್ನು ಸಾಧಿಸುತ್ತಿದ್ದರು. ಇಂಡಿಯಾ ಇಂದು ಕ್ರೋನಿ ಕ್ಯಾಪಿಟಲಿಸಂನ, ಧರ್ಮಾಂದ ಫ್ಯಾಸಿಸ್ಟರ ಹಿಡಿತಕ್ಕೆ ಈ ಮಟ್ಟಿಗೆ ಸಿಲುಕುತ್ತಿರಲಿಲ್ಲ. ಕಾಲ ಮಿಂಚಿದೆ ಹೌದು, ಆದರೆ ಪೂರ್ಣವಾಗಿಯಲ್ಲ...

- ಮುನೀರ್ ಕಾಟಿಪಳ್ಳ

JANASHAKTHI KANNADA VARA PATRIKE NOV 06, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಶಿರಸಿಯಲ್ಲೊಂದು ಚಾರಿತ್ರಿಕ ಮಹಿಳಾ ಸಮಾವೇಶ



‘ಸಹಿಷ್ಣುತೆ ಎಂಬುದು ಗೆಲುವು’

‘ಸಹಿಷ್ಣುತೆ ಎಂಬುದು ಗೆಲುವು’ ಎಂಬುದು ಒಂದು ಮಹಿಳಾ ಸಮಾವೇಶದ ಹೆಸರಿದ್ದರೆ ನೀವು ಅಂತಹ ಸಮಾವೇಶದಿಂದ ಏನು ನಿರೀಕ್ಷಿಸುತ್ತೀರಿ? ಬಹುಶಃ ಮಹಿಳೆಯರು ಪುರುಷರ ಬಗ್ಗೆ, ತಮ್ಮ ಮೇಲೆ ನಡೆಯುತ್ತಿರುವ ತಾರತಮ್ಯ, ಅನ್ಯಾಯ, ದೌರ್ಜನ್ಯಗಳ ಬಗ್ಗೆ ‘ಸಹಿಷ್ಣು’ಗಳಾಗಿರಬೇಕೆಂಬ ಉಪದೇಶ/ಅಜೆಂಡಾ ಇರಬಹುದು ಅಂತ. ಆದರೆ ಈ ‘ಮಹಿಳಾ ಕರ್ನಾಟಕ ಸಮಾವೇಶ’ದಲ್ಲಿ ನಡೆದದ್ದು ಬೇರೆನೇ. ‘ಸಹಿಷ್ಣುತೆ’ ಮತ್ತು ‘ಗೆಲುವು’ಗಳಿಗೆ ಈ ಸಮಾವೇಶ ಬೇರೆನೇ ಫೆಮಿನಿಸ್ಟ್ ಭಾಷ್ಯ ಬರೆಯಿತು. ಹೆಸರು ಮಾತ್ರವಲ್ಲ ಈ ಸಮಾವೇಶದ ಪರಿಕಲ್ಪನೆಯೇ ವಿಶಿಷ್ಟವಾಗಿತ್ತು. ಮಹಿಳಾ ಸಾಹಿತಿಗಳು, ಚಿಂತಕರು, ಹೋರಾಟಗಾರರು ಹಾಗೂ ಇದ್ಯಾವುದೂ ಅಲ್ಲದ ಸಾಮಾನ್ಯ ಮಹಿಳೆಯರನ್ನು ಒಂದು ಕಡೆಗೆ ತಂದು ಅರ್ಥಪೂರ್ಣ ಸಂವಾದ ಸಾಧ್ಯವಾಗಿಸಿದ್ದು ಬಹುಶಃ ಹಿಂದೆಂದೂ ನಡೆಯದ್ದು. ಆ ಅರ್ಥದಲ್ಲಿ ನಿಜವಾಗಿಯೂ ಚಾರಿತ್ರಿಕ.



ಈ ವಿಶಿಷ್ಟ ಮಹಿಳಾ ಸಮಾವೇಶದ ಗೋಷ್ಠಿಗಳೂ, ಗೋಷ್ಠಿಗಳ ಹೆಸರುಗಳೂ, ಅಲ್ಲಿ ನಡೆದದ್ದೂ ಅಷ್ಟೇ ವಿಶಿಷ್ಟವಾಗಿದ್ದವು. ‘ನಮ್ಮ ಲೋಕ ನಮ್ಮ ಬದುಕು’ ನಲ್ಲಿ ಮಹಿಳೆಯರ ಅನುಭವ ಲೋಕ ತೆರೆದುಕೊಂಡಿತು. ‘ನಮ್ಮ ಅರಿವು ನಮ್ಮ ನಡೆ’ ಮಹಿಳಾ ಚಿಂತಕರ ಚಾವಡಿಯಾಯಿತು. ‘ನಮ್ಮ ಭಾವ ನಮ್ಮ ರಾಗ’ದಲ್ಲಿ ಮಹಿಳೆಯರ ಕಾವ್ಯ ಓದು ಗಾಯನ ಕೇಳಿ ಬಂತು. ‘ನಮ್ಮ ನೋಟ ನಮ್ಮ ನುಡಿ’ ಮಹಿಳಾ ಸಾಹಿತ್ಯದ ಚರ್ಚಾ ವೇದಿಕೆಯಾಯಿತು. ‘ನಮ್ಮ ಮಾತು ನಮ್ಮ ಹಕ್ಕು’ ಮಹಿಳಾ ಚಳುವಳಿಯ ಬಗೆಗಾಗಿತ್ತು. ಜಿ.ಎಸ್. ಎಸ್. ಅವರ ‘ಸ್ತ್ರೀ ಅಂದರೆ ಅಷ್ಟೇ ಸಾಕೆ’? ‘ಕಾವ್ಯರಂಗ’ ಎಂಬ ವಿಶಿಷ್ಟ ಕಲಾಭಿವ್ಯಕ್ತಿಯಲ್ಲಿ ಮೂಡಿ ಬಂತು. ಸಮಾವೇಶದ ಹರವು, ಆಳ ಎಷ್ಟಿತ್ತೆಂದರೆ ಅದನ್ನು ವರದಿ ಮಾಡುವುದು ಕಷ್ಟ. ಕೆಲವು ನೆನಪಿನಲ್ಲಿ ಉಳಿದು ಹೋಗುವ ಕೆಲವರ ಮಾತುಗಳಿಂದಷ್ಟೇ ಅದರ ಅಂದಾಜು ಮಾಡಬಹುದು. ಅಂತಹ ಕೆಲವು ಮಾತುಗಳನ್ನು ಗೋಷ್ಠಿಯಲ್ಲಿ ಕೊಡಲಾಗಿದೆ.

ಸಮಾವೇಶದ ಆಶಯ ಮಾತುಗಳನ್ನಾಡಿದ ಡಾ.ವಿನಯಾ ಒಕ್ಕುಂದ, ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಸಾಧ್ಯವಿರದ ಪರಿಸ್ಥಿತಿ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡರು. ರಾಘವೇಶ್ವರ ಸ್ವಾಮಿ ಅತ್ಯಾಚಾರ ಪ್ರಕರಣದ ಚರ್ಚೆ ಮತ್ತು ಪರಿಣಾಮ, ಬುರ್ಖಾ ಧರಿಸಿ ಬರುವ ವಿದ್ಯಾರ್ಥಿನಿಯರನ್ನು ವಿರೋಧಿಸಿ ಹಿಂದೂ ವಿದ್ಯಾರ್ಥಿಗಳು ಕೇಸರಿ ಶಾಲು ಹೊದ್ದು ಬರುತ್ತಿರುವ ಬೆಳವಣಿಗೆಗಳ ಕುರಿತು ಆತಂಕ ವ್ಯಕ್ತಪಡಿಸಿದರು.

ಉದ್ಘಾಟನಾ ಭಾಷಣ ಮಾಡಿದ ಹಿರಿಯ ಲೇಖಕಿ ಬಾನು ಮುಷ್ತಾಕ್ ಮಾತನಾಡಿ, ‘ಇಂದು ಭಿನ್ನ ಅಭಿಪ್ರಾಯ ಹೊಂದಿರುವುದೇ ದೊಡ್ಡ ಅಪರಾಧವೆಂದೂ ಅದಕ್ಕೆ ಹಣೆಗೆ ಗುಂಡಿಕ್ಕುವುದೇ ಶಿಕ್ಷೆ ಎಂದೂ ಬಹಿರಂಗ ಹೇಳಿಕೆ ನೀಡುವವರ ಮತ್ತು ಅದನ್ನು ಮಾಡಿ ತೋರಿಸುವವರ ನಡುವೆ ನಾವಿದ್ದೇವೆ. ಇಂಥವರ ಅಸಹಿಷ್ಣುತೆಗೆ ಸಹಿಷ್ಣುತೆಯೇ ಮದ್ದು. ಭಿನ್ನಾಭಿಪ್ರಾಯ ಮಾರಕವಲ್ಲ. ಭಿನ್ನತೆಯ ನಡುವೆಯೂ ಸಂವಾದ ಸಾಧ್ಯ ಅನ್ನುವುದನ್ನು ನೆಚ್ಚಿಕೊಂಡವರು ನಾವು. ಭಿನ್ನಾಭಿಪ್ರಾಯಗಳನ್ನು ಗೌರವಿಸುವ, ಟೀಕೆ – ವಿಮರ್ಶೆಗಳನ್ನು ಆರೋಗ್ಯದಿಂದ ಸ್ವೀಕರಿಸುವ ಮನೋಭಾವವನ್ನು ಈ ರೀತಿಯ ಕಾರ್ಯಕ್ರಮಗಳ ಮೂಲಕ ರೂಢಿಗೊಳಿಸಬೇಕು’ ಎಂದರು.

ಅತಿಥಿಗಳಾಗಿದ್ದ ಡಾ.ವಸುಂಧರಾ ಭೂಪತಿ ಅವರು ಮಾತನಾಡಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಡಾ. ಬಂಜಗೆರೆ ಜಯಪ್ರಕಾಶ ವಹಿಸಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಸಿದ್ದಿ ಡಮಾಮಿ ನೃತ್ಯ ಪ್ರದರ್ಶಿಸಲಾಯಿತು. ಉದ್ಘಾಟನಾ ಸಮಾರಂಭದ ನಿರ್ವಹಣೆಯನ್ನು ದೀಪಾ ಹಿರೇಗುತ್ತಿಯವರು ಮಾಡಿದರು.

‘ನಮ್ಮ ಲೋಕ ನಮ್ಮ ಬದುಕು’ ಗೋಷ್ಠಿಯಲ್ಲಿ ಕರ್ನಾಟಕ ಸಿಐಟಿಯು ಅಧ್ಯಕ್ಷರಾದ ಎಸ್.ವರಲಕ್ಷ್ಮಿ ಅವರು ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆಯರ ಮತ್ತಿತರ ಮಹಿಳಾ ಕಾರ್ಮಿಕರ ಹಾಗೂ ದುಡಿಯುವ ಮಹಿಳೆಯರ ಸಾಮಾನ್ಯವಾಗಿ ಬೆಳಕಿಗೆ ಬಾರದ ಅನುಭವ ಲೋಕವನ್ನು ಬಿಚ್ಚಿಟ್ಟರು. ಎಲ್ಲಾ ದುಡಿಯುವ ಮಹಿಳೆಯರ ಡಬ್ಬಲ್ ದುಡಿಮೆಗಳ ದೈನಂದಿನ ಬವಣೆಗಳ, ಮತ್ತು ತಮ್ಮ ಬದುಕು ಉತ್ತಮ ಪಡಿಸಿಕೊಳ್ಳಲು ಹಕ್ಕು ಸಾಧಿಸಲು

ಪುಟ 15 ಕ್ಕೆ

ಸಹಿಷ್ಣುತೆಯ ನುಡಿಗಳು
ಉದ್ಘಾಟನಾ ಗೋಷ್ಠಿಯಲ್ಲಿ

‘ಏಕಸಂಸ್ಕೃತಿಗಿಲ್ಲಿ ಭವಿಷ್ಯವಿಲ್ಲ, ಅದರಲ್ಲಿ ಬದುಕಿಲ್ಲ. ಆದ್ದರಿಂದ ಮುಂದಿನ ಜನಾಂಗವನ್ನು ಬಹುತ್ವದ ವಾರಸುದಾರರನ್ನಾಗಿ ರೂಪಿಸುವುದು ಇಂದಿನ ತುರ್ತು.. ‘ಮಹಿಳೆಯ ಅಸ್ಮಿತೆಯನ್ನೇ ಅಸಹಿಷ್ಣುತೆಯಿಂದ ನೋಡುವ ವರ್ತಮಾನದ ಜೊತೆ ಸಂವಾದ ಸಾಧ್ಯವಾಗಬೇಕು’

– ಬಾನು ಮುಷ್ತಾಕ್

* ‘ಎಲ್ಲಿ ಸಹಭಾಗಿತ್ವ ಇದೆಯೋ ಅಲ್ಲಿ ಹೆಣ್ಣನ್ನು ಕೀಳಾಗಿ ನೋಡಲು ಸಾಧ್ಯವೇ ಇಲ್ಲ. ಹೆಣ್ಣನ್ನು ಅಡುಗೆಮನೆಗೆ ಸೀಮಿತವಾಗಿಸಿದ ನಂತರದಿಂದ ಭೇದಭಾವ ಶುರುವಾಯ್ತು. ಕ್ರಮೇಣ ಸಾಮಾಜಿಕ ಉತ್ಪಾದನಾ ಕ್ಷೇತ್ರದಿಂದ ಆಕೆಯನ್ನು ಹೊರಗಿಡಲಾಯ್ತು.’

* ‘ದೇವರು ಮನುಷ್ಯರ ನಡುವೆ ದ್ವೇಷ ಹುಟ್ಟಿಸುವ ಸಾಧನವಾಗಿದೆಯಾ? ಧರ್ಮ ಅಂದರೆ ಹಿಂದೂ, ಮುಸ್ಲಿಮ್, ಕ್ರೈಸ್ತ ಮೊದಲಾದ ಮತಗಳಲ್ಲ. ಧರ್ಮ ಅಂದರೆ ನ್ಯಾಯ, ಧರ್ಮ ಅಂದರೆ ಮಹೋನ್ನತಿ ಕಾಯಕವೇ ಧರ್ಮ. ಪ್ರೀತಿ ಎಲ್ಲಕ್ಕಿಂತ ದೊಡ್ಡ ಧರ್ಮ. ಈ ಧರ್ಮವನ್ನು ಎಲ್ಲರೂ ಪಾಲಿಸಬೇಕು. ವ್ಯಕ್ತಿಯೊಬ್ಬನನ್ನು ನೋಡಿದಾಗ ಆತನ ಲಾಂಛನವೇ ಕಣ್ಮುಂದೆ ಬರುವುದಾದರೆ, ಅಂಥವರು ಮನುಷ್ಯರೇ ಅಲ್ಲ.’

* ‘ಬೇಟೆಯಾಡುವುದನ್ನು ವಿಜೃಂಭಿಸುವ ಯಾವ ಸಮಾಜವೂ ಸುರಕ್ಷಿತವಲ್ಲ. ಮನುಷ್ಯ ಪ್ರಾಣಿ ಸ್ವರೂಪನಾಗಿದ್ದಾಗ ಬೇಟೆಯಾಡುತ್ತಿದ್ದ. ಬುದ್ಧ, ಕ್ರಿಸ್ತ ಮೊದಲಾದವರನ್ನು ಕಂಡನಂತರವೂ ಬೇಟೆ–ಯಾಡುತ್ತಾರೆಂದರೆ ಅಂಥವರನ್ನು ಮನುಷ್ಯತ್ವದಿಂದ ಹೊರಗಿಡಬೇಕಾಗುತ್ತದೆ’

– ಡಾ. ಬಂಜಗೆರೆ ಜಯಪ್ರಕಾಶ್

ಇಂದು ಸಾಂಸ್ಕೃತಿಕ ಅಶ್ಲೀಲತೆ ಮೂಲಕ ಭಯೋತ್ಪಾದನೆ ಸೃಷ್ಟಿಸಲಾಗ್ತಿದೆ. ಅದನ್ನು ಎದುರಿಸುವ ನಿಟ್ಟಿನಲ್ಲಿ ಬೃಹತ್ ಚಳವಳಿ ರೂಪಿಸಬೇಕಾದ ಅಗತ್ಯವಿದೆ. ‘ರಾಘವೇಶ್ವರ ಸ್ವಾಮಿ ಅತ್ಯಾಚಾರ ಪ್ರಕರಣದ ವಿರುದ್ಧ ರಾಜ್ಯದ ಮಹಿಳೆಯರು ಒಗ್ಗೂಡಿ ಪ್ರತಿಭಟಿಸದೆ ಹೋದದ್ದು ವಿಷಾದನೀಯ’?

– ಡಾ.ವಸುಂಧರಾ ಭೂಪತಿ

ಸಮಾರೋಪದಲ್ಲಿ

‘ಸಹಿಷ್ಣುತೆ ಎಂಬುದು ಗೆಲುವು’ ಎಂದು ಹೇಳುತ್ತಿರುವುದು ಅಸಹಿಷ್ಣುತೆಯನ್ನು ಗರಿಷ್ಠ ಪ್ರಮಾಣದಲ್ಲಿ ಹೊಂದಿರುವ ಮಹಿಳೆಯರಿಗಲ್ಲ, ಒಟ್ಟು ಸಮಾಜಕ್ಕೆ. ನಾವು ಮಹಿಳೆಯರು ಎಷ್ಟೋ ಸಲ ಸಹಿಷ್ಣುತೆಯನ್ನು ಅನಿವಾರ್ಯ ಎಂಬಂತೆ ಪಾಲಿಸಿಕೊಂಡು ಬಂದಿದ್ದೀವಿ. ಹಾಗೆ ಭಾವಿಸಿದ್ದರಿಂದಲೇ ಅದು ನಮಗೆ ಅಸಹಾಯಕತೆಯಂತೆ ಅನ್ನಿಸಿದೆ. ಆದರೆ ವಾಸ್ತವದಲ್ಲಿ ಸಹಿಷ್ಣುತೆಯ ಒಳಗೆ ಗೆಲುವಿನ ಆಶಾಕಿರಣವಿದೆ.. .. ..ಸಹಿಷ್ಣುತೆಯನ್ನು ಮೌಲ್ಯ ಎನ್ನುವುದಾದರೆ ಅದು ಗಂಡು ಹೆಣ್ಣುಗಳಿಬ್ಬರಿಗೂ ಮೌಲ್ಯವಾಗಬೇಕು. ಇಲ್ಲವಾದರೆ ಅದು ದೌರ್ಬಲ್ಯವಾಗಿಬಿಡುತ್ತದೆ. ಆ ಎಚ್ಚರ ಇರಬೇಕು’


– ಸಬಿಹಾ ಭೂಮಿಗೌಡ

‘ಸಮಾನತೆ ಅನ್ನುವುದು ಸಾಧನೆಯ ಸ್ಥಿತಿ ತಲುಪಿದಾಗ ಸಹಿಷ್ಣುತೆಯು ಗೆಲುವಾಗುತ್ತದೆ. ಅದನ್ನು ಸಾಧಿಸುವ ನಿಟ್ಟಿನಲ್ಲಿ ಸೇರುವ, ಕವಲೊಡೆಯುವ, ಮತ್ತೆ ಸೇರುವ, ಕೊನೆಗೊಮ್ಮೆ ಸಾಧನೆಯ ಸಾಗರ ಸೇರುವ ಪ್ರಕ್ರಿಯೆಯೇ ಸಹಿಷ್ಣುತೆಯನ್ನು ಸಾಧ್ಯವಾಗಿಸುತ್ತೆ’

– ಕೆ.ಎಸ್.ವಿಮಲಾ



ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086 Editor : G.V.SRIRAMA REDDY